೧. ವಾಸಸ್ಥಾನದ ಸಮೀಪ ಬಚ್ಚಲು, ಹಟ್ಟಿ, ಪಾಯಖಾನಿ ಮುಂತಾದ್ದು ಇರಿಸದೆ, ದುರ್ವಾಸನೆ ಹುಟ್ಟಿಸುವಂಥಾ ಮಲ, ಕೊಳಕು, ರೊಜ್ಜೆ, ಕೆಸರು, ಕಸ ಮೊದಲಾದ್ದರ ತಿಪ್ಪೆಗಳನ್ನು ಮನುಷ್ಯಸಂಚಾರವಾಗದ ದೂರ ಸ್ಥಳಕ್ಕೆ ವೈದು, ಅಲ್ಲಿ ಹುಗದು ಅಥವಾ ಸುಟ್ಟು ಬಿಡ ಬೇಕು. ಮತ್ತು ಮನೆಯ ಅಂಗಳ, ಹಿತ್ತಲು ಮುಂತಾದ ಸುತ್ತುಮುತ್ತಿನ ಸ್ಥಳವನ್ನು ನಿರ್ಮಲವಾಗಿಯೂ ಒಣಗಲಾಗಿಯೂ ಇರಿಸ ಬೇಕು. ತೋಡು, ತೂಂಬು ಮುಂತಾದದರಲ್ಲಿ ಹೊಲಸೇನೂ ಉಳಿಯದಂತೆ, ಆಗ್ಯಾಗ್ಯೆ ಒಳ್ಳೇ ನೀರು ಹೊಯಿದು ಶುಚಿ ಮಾಡ ಬೇಕು.

೨. ಮನೆಯೊಳಗೆ ಶುದ್ಧ ಘಾಳಿ ಸರಾಗವಾಗಿ ಚಲನೆಯಾಗುವಂತೆ, ಮನೆಯ ಬಾಗಲು ಕಿಟಕಿ ಮುಂತಾದ್ದನ್ನು ಯಾವಾಗಲೂ, ಮುಖ್ಯವಾಗಿ ಒಣ ಘಾಳಿ ಬರುವ ಮಧ್ಯಾಹ್ನದ ಹೊತ್ತಿನಲ್ಲಿ, ಖುಲ್ಲಾ ತೆರದಿಡ ಬೇಕು. ಮನೆಯೊಳಗೂ ಹೊರಗೂ ಆಗ್ಯಾಗ್ಯೆ ಗುಡಿಸಿ, ಎಲ್ಲವನ್ನು ಅಚ್ಚಕಟ್ಟಾಗಿರಿಸ ತಕ್ಕದ್ದು.

೩. ದಿನಂಪ್ರತಿಯಲ್ಲಿಯೂ ಮಿಂದುಕೊಳ್ಳುತ್ತಿರ ತಕ್ಕದ್ದು. ಉಡಿಗೆ ತೊಡಿಗೆಯ ವಸ್ತ್ರಗಳು ಆದಷ್ಟು ಮಡಿಯಾಗಿಟ್ಟು, ದಿವಸಕ್ಕೊಮ್ಮೆಯಾದರೂ ಬದಲಾಯಿಸ ಬೇಕು. ಮತ್ತು ಕೂಡುವಷ್ಟು ಮೈತುಂಬಾ ಹೊದಿಕೆ ಇರ ಬೇಕು. ಆದರೆ ನೆನೆದ ವಸ್ತ್ರ ಹಾಕಿ ಕೊಳ್ಳ ಬಾರದು. ಕೀಳ್ಕರುಳುಗಳು ಬೆಚ್ಚಗಿರುವಂತೆ ಕಿರಿಹೊಟ್ಟೆಗೆ ಒಂದು ಉಣ್ಣೇ ವಸ್ತ್ರದ ಪಟ್ಟೆಯನ್ನು ಬಿಗಿದು ಸುತ್ತಿ ಕೊಂಡಿರ ಬೇಕು.

೪. ಕೊಳಕಾದ್ದೇನಾದರೂ ಕಲತ ನೀರನ್ನು ಕುಡಿಯಲಿಕ್ಕೂ ಅಡಿಗೆಗೂ ಬಳಸ ಬಾರದು. ಇವೆರಡಕ್ಕೂ ತಿಳಿ ಹಾಕಿದ ನೀರನ್ನು ಮಾತ್ರ ಉಪಯೋಗಿಸ ಬೇಕು. ಬಹು ಸ್ವಚ್ಛವಾದ ನೀರಿನಲ್ಲ್ಯಾದರೂ ದೋಷವಿರ ಬಹುದು.

* ೧೮೭೦ನೇ ಇಸವಿ ಡಶಂಬರ ೧೮ನೇ ತಾರೀಕಿನ "ದಕ್ಷಿಣ ಕನ್ನಡ ಜಿಲ್ಲಾ ಗಜೆಟ" ೮೩೪-೩೫ನೇ ಪಾನುಗಳನ್ನು ನೋಡು.

ಸುಲಭ ರೀತಿಯಾಗಿ ನೀರನ್ನು ಗಾಳಿಸಿ ಶುದ್ಧ ಮಾಡ ತಕ್ಕ ಉಪಾಯವೇನಂದರೆ:—ಒಂದು ಮಣ್ಣಿನ ಪಾತ್ರೆಯನ್ನು ಮತ್ತೊಂದರ ಮೇಲಿಟ್ಟು, ಮೇಲಿನ ಪಾತ್ರೆಯ ಅಡಿಯಲ್ಲಿ ಮೂರು ಚಿಕ್ಕ ತೂತುಗಳನ್ನು ಮಾಡಿ, ಅದರಲ್ಲಿ ಮೊದಲಾಗಿ ಚಿಕ್ಕ ಕಲ್ಲುಹರಳುಗಳನ್ನೂ, ಆ ಮೇಲೆ ನಯವಾದ ಹೊಯಿಗೆಯನ್ನೂ, ಕಡೆಗೆ ಇದ್ದಲಿನ ಪುಡಿಯನ್ನೂ ಹಾಸಬೇಕು. ಮೇಲಿನ ಪಾತ್ರೆಯಲ್ಲಿ ನೀರು ಹಾಕಲು, ಅದು ಆ ಹಾಸಿಕೆಗಳೊಳಗಿಂದ ಸೋಸಿ, ಅಡಿಯ ತೂತುಗಳ ದ್ವಾರಾ ಕೆಳಗಣ ಗಡಿಗೆಯಲ್ಲಿ ಸೋರಿ ಇಳಿಯುವದು. ಈ ನೀರು ನಿರ್ದೋಷವಾಗಿ, ಉಪಯೋಗಕ್ಕೆ ತಕ್ಕದ್ದಾಗಿ ಇರುವದು.

೫. ವಾಂತಿಭೇದಿಯ ಉಪದ್ರವು ನೆರೆಕರೆಯಲ್ಲಿದ್ದರೆ, ಆಹಾರ ಪಾನಾದಿಗಳ ವಿಷಯದಲ್ಲಿ ಬಹಳ ಜಾಗ್ರತೆಯಾಗಿರ ಬೇಕು.

a. ತಂಗಳನ್ನ ಉಣ್ಣ ಬಾರದು. ಬೆಲ್ಲವಾಗಲೀ, ಬಹಳ ಮಾಗಿ ಹೋದ ಅಥವಾ ಹಶಿಯಾದ, ಶೀತಕರವಾದ ಅಥವಾ ಹುಳಿಯಾದ ಹಣ್ಣುಹಂಬಲು ಆಗಲೀ, ಬಾಡಿ ಹೋದ ಅಥವಾ ಹುಳಿಯಾದ ಕಾಯಿಪಲ್ಯವನ್ನು ಹಾಕಿ, ಇಲ್ಲವೇ ಕೊಳತ ಅಥವಾ ಒಣಗಿದ ಮೀನು ಯಾ ಇತರ ಮಾಂಸವನ್ನು ಹಾಕಿ ಮಾಡಿದಂಥಾ ಪದಾರ್ಥವನ್ನಾಗಲೀ ತಿನ್ನಲೇ ಬಾರದು. ತಡಿಯಲಿಕ್ಕೆ ಕೂಡುವಷ್ಟು ಉಪ್ಪು ಹಾಕಿ ಊಟ ಮಾಡುವದು ಒಳ್ಳೇದು.

b. ಬಟ್ಟಿ ಹಾಕಿ ತೆಗದ ಮದ್ಯಗಳೆಲ್ಲಾ ವರ್ಜಿಯ ಮಾಡ ಬೇಕು. ಹೊಗೆಸೊಪ್ಪಿನ ಯಾವ ತರದ ಉಪಯೋಗವಾದರೂ ವಿಶೇಷ ಮಾಡ ಬಾರದು. ಮುಖ್ಯವಾಗಿ ಶರೀರ ದಣಿದ ಸಮಯದಲ್ಲಿ ಅಥವಾ ಮೈ ಉಷ್ಣವಾಗಿರುವಾಗ್ಯೆ ಮಿಾರಾಮುಂತಾದ ಶೀತಪಾನಕಗಳಾಗಲೀ ಹುಳಿ ಮದ್ಯಗಳಾಗಲೀ ಕುಡಿಯ ಬಾರದು.

೬. ಅತಿರೇಕ ಆಯಾಸ ಪಡ ಬಾರದು. ಶೀತಕ್ಕೂ ತ್ಯಾವಕ್ಕೂ, ಮುಖ್ಯವಾಗಿ ರಾತ್ರಿಕಾಲದಲ್ಲಿ, ಮೈ ಬಿಟ್ಟು ಕೊಂಡು ಇರ ಬಾರದು. ಒಟ್ಟಾರೆ ಶರೀರದಲ್ಲಿ ವಿಶೇಷ ಶೀತಕ್ಕೂ ವಿಶೇಷ ಉಷ್ಣಕ್ಕೂ ಆಸ್ಪದ ಕೊಡ ಬಾರದು. ಬರಿ ಹೊಟ್ಟೆಯಾಗಿ ಬಿಸಲಿಗೆ ಬೀಳ ಬಾರದು. ಒಂದೇ ಮನೆಯಲ್ಲಿ ಬಹಳ ಜನಸ್ತೋಮವಿರ ಬಾರದು.

೭. ಅನೇಕರು ಒಂದೇ ಕೋಣೆಯಲ್ಲಿ ಮೈಗೆ ಮೈ ತಾಗಿ ಮಲಗ ಬಾರದು. ತ್ಯಾವವಿರುವ ತಗ್ಗಾದ ಕೋಣೆಯಲ್ಲಿ ಆಗಲೀ, ಘಾಳಿಗೆ ತೆರಪಾಗಿರುವ ಕೋಣೆಯಲ್ಲಿ ಆಗಲೀ ಮಲಗಿ ನಿದ್ರೆ ಮಾಡ ಬಾರದು. ಮಲಗುವ ಹಾಸಿಗೆಯನ್ನೂ, ಅದರ ಮೇಲೆ ಹಾಸುವ ಮತ್ತು ಹೊದಗಿಸಿ ಕೊಳ್ಳುವ ವಸ್ತ್ರಗಳನ್ನೂ ದಿನಾಲು ಬಿಸಲಿಗಾಗಲೀ ಬೆಂಕಿಗಾಗಲೀ ಚನ್ನಾಗಿ ಒಣಗಿಸಿ ಇಡ ಬೇಕು. ಈ ಸೋಂಕು ಬಹುಶಾ ಶೀತವೂ ತ್ಯಾವವೂ ಇರುವ ರಾತ್ರಿಕಾಲದಲ್ಲಿ ಹಿಡಿ

ಯುವಂಥಾದ್ದಾದರಿಂದ, ರಾತ್ರಿಗೆ ಮಲಗುವಾಗ ಸಮೀಪ ಎಲ್ಲ್ಯಾದರೂ ಅಗಿಷ್ಟಿ ಇಟ್ಟದ್ದರೆ ಒಳ್ಳೇದು.

೮. ಮಾನಸಿಕವಾಗಲೀ ಶಾರೀರಕವಾಗಲೀ ಚೇತನ ಕುಂದುವಂಥಾ ಯಾವ ಕಾರಣಗಳಿಗೂ ಆಸ್ಪದ ಕೊಡ ಬಾರದು.

೯. ಊರಲ್ಲಿ ವಾಂತಿಭೇದಿ ಉಂಟೆಂತ ತಿಳಿದಿರುವ ಕಾಲದಲ್ಲಿ ಕರುಳುಗಳ ಅಕ್ರಮವೇನಾದರೂ ಆಗುತ್ತಲೆ ತಕ್ಕ ಔಷಧವನ್ನು ತೆಕ್ಕೊಂಡು, ವಾಶಿ ಮಾಡಿಕೊಳ್ಳ ಬೇಕು. ಸೋಂಕು ರೋಗ ಯಾವದೂ ಪ್ರಬಲವಾಗಿರುವ ಸಮಯದಲ್ಲಿ ಸಾಧಾರಣವಾಗಿ ವಿಶೇಷವಲ್ಲವೆಂತ ತೋರುವ ಯಾವ ಚಿಲ್ಲರೆ ಅಸ್ವಸ್ಥವಾದರೂ ಅದಕ್ಕೆ ಇಂಬು ಕೊಡುವಂಥಾದ್ದಾಗುತ್ತದೆ. ಆದ್ದರಿಂದ ಅಂಥಾ ಸಮಯದಲ್ಲಿ ಈ ತರದ ಅಸ್ವಸ್ಥಗಳ ವಿಷಯದಲ್ಲಿಯೂ ತಕ್ಕ ಜಾಗ್ರತೆಯಾಗಿರ ಬೇಕು.

೧೦. ದೇವರ ದಯವಿದ್ದವರು ಮೇಲಿನ ಸೂಚನೆಗಳನ್ನೆಲ್ಲಾ ಲಕ್ಷಿಸಿ ಅನುಸರಿಸಿಕೊಂಡು ಜಾಗ್ರತೆಯಾಗಿದ್ದರೆ, ವಾಂತಿಭೇದಿ ಮುಂತಾದ ಯಾವ ಸೋಂಕು ರೋಗವಾದರೂ ಕೆಡಕಾಗದು. ಅಂಥಾ ಕಾಲದಲ್ಲಿ ಘಾಬರಿಯಾಗುವದು ಹ್ಯಾಗೂ ಒಳ್ಳೇದಲ್ಲ. ಸೃಷ್ಟಿ ಸ್ಥಿತಿ ಲಯಗಳಿಗೆ ಕರ್ತನೂ ಮಹಾ ದಯಾಸಾಗರನೂ ಆಗಿರುವ ದೇವರಲ್ಲಿ ಭಯಭಕ್ತಿಪೂರ್ವಕ ವಿಶ್ವಾಸವನ್ನೂ ಪ್ರೀತಿಯನ್ನೂ ಇಟ್ಟಿರುವದು ಸರ್ವದಾ ಸರ್ವಥಾ ಸರ್ವತ್ರವೂ ಅವಶ್ಯವೂ ಉತ್ತಮವೂ ಆಗಿರುತ್ತದೆ.

II. ವಾಂತಿಭೇದಿಯ ರೋಗವು **ಹಿಡಿದ ಪಕ್ಷಕ್ಕೆ** ಏನೇನು ಮಾಡ ತಕ್ಕದ್ದು?

೧. ಪ್ರಥಮತಾ ಕೀಳ್ಕರುಳುಗಳಲ್ಲಿ ಘರ್ಜನೆಯಾಗುತ್ತಲೇ ಕೆಳಗೆ ಹೇಳಿದ ಔಷಧವನ್ನು ತೆಗದು ಕೊಳ್ಳ ಬೇಕು:

ಪಟಿಕಾರ, ಕಾಚು, ದಾಲಚಿನಿ, ಈ ಮೂರು ಬಗೆಯನ್ನು ಪ್ರತ್ಯಪ್ರತ್ಯೇಕ ಹುಡಿ ಮಾಡಿ, ಒಂದು ಹುಣಸೇ ಬೀಜದಷ್ಟು ಒಂದೊಂದರ ಹುಡಿಯನ್ನು ತೆಗದು, ಒಟ್ಟು ಬೆರಿಸಿ, ಅದಕ್ಕೆ ಸ್ವಲ್ಪ **ಜೇನುತುಪ್ಪ** ಹಾಕಿ ಕಲಸಿ, ಸೇವಿಸುವದು. ಎರಡು ಘಳಿಗೆಯನಂತರ ತಿರಿಗಿ ಹಾಗೇ ಮಾಡಿ ತಕ್ಕೊಂಡು, ಇನ್ನೂ ಅವಶ್ಯವಾದರೆ, ಮತ್ತೊಂದು ಸಾರಿ ತಕ್ಕೊಳ್ಳ ಬಹುದು.

೨. ತರುವಾಯ ಹೋಗುವ ಮಲವು ಗಂಜಿನೀರಿನಂತೆ ಇದ್ದು, ಸ್ವಲ್ಪ ನಾತವಿದ್ದರೆ, ಅಥವಾ ಏನೂ ನಾತವಿಲ್ಲದಿದ್ದರೆ, ರೋಗಿಯು ಮಲಗಿದ ಮಂಚದ ಅಡಿಯಲ್ಲಿ ಸ್ವಲ್ಪ ಹೊಯಿಗೆ ಇರಿಸಿ, ಅದರ ಮೇಲೆ ಜುಲಾಬು ಮಾಡಿಸಿ, ಕೂಡಲೇ ಆ ಹೊಯಿಗೆಯನ್ನು ಅಲ್ಲಿಂದ ವೈದು ಬಿಡ ಬೇಕು. [ಆದರೆ ಅದನ್ನು ಘಾಳಿಗೆ ಬಿಸಾಡದೆ, ಅಥವಾ ಮಣ್ಣಿನಲ್ಲಿ ಹುಗಿಯದೆ, ಸುಟ್ಟು ಬಿಡ ಬೇ

ಕು. ಬೆಂಕಿಗೆ ಚನ್ನಾಗಿ ಶುದ್ಧ ಮಾಡುವ ಗುಣ ಉಂಟು. ಆ ಮಲ ಬೆರೆತ ಮಳಲನ್ನು ಒಂದು ಒಡಕು ಗಡಿಗೆಯಲ್ಲಿ ಹಾಕಿ, ಚನ್ನಾಗಿ ಬಿಶಿಯಾಗುವ ವರೆಗೆ ಕಾಸಿದರೆ ಸೈ] ಮತ್ತು ಸೇವಿಸ ತಕ್ಕ ಔಷಧ ಯಾವದಂದರೆ: ಒಂದು ಹುಣಸೇ ಬೀಜದಷ್ಟು **ಒಳ್ಳೇ ಮೆಣಸಿನ ಹುಡಿ**, ಅಷ್ಟೇ **ಹಿಂಗು**, ಹಿಂಗಿನ ಅರೆವಾಶಿಯಷ್ಟು **ಅಫೀಮು**, ಇವು ಮೂರು ಒಟ್ಟು ಕೂಡುವ ಹಾಗೆ ಚನ್ನಾಗಿ ಮರ್ಧಿಸಿ, ಆ ಮೇಲೆ ೧೨ ಸಮ ಭಾಗಗಳಾಗಿ ವಿಭಾಗಿಸಿ, ಗುಳಿಗೆ ಮಾಡುವದು. ಈ ಮಾತ್ರೆಗಳನ್ನು ಎರಡು ಘಳಿಗೆಗೊಮ್ಮೆ ಒಂದರ ಪ್ರಕಾರ ಗುಣಕರವಾದ ಲಕ್ಷಣ ತೋರುವ ತನಕ ಕೊಡುವದು. ನಾಲ್ಕು ವರ್ಷದ ಮೇಲೆ ಏಳು ವರ್ಷದೊಳಗಿನ ಪ್ರಾಯದ ಮಕ್ಕಳಿಗಾದರೆ, ಅರ್ಧ ಮಾತ್ರೆ ಕೊಟ್ಟರೆ ಸಾಕು. ಆದರೆ ಈ ಮಾತ್ರೆಗಳು ಕೂಸುಗಳಿಗೆ ಕೊಡ ಬಾರದು.

೩. ರೋಗಿಗೆ ವಾಂತಿಯಾದರೆ, ಒಂದಿಷ್ಟು ಸಕ್ಕರೆಯಲ್ಲಿ **ಮಜ್ಜಿಗೆ ಹುಲ್ಲಿನ ಎಣ್ಣೆ**ಯ ೫-೬ ತಟುಕುಗಳನ್ನು ಬಿಟ್ಟು, ಕಲಕಿಸಿ ಕೊಡ ಬೇಕು.

೪. ಕೈಕಾಲು ಕೊಕ್ಕೆ ಕಟ್ಟಿದರೆ, ಸ್ವಲ್ಪ ಎಳ್ಳೆಣ್ಣೆಯನ್ನು ಬಿಶಿ ಮಾಡಿ, ಕೈಕಾಲುಗಳಿಗೆ ಕೆಳಗಿನಿಂದ ಮೇಲಕ್ಕೆ ಚನ್ನಾಗಿ ಉಜ್ಜುತ್ತಿರ ಬೇಕು.

ಎಲ್ಲಾ ಸಂಗತಿಗಳಲ್ಲಿಯೂ **ಸಾಸಿವೇ ಒತ್ತಡ** (ಅಂದರೆ **ಪೋಲ್ಟಿಸ್**) ಮಾಡಿ, ಹೊಟ್ಟೆಗೂ ಎದೆಯ ಎಡಭಾಗಕ್ಕೂ ಹಚ್ಚ ಬೇಕು.

೫. ಅಂಗಾಲುಗಳಿಗೂ ಅಂಗೈಗಳಿಗೂ ಬಿಡದೆ ಶೇಕ ಕೊಡ ಬೇಕು. ಇದಕ್ಕಾಗಿ ಮಳಲನ್ನು ಕಾಸಿ ಬಿಶಿ ಮಾಡಿ, ಒಂದು ಹಳೇ ಬಟ್ಟೆಯ ತುಂಡಿನಲ್ಲಿ ಹಾಕಿ ಗಂಟು ಕಟ್ಟಿ, ಅದರಿಂದ ಶೇಕ ಕೊಡುವದು.

೬. ರೋಗಿಗೆ ವಿಶೇಷ ದಾಹವಿರುವದು; ಇದಿದ್ದರೆ, **ಗಂಜಿಯಾಗಲೀ ಶುಂಠೀ ಕಷಾಯವಾಗಲೀ** ಕೊಡ ಬಹುದು. ಗಂಜಿ ಕೊಟ್ಟರೆ, ಅದರಲ್ಲಿ ಉಪ್ಪು ಹಾಕಿ ಕೊಡ ಬೇಕು.

೭. ನಾಲ್ಕು ಘಳಿಗೆಗೊಂದಾವರ್ತಿ ಒಂದು ಹೊಸತಾದ ಹಶಿ **ಕೋಳಿಮೊಟ್ಟೆ**ಯನ್ನು ಕೊಡ ಬೇಕು. ದನದ ಹಾಲು ಸಹಾ ಬಿಶಿ ಮಾಡಿ ಕೊಡ ಬಹುದು.

೮. ಅಶಕ್ತಿ ಬಹಳವಾದ ಪಕ್ಷಕ್ಕೆ ಹತ್ತೀ ಬೀಜದಷ್ಟು ಒಂದು **ಕರ್ಪೂರದ ತುಂಡ**ನ್ನು ಎರಡು ಘಳಿಗೆಗೊಮ್ಮೆ ನಾಲಿಗೆಯ ತುದೀ ಮೇಲೆ ಇಡ ಬೇಕು.

೯. ಸಾಮರ್ಥ್ಯ ಪೂರ್ಣ ಕುಂದಿದ ಪಕ್ಷಕ್ಕೆ, ಹಿಂದೆ ೧೭ನೇ ಪಾನಿನಲ್ಲಿ ಹೇಳಿದ "ಬ್ರಾಂಡಿ ಮಿಶ್ರ" ಕೊಡ ಬಹುದು. ಇದು ಪ್ರಾಯತಾರತಮ್ಯಾನುಸಾರವಾಗಿ ಎರಡರಿಂದ ಮೂರು ಮೇಜಿನ ಚಮ್ಚು ವರೆಗೆ ಕೊಡ ಬಹುದು. ಮಕ್ಕಳಿಗಾದರೆ, ರೋಗದ ಸ್ಥಿತಿ ನೋಡಿ, ⅓ದಿಂದ ೧⅓ ಮೇಜಿನ ಚಮ್ಚು ವರೆಗೆ ಕೊಡ ಬಹುದು. ರೋಗವು ವಿಾರಿ ಹೋದಲ್ಲಿ ಈ ಮಿಶ್ರವು ಉತ್ತಮ ಶಕ್ತಿವರ್ಧಕ ಔಷಧವಾಗಿರುತ್ತದೆ.

೧೦. ಮೈಲೆಯಾದ ವಸ್ತ್ರದ ಚಿಂದಿಗಳೆಲ್ಲಾ ಸುಟ್ಟು ಬಿಟ್ಟು, ಸುಡಲಿಕ್ಕೆ ಸಂದರ್ಭವಿಲ್ಲದ ಮೈಲೆ ಬಟ್ಟೆಗಳೆಲ್ಲಾ ಕನಿಷ್ಟ ಪಕ್ಷಕ್ಕೆ ಎರಡು ತಾಸು ವರೆಗಾದರೂ ಚನ್ನಾಗಿ ಬೇಯಿಸಿ ಒಗಿಯ ಬೇಕು.

೧೧. ರೋಗಿಯ ಸಮೀಪವಿದ್ದು ಅವನ ಅನುಪಾನ ನೋಡುವಂಥವರು ಹೊರಗೆ ಬರುವಾಗ್ಯೆ, ತಮ್ಮ ಕೈಗಳನ್ನೂ ಮುಖವನ್ನೂ ತೊಳದು, ಬಾಯಿಯಲ್ಲಿ ನೀರು ಹಾಕಿ ಮುಕ್ಕಳಿಸಿ ಬಿಸಾಡಿ, ತಮ್ಮ ವಸ್ತ್ರಗಳನ್ನು ಬದಲಿಸ ಬೇಕು. ಮತ್ತು ಯಾವ ಕಾರಣದಿಂದಾದರೂ ರೋಗಿಯ ಸಮೀಪದಲ್ಲಿ ಸರ್ವಥಾ ಕುಡಿಯಲೂ ಉಣ್ಣಲೂ ಬಾರದು.

೧೨. ರೋಗಿಗೆ ಮಲಗಿಸಿದ ಕೋಣೆಯನ್ನು ಚನ್ನಾಗಿ ಶುಚಿ ಮಾಡದ ಹೊರ್ತು ಅನ್ಯಥಾ ಉಪಯೋಗಿಸ ಬಾರದು.

೧೩. ಈ ವಾಂತಿಭೇದಿ ಹಿಡಿದವನ ಹಾಶಿಗೇ ಬದೀಲಿ ಗುಣವಾಗುವ ಪರ್ಯಂತರ ಗಂಧಕ ಸುಡುತ್ತಾ ಬರುವದು ಬಹಳ ಒಳ್ಳೇದೆಂತಲೂ, ರೋಗವನ್ನು ಒಂದು ವೇಳೆ ಪೂರ್ಣ ಪರಿಹಾರ ಮಾಡ ತಕ್ಕ ಉಪಾಯವೆಂತಲೂ ಇತ್ತಲಾಗೆ ಒಬ್ಬ ವೈದ್ಯರು ತಮ್ಮ ಅನುಭವದ ಮಾತಾಗಿ ತಿಳಿಸಿದ್ದಾರೆ.



☞ "ಶರೀರಚಿಕಿತ್ಸೆ" ಎಂಬ ವಿಷಯವು ಪ್ರಾರಂಭವಾದ ೧೮೭೬ನೇ ಇಸವಿಯ ಪಂಚಾಂಗದ ಪ್ರತಿಗಳು ಪುಸ್ತಕಖಾನೆಯಲ್ಲಿ ಇನ್ನೂ ಸ್ವಲ್ಪ ಮಾತ್ರವೇ ಉಳಿದಿರುವದರಿಂದ, ಬೇಕೆಂದಿರುವವರು ವಿಳಂಬ ಮಾಡದೆ ತರಿಸಿ ಕೊಳ್ಳಲಿ.

ವರ್ತಮಾನಸಂಗ್ರಹವು.

ಹಿಂದು ದೇಶವು.

ಈ ನಮ್ಮ ಹಿಂದು ದೇಶದಲ್ಲಿ ನಡೆಯುತ್ತಿರುವದನ್ನು ಪರ್ಯಾಲೋಚಿಸಿದರೆ, ಆಶ್ಚರ್ಯವು ಹುಟ್ಟುವದೇ ಸರಿ. ಯಾಕಂದರೆ ಅನೇಕ ವರುಷ ಸುತ್ತ ಕಲಹ ಯುದ್ಧಗಳು ಆಗಲಿಲ್ಲ, ವಿದ್ಯೆ ಹೆಚ್ಚುತ್ತದೆ, ತರತರದ ರಸ್ತೆಗಳನ್ನು ಕಟ್ಟುತ್ತಾರೆ, ವ್ಯಾಪಾರವು ಅಭಿವೃದ್ಧಿ ಪಡುತ್ತದೆ, ಕಾಡು ತೋಟವಾಗುತ್ತದೆ, ಪ್ರಜೆಗೆ ಐಶ್ವರ್ಯವು ಸುಲಭವಾಗುತ್ತದೆ, ಪ್ರಜೆಗೆ ಸೌಖ್ಯವನ್ನು ಹುಟ್ಟಿಸಿ ಕೊಡುವ ವಿವಿಧದ ಕೆಲಸ ಮಾಡುತ್ತಾರೆ,—ಒಟ್ಟಿಗೆ ಇಂಗ್ಲಿಷ ಸರ್ಕಾರದ ನೆರಳಿನಲ್ಲಿ ಕೂತು ಕೊಳ್ಳುವವರೆಲ್ಲರಿಗೂ ಬಹು ತಂಪೇ. ಕ್ರೈಸ್ತರಲ್ಲದ ಸರ್ಕಾರದವರ ಕಾಲದಲ್ಲಿ ಎಂದೂ ಹೀಗಾಗಿರಲಿಲ್ಲ. ಕಳೆದ ವರುಷ ವಿಕ್ಟೋರಿಯಾ ಮಹಾರಾಣಿಯವರು ಹಿಂದು ಜನರ ಮೇಲೆ ತಮಗಿರುವ ಅಧಿಕವಾದ ಪ್ರೀತಿಯನ್ನು ತೋರಿಸುವದಕ್ಕೋಸ್ಕರವಾಗಿ ತಮ್ಮ ಚೊಚ್ಚಲು ಮಗನನ್ನಾದರೂ ಈ ದೇಶಕ್ಕೆ ಕಳುಹಿಸಿದರಲ್ಲ? ಅವರ ಮಗನಾದ ಇವರು ಪ್ರಿನ್ಸ್ ಒಫ್ ವೇಲ್ಜ್ ಎನ್ನಿಸುತ್ತಾರೆ. ಇವರು ಈಸವಿಯ ೧೮೪೧ನೆಯ ವರುಷದ ನವಂಬರ ತಿಂಗಳಿನ ೯ನೆಯ ದಿನದಲ್ಲಿ ಹುಟ್ಟಿದರು. ತಮ್ಮ ೧೫ನೆಯ ವರುಷದಲ್ಲಾದರೂ ಅವರು ಪರದೇಶಗಳನ್ನು




ಪ್ರಿನ್ಸ್ ಒಫ್ ವೇಲ್ಜ್ ಎಂಬ ಯುವ ಮಹಾರಾಜರ ಚಿತ್ರವು
(ಅವರ ೧೯ ವರುಷ ಪ್ರಾಯದಲ್ಲಿ ತೆಗೆದದ್ದು).

ನೋಡುವದಕ್ಕಾಗಿ ಹೊರಟು, ಮೊದಲು ಜರ್ಮನಿ ದೇಶ ಸ್ವೀಚ ದೇಶಗಳಿಗೆ, ಬಳಿಕ ಈತಲಿ ದೇಶಕ್ಕೆ ಹೋಗಿ ಬಂದರು. ತರುವಾಯ ತನ್ನ ೧೯ನೆಯ ವರುಷದಲ್ಲಿ ಹಡಗ ಹತ್ತಿ, ದೊಡ್ಡ ಸಮುದ್ರ ದಾಟಿ, ಅಮೆರಿಕ ಖಂಡದ ಉತ್ತರ ಭಾಗಕ್ಕೆ ಗಮಿಸಿ, ಸಕಲ

ವಿಚಿತ್ರಗಳನ್ನು ಕಂಡು ಹಿಂದಿರಿಗಿದರು. ಸ್ವಲ್ಪ ಕಾಲಕ್ಕೆ ಈಚೆ ಅವರ ಬಹು ಒಳ್ಳೇ ತಂದೆಯವರು ತೀರಿ ಹೋದರು. ಇವರು ಇನ್ನು ಜೀವದಿಂದಿರುವಾಗ, ತಮ್ಮ ಚೊಚ್ಚಲು ಮಗನು ಆಸಿಯ ಖಂಡದ ಮೂಡಣ ಶೀಮೆಗಳನ್ನು ಸಹ ಒಮ್ಮೆ ನೋಡಿ ಬರ ಬೇಕೆಂದು, ಅಪೇಕ್ಷಿಸಿದ ಕಾರಣ ತಂದೆಯವರು ಮೃತರಾಗಿ ಬಹಳ ದಿನ ಕಳೆಯದೆ ಪ್ರಿನ್ಸ್ ಒಫ್ ವೇಲ್ಜ್ ಮೂಡಣ ದೆಶೆಗೆ ಹೊರಟು ಹೋಗಿ, ಅತ್ತಿನ ಶೀಮೆಗಳಾದ ಈಜಿಪ್ತನ್ನೂ, ಕ್ರಿಸ್ತನಾಥನು ಅವತರಿಸಿ ಇದ್ದ ಪಲೆಸ್ತೀನವನ್ನೂ, ತುರ್ಕ ಸಂಸ್ಥಾನದ ಸುಲ್ತಾನನ ಪ್ರಧಾನ ಪಟ್ಣವಾಗಿರುವ ಕೊನ್ಸ್ತಂತೀನೊಪೊಲಿಯನ್ನೂ ದಾಟಿ ಬಂದರು. ಆ ಮೇಲೆ ಅವರು ೨೨ ವರುಷದವರಾದಾಗಲೇ ಈಸವಿಯ ೧೮೬೩ನೆಯದರ ಮಾರ್ಚಿ ತಿಂಗಳಿನ ೧೦ನೆಯ ದಿನದಲ್ಲಿ ಅಲೆಕ್ಸಂದ್ರಾ ಎಂಬ ಶ್ರೀಮಂತಳನ್ನು ಮದುವೆ ಮಾಡಿ ಕೊಂಡರು; ಈಕೆ ದೇನ್ಮರ್ಕ ದೇಶದ ಮಹಾಶ್ರೀಮಂತನ ಮಕ್ಕಳಲ್ಲೊಬ್ಬಾಕೆ. ಅವರ ವಿವಾಹದ ಫಲವಾಗಿ ಹಲವು ಮಕ್ಕಳು ಹುಟ್ಟಿ ಅವೆ. ಆದರೆ ಮದುವೆಯಾಗಿ ೫ ವರುಷಗಳು ಹೋದ ಬಳಿಕ ಪ್ರಿನ್ಸ್ ಒಫ್ ವೇಲ್ಜ್ ತಮ್ಮ ಪತ್ನಿ ಕರಕೊಂಡು, ಪ್ರಯಾಣವಾಗಿ ಬೇರೆ ಬೇರೆ ದೇಶಗಳಿಗೆ, ತಾವು ಮೊದಲು ಕಂಡಿದ್ದ ಮೂಡಣ ದೇಶಗಳಿಗೂ ಗಮಿಸಿ, ೬ ತಿಂಗಳು ದೇಶಾಂತರದಲ್ಲಿದ್ದು, ಹಿಂದಕ್ಕೆ ಬಂದರು. ಆಗ ಅವರಿಗೆ ಕಠಿಣ ಜ್ವರವು ಹತ್ತಿದರೂ ದೇವರ ದಯೆಯಿಂದ ಗುಣವಾಗಿ ಉಳಿದರು. ಆ ಕಾಲಕ್ಕಿಂತ ೬ ವರುಷ ಈಚೆ ಅವರು ನಮ್ಮ ಈ ದೇಶದವರಿಗೆ ದರ್ಶನ ಮಾಡುವದಕ್ಕೋಸ್ಕರ ಸೆರಾಪಿಸ್ ಎಂಬ ಹಡಗದಲ್ಲಿ ಹೊರಟು, ೧೮೭೫ನೆಯ ವರುಷದ ನವಂಬರ ತಿಂಗಳಿನ ೯ನೆಯ ದಿನದಲ್ಲಿ ಮುಂಬಯಿ ಪಟ್ಣದ ಬಂದರಿನಲ್ಲಿ ಬಂದು ಶೇರಿದರು. ಅಲ್ಲಿಂದ ಲಂಕಾದ್ವೀಪಕ್ಕೆ ಹೋಗಿ, ಅಲ್ಲಿಂದ ಮದ್ರಾಸಿಗೆ ಬಂದು, ಅಲ್ಲಿಂದ ಬಂಗಾಳ ಮೊದಲಾದ ಅನೇಕ ಹಿಂದು ಶೀಮೆಗಳಿಗೆ ಹೋಗಿ, ೧೮೭೬ನೆಯ ವರುಷದ ಮಾರ್ಚಿ ತಿಂಗಳಿನ ಮಧ್ಯಕಾಲದಲ್ಲಿ ಹಿಂದು ದೇಶವನ್ನು ತಿರಿಗಿ ಬಿಟ್ಟು ಹೋದರು. ಅವರು ಹಿಂದು ದೇಶದಲ್ಲಿಯೂ ಲಂಕೆಯಲ್ಲಿಯೂ ಇದ್ದು ಪ್ರಯಾಣ ಮಾಡಿದ ೪ ತಿಂಗಳುಗಳೊಳಗೆ ಅಲ್ಲಲ್ಲಿಯ ಇಂಗ್ಲಿಷರೂ ಹಿಂದು ಜನರೂ ರಾಜರೂ ಪ್ರಜೆಯೂ ಐಶ್ವರ್ಯವಂತರೂ ಬಡವರೂ ಇವರ ದರ್ಶನಕ್ಕೆ ಪ್ರೀತಿ ಪಟ್ಟು, ಇವರಿಗೆ ತರತರದ ಮಾನ ತೋರಿಸಿದರೆಂದೂ, ಇವರು ಅವರವರನ್ನು ಕಂಡು ಬಹಳ ಸಂತೋಷಗೊಂಡರೆಂದೂ, ವರ್ಣಿಸ ಬೇಕಾಗುವದಿಲ್ಲ; ಅದೆಲ್ಲಾ ಪತಕರ ನೆನಪಿನಲ್ಲಿ ಇನ್ನೂ ಉಂಟಲ್ಲ? ದೇವರ ಆಶೀರ್ವಾದದಿಂದ ಪ್ರಿನ್ಸ್ ಒಫ್ ವೇಲ್ಜರ ದರ್ಶನವು ಎಂದಿಗೂ ಶುಭವಾಗಲಿ!

ಅವರು ಮದ್ರಾಸಿಗೆ ಬರುವದಕ್ಕಿಂತ ಕೆಲವು ದಿವಸ ಮುಂಚೆ ಅಲ್ಲಿಗೆ ಮದ್ರಾಸು ಸಂಸ್ಥಾನದ ಹೊಸ ಅಧಿಪತಿ ಬಂದು ಶೇರಿದ್ದರು; ಇವರ ಹೆಸರು ಡ್ಯೂಕ್ ಒಫ್ ಬಕ್ಕಿಂಘಮ್ ಎಂಬದು. ಪ್ರಿನ್ಸ್ ಒಫ್ ವೇಲ್ಜ್ ಇಂಗ್ಲಂದಿಗೆ ತಿರಿಗಿ ಹೋಗುವಲ್ಲಿ ಲೊರ್ಡ್ ಲಿತ್ತನ್ ಎಂಬ ಹೊಸ ಸರ್ವಾಧಿಪತಿ ಅವರನ್ನು ದಾರಿಯಲ್ಲಿ ಕಂಡು ಮಾತಾಡಿಸಿ ಬಂದರು.



ಪ್ರಿನ್ಸ ಒಫ ವೇಲ್ಸ್ ಎಂಬ ಯುವ ಮಹಾರಾಜರ ಮತ್ತು ಅವರ ಕಳತ್ರಪುತ್ರರ ಚಿತ್ರವು.

(೧೮೬೯ನೇ ಇಸ್ವಿಯಲ್ಲಿ ತೆಗೆದದ್ದು.)

ತುರ್ಕ ರಾಜ್ಯವು.

ತುರ್ಕರ ಸುಲ್ತಾನನು ಆಳುವ ರಾಜ್ಯದ ಸ್ಥಿತಿಗತಿ ದುಃಖ ಹುಟ್ಟಿಸುವಂಥದೇ; ಆ ರಾಜ್ಯವು ದಿವಾಳಿ ತೆಗೆದದಾಗಿದೆ; ಅದಕ್ಕೆ ಸಾಲ ಕೊಟ್ಟವರಿಗೆ ನೇಮಕದ ಬಡ್ಡಿ ಸಲ್ಲಿಸಲಾರದೆ ಹೋಯಿತು. ಇಂಥ ದುರವಸ್ಥೆಗೆ ಒಂದು ವಿಶೇಷವಾದ ಕಾರಣವೇನಂದರೆ, ಸುಲ್ತಾನನ ಅರಮನೆಯ ದೊಡ್ಡ ಜಮಾಖರ್ಚೇ; ಅವನ ಅರಮನೆಯ ಖರ್ಚಿಗೆ ವರುಷಂಪ್ರತಿ ಸುಮಾರು ೨ ಕೋಟಿ ರೂಪಾಯಿ ಹೋಗುತ್ತಿದ್ದವು. ಅವನಿಗೆ ೭೦೦ ಸ್ತ್ರೀಯರೂ, ಇವರನ್ನು ಕಾಯಲಿಕ್ಕೂ ಓಲಗಿಸುವದಕ್ಕೂ ೩೦೦ ಮಂದಿ ನಪುಂಸಕರೂ ಇದ್ದರು. ಈ ರಾಣಿವಾಸಕ್ಕೋಸ್ಕರವಾಗಿ ಸುಲ್ತಾನನು ವರುಷವೊಂದಕ್ಕೆ ४೦ ಸಾವಿರ ಕೊಬ್ಬಿದ ಎತ್ತುಗಳನ್ನು ಕೊಯ್ಯಿಸುತ್ತಿದ್ದು, ದಿನವೊಂದಕ್ಕೆ ೨೦೦ ಕುರಿಗಳನ್ನೂ ೧೦೦ ಆಡುಗಳನ್ನೂ ೧೦ ಹಸುಕರುಗಳನ್ನೂ ೨೦೦ ದೊಡ್ಡ ಕೋಳಿಗಳನ್ನೂ ४೦೦ ಚಿಕ್ಕ ಕೋಳಿಗಳನ್ನೂ ೨೦೦ ಪಾರಿವದ ಹಕ್ಕಿಗಳನ್ನೂ ೫೦ ಬಾತುಕೋಳಿಗಳನ್ನೂ ಕೊಯ್ಯಿಸುತ್ತಿದ್ದನು. ಹಾಗಾದರೆ ದಿವಾಳಿ ತೆಗೆಯುವದಕ್ಕೆ ಬೆರಗೇನು? ಆದರೆ ಯುರೋಪಿನ ರಾಜರೂ ಪ್ರಜೆಯವರೂ ತುರ್ಕ ರಾಜ್ಯದ ಹಾಳಿನ ಇರುವಿಕೆಯನ್ನು ಕಂಡು, ಸುಲ್ತಾನನಿಗೆ ಬೆದರಿಸಿ ಬುದ್ಧಿ ಹೇಳುವವರಾದರು; ಅದಲ್ಲದೆ ಅವನ ಕೆಳಗಿದ್ದ ಹೆರ್ಜೆಗೋವಿನ ಎಂಬ ಶೀಮೆಯವರು, ಕಷ್ಟ ತಾಳಲಾರೆವೆಂದು ಕಾಟಕಾಯಿ ಮಾಡಿದರು. ಇಷ್ಟೆಲ್ಲವನ್ನು ನೋಡಿ, ಈಸವಿಯ ೧೮೭೬ನೆಯ ಜೂನ್ ತಿಂಗಳಲ್ಲಿ ಸುಲ್ತಾನನ ಪ್ರಧಾನ ಮಂತ್ರಿಗಳು ಅವನ ಅಧಿಕಾರ ತೆಗೆದು, ಅವನ ಹಿರಿಯ ಮಗನಿಗೆ ಪಟ್ಟ ಕಟ್ಟಿದರು. ಇದರಿಂದ ಹಿತವಾಯಿತೇನೋ? ಅಧಿಕಾರ ತಪ್ಪಿ ಹೋದ ತಂದೆ ತನ್ನನ್ನು ತಾನೇ ರಕ್ತದ ಒಂದು ನಾಡಿಯನ್ನು ಕೊಯಿದು ಕೊಂದು ಕೊಂಡನು.

ಒಬ್ಬ ತುರ್ಕ ಪಾಚ್ಛನಾಳುವ ಈಜಿಪ್ತ್ ಎಂಬ ದೇಶದ ಜಮಾಖರ್ಚಿನ ವಿಷಯವು ಸಹ ಸಮವಲ್ಲ; ಈ ದೇಶದ ಮೇಲೆಯೂ ದೊಡ್ಡ ಸಾಲವುಂಟು. ಅದನ್ನು ಕೊಂಚವಾಗಿಯೂ ಕಡಿಮೆ ಮಾಡುವದಕ್ಕೋಸ್ಕರ ಪಾಚ್ಛನು ಕಂಡು ಹಿಡಿದ ಉಪಾಯವೇನಂದರೆ, ಹಿಂದು ದೇಶದಿಂದ ಬರುತ್ತಾ ಅದಕ್ಕೆ ಹೋಗುತ್ತಾ ಇರುವ ಹಡಗಗಳ ಮಾರ್ಗವೆಂದು, ತನ್ನ ದೇಶದಲ್ಲಿ ತಾನಲ್ಲದೆ ಬೇರೆ ಮಂದಿ ಸಹ ಪಾಲುಗಾರರಿರುವ ಕಾಲುವೆ ತೋಡಿ ಅದೆಯಲ್ಲ? ತಾನು ತನ್ನ ದೊಡ್ಡ ಪಾಲನ್ನು ಮಾರಿ ಬಿಡುತ್ತೇನೆಂದು, ಅದನ್ನು ಇಂಗ್ಲಿಷ ಸರ್ಕಾರಕ್ಕೆ ४ ಕೋಟಿ ರೂಪಾಯಿಗೆ ಮಾರಿ ಕೊಟ್ಟನು. ಇದು ಒಳ್ಳೆಯ ಕಾರ್ಯವಾಯಿತು. ಆದರೆ ಸದ್ಯಕ್ಕೆ ಸಾಲದ ಪೀಡೆ ಕಡಿಮೆಯಾಗಿದ್ದಾಗ್ಯೂ ಮುಂದೆ ಏನು ಮಾಡ ಬೇಕು? ಈ ಆಲೋಚನೆ ಉಂಟಾಗಿ ಪಾಚ್ಛನು ಯುರೋಪಿನ ರಾಜರ ಹತ್ತರ ತನ್ನ ರಾಜ್ಯದ ಭಂಡಾರದ ವಿಷಯವನ್ನು ಸರಿಗೊಳ್ಳಿಸುವದಕ್ಕೆ ಬುದ್ಧಿಯನ್ನೂ ಸಹಾಯವನ್ನೂ ಬೇಡಿ ಕೊಳ್ಳುವವನಾದನು. ಏನಾಗುವದೋ? ನೋಡೋಣ.

ಯುರೋಪು ಖಂಡವು.

ಇಂಗ್ಲಂದಿನಲ್ಲಿ ವಿಕ್ಟೋರಿಯಾ ರಾಣಿಯವರು ಪಾರ್ಲಿಮೆಂತಿನವರಿಂದ ಹಿಂದು ದೇಶದ ಕೈಸರಳೆಂದರೆ ಮಹಾರಾಣಿ ಎಂಬ ಬಿರುದಿನ ನಾಮವನ್ನು ಪಡಕೊಂಡಿದ್ದಾರೆ.

ಸ್ಪೇನ್ ದೇಶದಲ್ಲಿ ನಡೆಯುತ್ತಿದ್ದ ಯುದ್ಧವು ತೀರಿ ಹೋಯಿತು. ಮದ್ರಿದ್ ಎಂಬ ರಾಜಧಾನಿಯವರು ಆರಿಸಿ ಕೊಂಡ ಅಲ್ಫೊನ್ಸೊ ಎಂಬ ರಾಜನ ದಂಡು ಗೆದ್ದು, ಕರ್ಲೊಸ್ ಎಂಬ ಪ್ರತಿರಾಜನನ್ನು ಓಡಿಸಿ ಬಿಟ್ಟಿತು. ಇವನು ಇಂಗ್ಲಂದಿಗೆ ಹೋಗಿ, ಅಲ್ಲಿ ಮನೆ ಮಾಡಿ ಕೊಂಡಿದ್ದಾನೆ.

ಯುರೋಪು ಖಂಡದ ಜರ್ಮನಿ, ಫ್ರಾಂಚು, ಆಸ್ತ್ರಿಯ, ರಸ್ಸಿಯ, ಈತಲಿ ಮೊದಲಾದ ದೇಶಗಳಲ್ಲಿ ಆದ ಸಂಗತಿಗಳು ಪಠಕರಿಗೆ ವಿಚಿತ್ರವೆನ್ನಿಸುವದಿಲ್ಲ; ಅಲ್ಲಲ್ಲಿ ರಾಜ್ಯದ ಒಳಗಣ ಆಡಳಿತೆಯ ಕಾರ್ಯಗಳು ಸಮಾಧಾನವಾಗಿ ಸಾಗುತ್ತಾ ಬಂದವೆ.

ಅಮೆರಿಕ ಖಂಡದ ಸುದ್ದಿ ಸಹ ಶಾಂತಿಯ ಭಾವದದು. ಅದರ ಉತ್ತರದ ಭಾಗದ ಪ್ರಜಾರಾಜತ್ವಸಂಸ್ಥಾನದಲ್ಲಿ ಬಹು ಕೀರ್ತಿ ಪಟ್ಟ ಸರ್ವಲೋಕದ ವಿಚಿತ್ರವಸ್ತು ದರ್ಶನವು ಆಯಿತು; ಅದಕ್ಕೆ ಎಷ್ಟೆಷ್ಟೋ ದೊಡ್ಡ ದೊಡ್ಡ ಮನೆಗಳನ್ನು ಕಟ್ಟಿದ್ದರು! ಕೆಲವನ್ನು ಹಾಗೆಯೇ ಬಿಟ್ಟು, ಕೆಲವನ್ನು ಕಿತ್ತು ಹಾಕಿದ್ದಾರೆ.

ಸ್ವಸ್ತಿ!

ಎಚ್ಚರಿಕೆಗೆ.

ತಾನು ಮೋಸ ಹೋಗದೆ, ನಷ್ಟಕ್ಕೆ ಗುರಿಯಾಗದೆ ಈ ಲೋಕಾರಣ್ಯವನ್ನು ದಾಟಿ ಹೋಗ ಬೇಕೆಂದಿರುವವನು ತಪ್ಪದೆ ಎಚ್ಚರಿಕೆಯಾಗಿಯೂ ಜಾಗ್ರತೆಯಾಗಿಯೂ ಇರ ಬೇಕು, ಯಾಕಂದರೆ ಮಿಾನಿಗೆ ಎರೆಯಿಟ್ಟು ಗಾಳ ಹಾಕುವಂಥವರೂ, ಪಕ್ಷಿಗಳಿಗೆ ಬಲೆಗಳನ್ನು ಒಡ್ಡುವಂಥವರೂ ಅನೇಕಾನೇಕರೇ. ಜಂಬುಕಗಳು (ನರಿಗಳು) ಹೇರಳವೇ ಇರಲಾಗಿ, ನಾವು ಕುಕ್ಕುಟಗಳು (ಕೋಳಿಗಳು) ಆಗಿರ ಬಾರದು.

ಜಾಗ್ರತೆಯ ವಿಷಯದಲ್ಲಿ ಜನರನ್ನು ಪರೀಕ್ಷೆ ಮಾಡಿ ನೋಡಿದರೆ, ಬಹಳ ಹೆಚ್ಚು ಕಡಿಮೆ ಕಾಣುವದು. ಇಡೀ ಎರಡು ಕಣ್ಣು ಹೊಡದು ನೋಡುವ ಅನೇಕರಿಗೆ ಕಾಣುವಂಥಾದಕ್ಕಿಂತ ಒಂದೇ ಕಣ್ಣು ಮಾತ್ರ ಇಕ್ಕಿ ನೋಡುವಂತಿರುವ ಕೆಲವರಿಗೆ ಬಹಳ ಹೆಚ್ಚು ಕಾಣುವದುಂಟು. ಅನೇಕರಿಗೆ ಕಣ್ಣಿಲ್ಲವೇ ಇಲ್ಲ ಎಂತ ಕಾಣುತ್ತದೆ. ಮತ್ತು ಅನೇಕರಿಗೆ ಒಳ್ಳೇ ಕಣ್ಣಿದ್ದರೂ, ಎಳ್ಳಿನಷ್ಟಾದರೂ ಕಾಣದೆ ಹೋಗದಷ್ಟು ಪರಾಂಬರಿಸಿ ನೋಡುವ ಅಭ್ಯಾಸವಿಲ್ಲಾ. ಮತ್ತು ಕೆಲವರು ಚಾತುರ್ಯವೂ ಯುಕ್ತಿಯೂ ಉಳ್ಳ ಸೂಕ್ಷ್ಮವಿಚಾರಬುದ್ಧಿಶೀಲರಾಗಿ ಯಾವಾಗಲೂ ಎಲ್ಲವನ್ನೂ ಪರೀಕ್ಷಿಸಿ

ನೋಡುವವರಾಗಿದ್ದಾರೆ; ಆದರೆ ಎಲ್ಲಾದರಲ್ಲಿ ಶಂಕಾಸ್ಪದಗಳನ್ನು ಭಾವಿಸಿ ಕೊಂಡು, ಭಯ ಹೇತುವೆಗಳನ್ನು ಕಲ್ಪಿಸಿ, ತಮ್ಮನ್ನು ಸಂಶಯ ಸಂದೇಹಾದಿಗಳಿಂದ ಕಾಡಿಸಿ ಕೊಳ್ಳುತ್ತಿದ್ದಾರೆ. ಮತ್ತೊಬ್ಬರು ಯುಕ್ತಿಚಾತುರ್ಯಹೀನರಾಗಿ, ಬೋಳೆಗಳಾಗಿ, ಕಂಡ ಕಂಡ ಜನರನ್ನು, ಠಕ್ಕರನ್ನಾದರೂ, ನಂಬಿ, ಸುಲಿಗೆಯಾಗುತ್ತಿದ್ದಾರೆ. ಕೆಲವರು ಆಚೆಯದನ್ನು ನೋಡ ಬೇಕೆಂತ ತಮ್ಮ ದೃಷ್ಟಿ ಇಟ್ಟಿಗೇ ಗೋಡೆಯನ್ನಾದರೂ ಊರಿ ಭೇದಿಸುವಷ್ಟು ತೀಕ್ಷ್ಣವಾಗಿ ನೋಡುವವರಾಗಿ, ಕಣ್ಣು ನೋಯಿಸಿ ಕೊಳ್ಳುತ್ತಿರುವಾಗ್ಯೆ ಬೇರೊಬ್ಬರು ಗೋಡೆಯಲ್ಲಿ ಏನಾದರೂ ಸಂದೂ ಬಿರುಕೂ ಇದ್ದ ಜಾಗವನ್ನು ಹುಡುಕಿ, ಆಚೇ ಕಡೇದನ್ನು ಪ್ರಯಾಸವಾಗದೆ ಯಥೇಷ್ಟವಾಗಿ ನೋಡ ಬಲ್ಲಾದವರು. ಕೆಲವರು ಇಟ್ಟಿಗೇ ಭಟ್ಟಿಯ ಬಾಯಿಊ ಬದೀಲಿ ಕಮರಾಗದೆ ಹಗಲೆಲ್ಲಾ ಕೆಲಸ ಮಾಡ ಬಲ್ಲವರು; ಮತ್ತೊಬ್ಬರು ಛಳಿ ಕಾಸಿ ಕೊಳ್ಳಲಿಕ್ಕಾಗಿ ಮಾತ್ರವೇ ಒಲೇ ಬದಿಗೆ ಬಂದಾಕ್ಷಣಕ್ಕೆ ಕೈಗಳನ್ನು ಕಮರಿಸಿ ಕೊಳ್ಳುವರು. ಹೌದಲ್ಲವೋ?

ತನ್ನ ಸ್ವಾನುಭವವನ್ನು ಯಾರೂ ಇತರರಿಗೆ ಕೊಡಲಿಕ್ಕೆ ಕೂಡದು. "ತಲೆ ತಾಗದೆ ಬುದ್ಧಿ ಬಾರದು;" "ಬಿಶಿಯಾಗದೆ ಬೆಣ್ಣೆ ಕರಗದು;" ಹೊಳೆಯಲ್ಲಿ ಬೀಳದೆ ಈಜಾಡುವ ಪಾಠವಾಗದು; ಒಬ್ಬೊಬ್ಬನು ತಾನೇ ಅನುಭವ ಮಾಡಿ, ತಿಳುಕೋ ಬೇಕು. ಆದರೂ ಓದಿ ಕೊಂಡು, ಮನಸ್ಸಿಗೆ ತಂದು ಕೊಳ್ಳುವವರಿಗೆ ಪ್ರಯೋಜನಕ್ಕೆ ಬಾರದೆ ಹೋಗವು ಎಂತ ನಾನು ನಂಬುವಂಥಾ, ನನಗೂ ಅನುಭವವಾಗಿ ಉಪಯೋಗಕ್ಕೆ ಬೀಳುವಂಥಾ ಕೆಲವು ಬುದ್ಧಿಗಳನ್ನು ಪ್ರಸ್ತಾಪ ಮಾಡಿ ಹೇಳುತ್ತೇನೆ.

ಅವರ ಬರೇ ತೋರಿಕೆಯನ್ನೂ ಬಾಯಿಮಾತನ್ನೂ ನೋಡಿದರೆ, ಕೇವಲ ದಗಲ್ಬಾಜಿಗಳೂ ಕಡು ಕಳ್ಳರೂ ಆದಂಥವರಾದರೂ ಬಹಳ ಒಳ್ಳೇ ಸಜ್ಜನರೂ ನಂಬಿಗಸ್ತರೂ ಎಂತ ನೆನಸಿ ಕೊಳ್ಳಲೂ ಹೇಳಲೂ ಬೇಕಾದೀತು. ಆದರೆ ತನ್ನಂಗಡಿಯ ಬಾಗಲಲ್ಲಿ ಬಹಳ ನೀತಿಯನ್ನೂ ಭಕ್ತಿಯನ್ನೂ ವಿಸ್ತರಿಸಿ ಹಾಕಿ ತೋರಿಸುವಂಥವನ ಅಂಗಡಿಯೊಳಗೆ ಅದು ಸಂಗ್ರಹವಾಗಿರದೆ, ಬಹಳ ಕಡಿಮೆಯಾಗಿರುವದೆಂದು ನಿಶ್ಚಯಿಸಿ ಕೊಳ್ಳ ತಕ್ಕದ್ದು. ಬರೀ ಮಾತನ್ನು ಕೇಳಿ, ಮುಖಭಾವವನ್ನು ನೋಡಿ, ಯಾರನ್ನೂ ಮಿತ್ರನೆಂತ ನಂಬಲೂ, ಶೇರಿ ಕೊಳ್ಳಲೂ, ಶೇರಿಸಿ ಕೊಳ್ಳಲೂ ಬಾರದು. ಬಹಳ ಸುಂದರವೆಂತ ತೋರುವ ಪಾಪೋಸಾದರೂ ಪಾದಕ್ಕೆ ತೇದು ಅಥವಾ ಒತ್ತಿ ನೋಯಿಸ ಬಹುದಲ್ಲಾ! ಬಹು ಬಾಯುಪಚಾರ ಮಾಡುವವನಲ್ಲಿ ಇಷ್ಟ ಪಡ ಬೇಡ! "ಕೈಯಲ್ಲಿ ಸಲಾಮು, ಕೊಂಕುಳಲ್ಲಿ ಡೊಂಣೆ" ಇದ್ದವರಿದ್ದಾರೆ. ಬಹು ಮಾತುಗನೂ ವಾಚಾಲ ಶೆಟ್ಟಿಯೂ ಆದವನನ್ನೂ ನಂಬ ಬೇಡ, ಯಾಕಂದರೆ ಬಹಳವಾಗಿ ಮ್ಯಾವ್ಯಾವೆನ್ನುವ ಬೆಕ್ಕು ಸಾಧಾರಣವಾಗಿ ಇಲಿ ಹಿಡಿಯಲಿಕ್ಕೆ ಸುಸ್ತಿಯಾಗಿದೆ. ಹ್ಯಾಗೂ ಯಾರಿಗೂ ಪೂರ್ಣ ವಶವಾಗ ಬೇಡ; "ಒರಳಲ್ಲಿ ಕೂತರೆ, ಒನಿಕೇ ಪೆಟ್ಟು ತಪ್ಪೀತೇ?" ಯಾವಾಗಾದರೂ ಬೀಳದೆ ಹೋಗಲಿಕ್ಕಿಲ್ಲವಲ್ಲಾ!

ನೋಡದೆ ಏನಾದರೂ ಪಾನ ಮಾಡ ಬೇಡ; ಓದದೆ ಯಾವ ದಸ್ತೈವಜಿಗಾದರೂ

ರುಜು ಹಾಕ ಬೇಡ. ರುಜು ಹಾಕುವ ಮೊದಲು ಓದಿಕೊಂಡು, ಬರಹದಲ್ಲಿ ಗೋಪ್ಯಾರ್ಥದ್ದೂ ಮೋಸವಾಗೋದಕ್ಕೆ ಆಸ್ಪದವಾದ್ದೂ ಇಲ್ಲೋ? ಏನೋ? ಎಂಬುವ ವಿಷಯದಲ್ಲಿ ನಿಶ್ಚಯದ ಗೊತ್ತು ಹತ್ತಿಸಿಕೋ ಬೇಕು.

ನೀನು ಕೇವಲ ನಾದಾರಿಯಾಗಿರದೆ, ನಿನಗೆ ಇನ್ನು ಭೂಮಿಗೀಮಿಯಾಗಲಿ, ಮನೆಗಿನೆಯಾಗಲಿ, ಉಡಿಗೆತೊಡಿಗೆಯಾಗಲಿ, ಮಡಿಕೆಗಡಿಗೆಯಾಗಲಿ ಇದ್ದರೆ, ವ್ಯವಹಾರಕ್ಕೆ ಹೋಗ ಬೇಡ, ಯಾಕಂದರೆ ಮೂರ್ಖರೂ ಮೂಢರೂ ಇವರ ತಲೇ ಬುರುಡೆಗಳನ್ನು ವಕೀಲರು ತೆಗೆದು ಕೊಂಡು, ಪಾಯಕ್ಕೆ ಹಾಕಿ, ಮನೆ ಕಟ್ಟಿಸಿ ಕೊಳ್ಳುತ್ತಾರೆ.—ಯಾವ ನಿಮಿತ್ತಕ್ಕಾದರೂ ನೆಲೆಗಾಣದ ನೀರಿನಲ್ಲಿ ಕಾಲನ್ನಿರಿಸಿ ನಡೆಯ ಬೇಡ. ಗೋಣಿ ಚೀಲಕ್ಕೆ ಹಚ್ಚಿದ ಚೀಟನ್ನು ನೋಡಿ, ಕೊಂಡು ಕೊಳ್ಳ ಬೇಡ. ಚೀಲವನ್ನು ಬಿಚ್ಚಿಸಿ, ಸರಕು ಪರಾಂಬರಿಸಿ ನೋಡಿ, ಕ್ರಯ ಮಾಡಿ, ಕೊಂಡುಕೋ; ಯಾಕಂದರೆ ಸರಕುಗಳನ್ನು ಹಗಲಿನ ಬೆಳಕಿಗೆ ತರಿಸಿ, ಪರಾಂಬರಿಸಿ ನೋಡದೆ, ಕ್ರಯ ಕೊಟ್ಟು ತೆಗೆದು ಕೊಳ್ಳುವವನು ಬೇಕೆಂಬ ಹಾಗೆ ದಗೆಗೆ ಗುರಿಯಾಗುತ್ತಾನೆ.—ಸರ್ವಥಾ ಮಾನವನ್ನುಳಿಸಿಕೋ ಬೇಕೆಂತ ಶತಪ್ರಯತ್ನ ಮಾಡದೆ, ಮಾನಭಂಗಕ್ಕೆ ನಾಚದವನಿಗೆ ಹೆದರಿ ಕೊಂಡು, ಆರು ಗಾವುದ ದೂರವಾಗಿರು.—ಆಣೆ ಇಟ್ಟು ಕೊಂಡು, ಅಥವಾ ಶಪಿಸಿ ಕೊಂಡು ಮಾತಾಡುವವನ ಸಂಗತಿಯಲ್ಲಿ ಎಚ್ಚರಿಕೆಯಾಗಿರು. "ಶಾಪ ಹಾಕುವವ ಪಾಪಕ್ಕೆ ಹೆದರ." ಸ್ವಾಮಿದ್ರೋಹಕ್ಕೂ ದೇವದೂಷಣೆಗೂ ಹೆದರದವ ಪಂಚಮಹಾಪಾತಕಕ್ಕೂ ಹೆದರನು.

ಆದರೆ ಯಾರಿಗೂ ಇಡದಷ್ಟು ಜಾಗ್ರತೆ ನಿನಗೆನೇ ಇಡು, ಯಾಕಂದರೆ ನಿನಗೆ ಹೆಚ್ಚಿನ ಮೋಸ ನಷ್ಟಾದಿಗಳನ್ನು ಹತ್ತಿಸುವ ಶತ್ರುಗಳು ಹೊರಗಿರದೆ ನಿನ್ನೊಳಗಿದ್ದಾರೆ: ಷಡ್ವೈರಿಗಳು ನಿನ್ನ ಕಡು ಶತ್ರುಗಳೇ.—ಒಂದು ನೂತನ ಮಾತಾಗಲಿ, ಆಲೋಚನೆಯಾಗಲಿ, ಮತದ ಸಂಗತಿಯಾಗಲಿ ನಮ್ಮ ತಿಳುವಳಿಕೆಗೆ ಬಂದರೆ, ಹಸುರು ಆದ್ದು ಹಸುರು ಹಕ್ಕಿಯೇ ಸೈ ಎಂತ ಹಿಡಿಯಲಿಕ್ಕೆ ಹಾರ ಬಾರದು; ಆದರೆ ಹಸುರು ಆದ್ದು ಹಸುರು ಹಾವು ಎಂತ ಅದರ ಗೊಡವೆಗೆ ಹೋಗದೆ ಬಿಡಲೂ ಬಾರದು: ಹಸುರು ಹಕ್ಕಿಯೋ? ಹಸುರು ಹಾವೋ? ಎಂತ ನೋಡಿ, ಹಸುರು ಹಾವೇ ಎಂತ ತಿಳಿದಾಗ ಬಿಡುವದು, ಹಸುರು ಹಕ್ಕಿಯೇ ಎಂತ ತಿಳುಕೊಂಡ ಮೇಲೆ ಹಿಡಿಯುವದು ವಿಚಾರಬುದ್ಧಿಯ ಕೆಲಸವಾಗುವದು.—ಮೈ ತುಂಬಾ ಚಿನ್ನದಾಭರಣಗಳನ್ನು ಹಾಕಿ ಕೊಂಡು, ತಾನು ಅರಸಿಯೆಂತ ಮೆರೆಮೆರೆದು ಕಾಣಿಸಿ ಕೊಳ್ಳುವವಳು ಬಹಳ ಚಿನ್ನವುಂಟಲ್ಲಾ ಎಂಥೇಳಿ, ಅರಸಿ ಸೈ ಎಂತ ವಿಚಾರಿಸದೆ, ನಂಬಲೂ ಮರ್ಯಾದೆ ಕೊಡಲೂ ಬಾರದು: ಆಕೆಯ ಚಿನ್ನವು ಎರವಿನ ಚಿನ್ನವೋ? ಖಾಸಗತಿ ಚಿನ್ನವೋ? ಎಂತ ವಿಚಾರಿಸಿ, ಖಾಸಗತಿಯೇ ಎಂದು ತಿಳಿದ ಮೇಲೆ ಮಾತ್ರ ಆಕೆ ಅರಸಿ ಸೈ ಎಂತ ಮರ್ಯಾದೆ ಕೊಡ ತಕ್ಕದ್ದು.

ಜಯವಾಗುವ ಮೊದಲು ಎಂದಿಗೂ ಜಯಧ್ವನಿ ಎತ್ತಿ ಹರ್ಷಿಸ ಬೇಡ. ಆಕಳು

ಕರು ಹಾಕುವ ಮೊದಲು ಗಿಣ್ಣ ತೆಗೆದು ಕೊಡುತ್ತೇನೆಂದು ಯಾರಿಗೂ ವಚನ ಕೊಡ ಬೇಡ. ಹೊಗಳಿ ಕೊಳ್ಳಲಿಕ್ಕೆ ಅವಸರ ಪಡ ಬೇಡ. ಹೊಗಳಿ ಕೊಳ್ಳಲಿಕ್ಕೆ ನ್ಯಾಯವಿದ್ದರೆ, ಸಮಯವೂ ಒದಗಿ ಬಂದೀತು.—ತಿಳಿ ನೀರು ಇಲ್ಲದಿರುವಾಗ್ಯೆ ಕಲಕ ನೀರಾದರೂ ಚಲ್ಲಿ ಹಾಕ ಬೇಡ. ಹೆಚ್ಚಿನ ಕೆಲಸಕ್ಕೆ ಮಾರ್ಗವಿಲ್ಲದಿದ್ದರೆ, ಮಣ್ಣು ಹೊರುವ ಕೆಲಸವಾಗಲಿ, ಕಸ ಹೊಡೆಯುವ ಕೆಲಸವಾಗಲಿ, ಅಂಥಾದೊಂದು ಕೆಲಸ ಯಾವದಾದರೂ ಮಾಡು. ಮುಕ್ಕಾಲು ರುಪಿಯಾದರೂ ನ್ಯಾಯವಾಗಿ ಕೈಗೆ ಬರುವದು ಖಾಲಿಯಾಗಿರೋದಕ್ಕಿಂತ ಲೇಸು.—ಹುಚ್ಚನಾಗಲಿ, ಹೋರುವ ಹೋರಿಯಾಗಲಿ, ಮದದಾನೆಯಾಗಲಿ ನಿನಗೆ ದಾರಿಯಲ್ಲಿ ಎದುರು ಬಂದರೆ, ನೀನೇ ತಾಮಸ ಮಾಡದೆ, ದಾರಿ ಬಿಟ್ಟು ಕೊಡು.—ನಾಯಿ ಕಚ್ಚಿದರೆ ಆಗದು, ನೆಕ್ಕಿದರೂ ಆಗದು. ತದೋಪಾದಿಯಲ್ಲಿ ದುರ್ಜನರ ಸಂಗವು ಆಗದ್ದು; ವೈರದಲ್ಲಿ ಅದು ಹ್ಯಾಗೂ ಬೇಡ, ಸ್ನೇಹದಲ್ಲೂ ಬೇಡ.

ಒಡಕು ದೋಣಿಯನ್ನೂ ಮೊಣಕಾಲು ಊನವಾದ ಕುದುರೆಯನ್ನೂ ಏರಿ ಕೊಳ್ಳ ಬೇಡ. ಒಮ್ಮೆಯಾದರೂ ದಿವಾಳಿಖೋರನಾದವನಿಗೆ ಉದ್ದರಿ ಕೊಡ ಬೇಡ. ಒಮ್ಮೆಯಾದರೂ ಹುಸಿಗಾರನಾದವನಿಗೆ ನಂಬಲಿಕ್ಕಾಗದು. ಕುಸಿಯುವ ಗೋಪುರ ಭದ್ರವಾದ ಬಿಡಾರವೋ?—ಅತಿಸ್ನೇಹ, ಅತಿಮರ್ಯಾಧೆ ತೋರಿಸುವವರಿಗೂ ನಂಬದೆ, ಅಂಜ ಬೇಕು. ಮರ್ಯಾದೆಹೀನರೂ ಮುಂಜೋರಿನವರೂ ಆದವರಿಗೆ ಸಹಾಬೇಗ ಶೇರಿಕೆಯಾಗ ಬಾರದು. ಏನಾದರೂ ಸ್ವಾರ್ಥಸಾಧನೆಯಾಗಲಿ, ಯುಕ್ತಿಸಾಧನೆಯಾಗಲಿ ಆಗಲಿಕ್ಕೆ ಸಾಕು ಎಂಬದಾಗಿ ಶಂಕಾಸ್ಪದ ಕಂಡರೆ, ಜಾಗ್ರತೆಯಾಗಿರು.—ಹೆಗ್ಗಣದ ವಾಸನೆ ಕಂಡರೆ, ಬೋನು ಒಡ್ಡಲಿಕ್ಕೆ ತಡ ಮಾಡ ಬೇಡ; ಆದರೆ ಇಲಿಗೆಂತ ಕತ್ತರಿ ಇಡುವಾಗ, ನಿನ್ನ ಬೆರಳಿಗೆ ಹಿಡಿಯದ ಹಾಗೆ ನೋಡಿಕೋ.

ಬಡಾಯಿಗಾರನ ಗೊಡವೆಗೆ ಹೋಗದಿರು; ಯಾಕಂದರೆ ಅವನ ಮಾತೆಲ್ಲಾ ಬರೀ ಜೊಲ್ಲು, ಅವನ ಆಕಳಿನ ಹಾಲು ಬರೇ ಬುರುಗು. ಬಡಾಯಿ ಮಾಡುವವನ ಬಾಯಿಯಲ್ಲಿ ಕಡಾಯಿಯಾದರೂ ಚಿನ್ನವೇ; ಆದರೆ ತಾಂಬ್ರವು ಚಿನ್ನವೆಂತ ನೀನು ನಂಬಿ, ಕ್ರಯ ಕೊಟ್ಟರೆ, ಚಿನ್ನವಾದೀತೇ? ಬಡಾಯಿಗಾರನೂ ಹುಸಿಗಾರನೂ ಅಣ್ಣ ತಮ್ಮಂದಿಯರಾಗಿದ್ಧಾರೆ.

ನಿನ್ನ ಮನಸ್ಸಿನಲ್ಲಿರ ತಕ್ಕವಾದ್ದನ್ನು ಯಾರಿಗೂ ಹೇಳಿ ತಿಳಿಸ ಬೇಡ. ದೇವರಲ್ಲಿ ಮನಃಪೂರ್ವಕ ವಿಶ್ವಾಸವನ್ನಿಟ್ಟು, ಸಮಾಧಾನವಾಗಿರು. ನನ್ನ ಮಿತ್ರರೂ ಹಿತಕಾರಿಗಳೂ ಎಂತ ನೀನು ನಂಬುವಂಥಾ ಜನರಲ್ಲಿಯಾದರೂ ವಿವೇಕವೆಂಬ ತಕ್ಕಡಿಯಲ್ಲಿ ತೂಕ ಮಾಡದ ಭರವಸವನ್ನು ಇಡ ಬೇಡ. ಮನುಷ್ಯರೆಲ್ಲರು, ಯಾರಾದರೂ ಸೈ, ಮನುಷ್ಯರಷ್ಟೇ: ಶಾಶ್ವತರಲ್ಲಾ, ಅಚಂಚಲರೂ ಅಲ್ಲಾ. ಬಹಳ ತೆಳುವಾದ ಹಲಿಗೆ ದೊಡ್ಡ ಭಾರವನ್ನು ತಡೆಯಲಿಕ್ಕೆ ಕೂಡದು. ಸಪೂರ ನೂಲಿಗೆ ದೊಡ್ಡ ದೊಡ್ಡ ವಜ್ಜೆಯನ್ನು ಕಟ್ಟೆ, ತೂಗ ಹಾಕಲಿಕ್ಕಾಗದು. ನಾಲ್ಕು ಜನ ಆಡಿನ ಮೇಲೆ ಹೌದೆ ಹಾಕಿ, ಹತ್ತಿ

ಕೊಂಡು ಸವಾರಿ ಮಾಡುವಾ ಎಂಥೇಳಿದರಾದೀತೇ?—ಆದರೂ ಯಾವಾಗಲೂ ಎಲ್ಲರಲ್ಲಿಯೂ ಸಂಶಯವಿಡ ಬಾರದು. ಸಂಶಯಾನ್ವಿತ ಭಾವವು ಬಹುಶಾ ಹೇಡಿತನದ ಮಗಳು. ಮನುಜರು ದೇವತೆಗಳು ಅಲ್ಲಾ, ನರಪುತ್ರರು ಸುರರು ಅಲ್ಲಾ; ಆದರೆ ದೈತ್ಯರೂ ಅಸುರರೂ ಸಹಾ ಅಲ್ಲಾ. ಪರಂತು ಎಲ್ಲಾ ಮನುಷ್ಯರನ್ನು ಒಂದು ವೇಳೆ ನಂಬಲಿಕ್ಕಾದರೂ, ತಾವು ಭೂಸುರರೂ, ನಿರ್ಜೀವ ವಿಗ್ರಹಕ್ಕೆ ಪ್ರತಿಷ್ಠಿಸಿ, ಪ್ರಾಣಪ್ರದಾನ ಮಾಡ ಸಮರ್ಥರೂ ಎಂಥೇಳಿ ನಂಬಿಸುವ ವಿಪ್ರರನ್ನೂ, ಸುಳ್ಳು ದೇವರುಗಳಿಗೆ ಕಳ್ಳ ಪೂಜಾರಿಗಳಾಗಿರುವ ಹಾರವರನ್ನೂ ನಂಬ ಬಾರದು. ಅಜ್ಞಾನವೆಂಬ ಅಂಧಕಾರವು ಜನರುಗಳ ಕಣ್ಣಿಗೆ ಹಿಡಿಯದಿದ್ದರೆ, ಸುಳ್ಳು ದೇವರುಗಳಿಗೆ ಪ್ರತಿಮೆಗಳಾದ ವಿಗ್ರಹಗಳನ್ನೆಲ್ಲಾ ಒಲೆಗೆ ಹಾಕಿ, ಕಳ್ಳ ಪೂಜಾರಿಗಳ ಮಡಿಕೆಗಳನ್ನು ಅಟ್ಟಕ್ಕೇರಿಸಿ ಬಿಡುತ್ತಿದ್ದರು.

ನನ್ನ ಕಡೇ ಬುದ್ಧೀ ಮಾತು ಏನಂದರೆ: ಕಟ್ಟಕಡೆಗೂ, ಅಂದರೆ ಕರ್ಮವಿಚಾರಣೆಯಲ್ಲಿಯೂ, ನಿಜ ಜ್ಞಾನವೆಂತಲೂ ಪಶ್ಚಾತ್ತಾಪಕ್ಕೆ ಕಾರಣವಾಗದ ಒಳ್ಳೇ ವಿವೇಕಬುದ್ಧಿಯೆಂತಲೂ ಕಂಡು ಬರುವಂಥಾ ಜ್ಞಾನವನ್ನೂ ವಿವೇಕಬುದ್ಧಿಯನ್ನೂ ಪಡಕೊಳ್ಳಿರಿ! ಈ ತರದ ಜ್ಞಾನವೂ ವಿವೇಕಬುದ್ಧಿಯೂ ಜ್ಞಾನಾಕರನೂ ಸತ್ಯಸ್ವರೂಪನೂ ಆದ ವಾಗ್ದೇವರಾಗಿರುವ ಅವತಾರಪುರುಷನಾದ ಯೇಸುಸ್ವಾಮಿಯಲ್ಲಿ ಮಾತ್ರ ಪ್ರಾಪ್ಯವಾಗಿದೆ. ಆದ್ದರಿಂದ ಆತನ ಶರಣಾಗತ ಶಿಷ್ಯಮಂಡಲಿಯನ್ನು ಶೇರಿರಿ!

ಮೂರು ಆಶಾರ್ಥಿಗಳು.

ತಿಮ್ಮನೆಂಬ ಒಬ್ಬ ಪುರುಷನೂ ಅವನ ಹೆಂಡತಿಯಾದ ಕಾವೇರಿ ಎಂಬಾಕೆಯೂ ವಿಶೇಷ ಪಿತ್ರಾರ್ಜಿತಗಳಿಗೆ ಬಾಧ್ಯಸ್ಥರಾಗಿರದಿದ್ದಾಗ್ಯೂ, ಕ್ಷೇಮವುಳ್ಳವರೂ ಜೀವನ ಮಾಡಲಿಕ್ಕೆ ತಕ್ಕ ಅನುಕೂಲಗಳಿದ್ದವರೂ ಆಗಿದ್ದದರಿಂದ, ತಕ್ಕಷ್ಟು ಸುಖದಿಂದಿರುತ್ತಿದ್ದರು. ಆದರೆ ಆಶೆ ಎಂಬ ಮಾರಿ ಬಡಿಯದ ಜನ ಕೊಂಚವೇ ಅಲ್ಲವೋ? ಈ ದಂಪತಿಗಳಿಗೂ ಬೇರೆ ಜನರ ಸ್ಥಿತಿಗತಿ ನೋಡಿ, ತಮ್ಮದು ಸಾಲದೆಂದು ಕಂಡು, ಹೆಚ್ಚಿನದು ಆಗ ಬೇಕೆಂಬ ಆಶೆ ಹುಟ್ಟಿ ಹಿಡಿಯುವಂಥಾದ್ದಾಯಿತು.

ಒಂದಾನೊಂದು ದಿವಸ ಸಾಯಂಕಾಲಕ್ಕೆ ಭೋಜನ ತೀರಿಸಿ ಕೊಂಡು, ಇಬ್ಬರು ಇಷ್ಟಾಲಾಪಿಸುತ್ತಾ ಒಲೆಯ ಹತ್ತರ ಕೂತು ಕೊಂಡು, ಆದರಲ್ಲಿ ಉಳಿದಿದ್ದ ಸ್ವಲ್ಪ ಕೆಂಡದಲ್ಲಿ ಗೇರುಬೀಜಗಳನ್ನು ಹಾಕಿ, ಹುರಿದು, ತಿನ್ನುತ್ತಿರಲಾಗಿ, ಅವರಿಗೆ ಒಬ್ಬ ಅಪ್ಸರಸ್ತ್ರೀಯ ದರ್ಶನವಾಯಿತು. ಈಕೆಯ ದರ್ಶನದಿಂದ ಅವರ ಬದೀಲಿಟ್ಟಿದ್ದ ದೀಪವು ಆರಿ ಹೋಯಿತು. ಆದರೆ ಅವಳ ತೇಜೋಮಯ ಮುಖದಿಂದಲೂ ವಸ್ತ್ರಾಲಂಕಾರದಿಂದಲೂ ಹೊರಟ ಪ್ರಕಾಶದಿಂದ ಅಡಿಗೇಕೋಣೆ ಕತ್ತಲೆಯಾಗದೆ ಶಾನೆ ಬೆಳಕುಳ್ಳದಾ

ಯಿತು. ಆ ದರ್ಶನ ಕಂಡು ಅವರಿಬ್ಬರು ವಿಸ್ಮಯಾತಿಶಯದಿಂದ ಬೆಪ್ಪಾಗಿ ಹೋದರು. ಅವರ ವಿಸ್ಮಯ ಕಂಡು, ಆಕೆ ಸಂತೈಸಿ, ಅತಿ ಇಂಪಾದ ಸ್ವರದಿಂದ ಅಂದದೇನಂದರೆ: "ನಿಮಗೆ ಇಷ್ಟಾರ್ಥವೆಲ್ಲಾ ಒದಗಿ, ಇಷ್ಟಾಪೂರ್ತಿಯಾಗ ಬೇಕೆಂತ ನಾನು ಮಹಾಮೇರು ಪರ್ವತದ ಕುಬೇರ ದಿಶೆಯಿಂದ ಬಂದಿದ್ದೇನೆ. ನೀವು ಮೂರು ಸರ್ತಿ ನಿಮ್ಮ ಆಶೆಯನ್ನು ಹೇಳಿಕೊಂಡು ಬೇಕಾದ್ದನ್ನೆಲ್ಲಾ ಪಡಕೊಳ್ಳ ಬಹುದು. ನೀವು ಆಶಿಸಿ ಹೇಳಿದ್ದು ನಿಮಗೆ ತಪ್ಪದೆ ಪ್ರಾಪ್ತಿಸುವದು."

ಆಕೆಯ ಮಾತನ್ನು ಕೇಳುತ್ತಲೇ ಕಾವೇರಿ ತನಗೆ ಇಂಥಿಂಥಾ ಶೀರೆ, ಶಾಲು ಇತ್ಯಾದಿ ವಸ್ತ್ರಗಳೂ, ಇಂಥಿಂಥಾ ರತ್ನ, ಮುತ್ತು ಮೊದಲಾದ ಒಡವೆಗಳೂ ಶಿಕ್ಕ ಬೇಕೆಂತ ತನ್ನ ಆಶಾರ್ಥವಾಗಿ ಹೇಳಿ ಕೊಳ್ಳಲಿಕ್ಕಾದಳು. ಆದರೆ ತತ್‌ಕ್ಷಣವೇ ಆ ಅಪ್ಸರೆ ತೋರುಬೆರಳು ಎತ್ತಿ—"ಅವಸರ ಬೇಡ! ನಿಧಾನ, ನಿಧಾನ! ಏಳು ದಿನದ ಸಮಯ ಕೊಡುತ್ತೇನೆ. ಈ ಸಮಯದಲ್ಲಿ ಚನ್ನಾಗಿ ವಿವೇಕಬುದ್ಧಿಯಿಂದ ಏನು ಹೇಳಿ ಕೊಳ್ಳಬೇಕೆಂದು ಯೋಚಿಸಿ, ಹೇಳಿರಿ" ಎಂತ ಬುದ್ಧಿ ಹೇಳಿ, ಅದೃಶ್ಯವಾದಳು. ತತ್‌ಕ್ಷಣಕ್ಕೆ ದೀಪವು ತಿರಿಗಿ ಯಥಾ ಪ್ರಕಾರ ಉರಿದು ಪ್ರಕಾಶಿಸಿತು. ಆ ದರ್ಶನ ಹೊಂದಿ ತಿಮ್ಮನಿಗೂ ಕಾವೇರಿಗೂ ಪರಮಾನಂದವೂ ಇಷ್ಟಾಪೂರ್ತಿಯೂ ಆದಂತಾಯಿತಾದಾಗ್ಯೂ, ತಾವು ಏನೇನು ಆಶಿಸಿ ಹೇಳಿ ಕೊಳ್ಳ ಬೇಕೆಂಬುವ ವಿಷಯದಲ್ಲಿ ಅವರ ಮನಸ್ಸಿಗೆ ಸಮಾಧಾನ ಹತ್ತಲೊಲ್ಲದೆ ಹೋದ್ದರಿಂದ, ಅಧಿಕ ಚಿಂತೆಯೂ ಕರಕರೆಯೂ ಹಿಡಿದು ಹೋಗುವಂಥಾದ್ದಾಯಿತು.

ಮರು ದಿನದಲ್ಲಿ ಊಟಕ್ಕೆ ತಯಾರು ಮಾಡುವ ಯೋಚನೆ ಹಿಡಿಯ ಬೇಕಾದ ಹೊತ್ತಿನಲ್ಲಿ ಕಾವೇರಿ ಎಂದಿನಂತೆ ಒರಳಲ್ಲಿ ಅಕ್ಕಿ ಹಾಕಿ, ಒನಿಕೆ ಹಿಡಿದು ಕೊಂಡು ಕುಟ್ಟ ಬೇಕಾಯಿತು. ಅಂಗಳದಲ್ಲಿ ಹೀಗೆ ಕುಟ್ಟುತ್ತಿರಲಾಗಿ ಅವಳಿಗೆ ಹಶಿವೆಯೂ ಬಾಯಾರಿಕೆಯೂ ಆಯಿತು. ಆಗ ಅವಳು—"ನನಗೊಂದು ಚಲೋ ಸೀತಾಫಲ ತಿನ್ನಲಿಕ್ಕೆ ಶಿಕ್ಕಿದರೆ ಆಗುತ್ತಿತ್ತು" ಎಂದಂದು ಕೊಂಡಳು. ತತ್‌ಕ್ಷಣಕ್ಕನೇ ಒರಳಿನ ಬದೀಲಿ ಒಂದು ದಿವ್ಯ ಸೀತಾಫಲ ಬಿದ್ದು ಕೊಂಡು ಕಾಣುವಂಥಾದ್ದಾಯಿತು. ಅದನ್ನು ಕಂಡು ಅವಳು—"ಅಯ್ಯೋ! ಪಾಪ! ಈಗ ಅವಿಚಾರದ ಕೆಲಸವಾಯಿತು. ಈಗ ಇನ್ನು ಎರಡು ಸಾರಿ ಮಾತ್ರ ಆಶಾರ್ಥ ಹೇಳಿ ಕೊಂಡು ಪಡಕೊಳ್ಳಲಿಕ್ಕೆ ಅನುವು ಅದೆ. ನಾನೆಂಥಾ ಹುಚ್ಚಿ!" ಎಂತ ಬಹಳ ಪಶ್ಚಾತ್ತಾಪ ಪಟ್ಟಳು.

ಅವಳ ಗಂಡನು ಆದ ಸಂಗತಿಯನ್ನು ತಿಳಿದು, ಕನಕವೃಷ್ಟಿಯ ಕಾಲದಲ್ಲೇ ಎಮ್ಮೆ ಶಗಣಿಗೆ ಹೋದ ಹುಚ್ಚಿಯಂತಾದ ಹೆಂಡತೀ ಮೇಲೆ ಬಹಳ ಶಿಟ್ಟುಗೊಂಡು—"ನಿನ್ನ ನಾಸಾಗ್ರದಲ್ಲಿ (ಮೂಗಿನ ತುದಿಯಲ್ಲಿ) ಒಂದು ಸೀತಾಫಲ ಜೋಲ ಬಿದ್ದದ್ದಾದರೆ ಆಗುತ್ತಿತ್ತು" ಎಂತ ಬಾಯಿ ಬಿಡುತ್ತಲೇ, ಆಕೆಯ ನಾಸಾಗ್ರದಿಂದ ಒಂದು ದೊಡ್ಡ ಸೀತಾಫಲ ಹುಟ್ಟಿ, ಜೋಲ ಬೀಳುವಂಥಾದ್ದಾಯಿತು.

ಅದನ್ನು ಕಾಣುತ್ತಲೇ ಇಬ್ಬರು ಕಂಗೆಟ್ಟು ಹೋದಂತಾದರು. ಈಗ ಎರಡು ಸರ್ತಿ

ಆಶಾರ್ಥ ಹೇಳಿಕೊಂಡು ಪಡಕೊಂಡ ಸಂಗತಿಯಾಯಿತು; ಆದರೆ ಪಡಕೊಂಡದೇನು? ಹೆಂಡತಿಗೊಂದು ಕೇವಲ ಅಪೂರ್ವ ಮೂಗುತಿಯಲ್ಲದೆ ಹೆಚ್ಚಿನ ಲಾಭವೇನೂ ಶಿಕ್ಕಲಿಲ್ಲಾ! ಅಯ್ಯಯ್ಯೋ! ನಮ್ಮ ಗ್ರಹಚಾರ! ಎಂಥೇಳಿ, ಮೂರನೇ ಆಶಾರ್ಥವಾಗಿ—"ಈ ಅಪೂರ್ವ ಮೂಗುತಿ ತಿರಿಗಿ ಹೋಗ ಬೇಕೆಂದು ಬೇಡಿ ಕೊಳ್ಳಲಿಕ್ಕಲ್ಲದೆ, ಹೆಚ್ಚಿನ ಬಿನ್ನಹಕ್ಕೆ ಇನ್ನು ಅನುಕೂಲವಿಲ್ಲಾ" ಎಂದಂದು ಕೊಂಡು, "ಮೂಗು ತಿರಿಗಿ ಸಮವಾಗಲಿ!" ಎಂತ ಬೇಡಿ ಕೊಳ್ಳಲು, ಆ ಅಪೂರ್ವ ಮೂಗುತಿ ತಿರಿಗಿ ಕಾಣದೆ ಹೋಯಿತು.

ಈ ಪ್ರಕಾರ ಮೂರು ಸಾರಿ ತಮ್ಮ ಆಶಾರ್ಥ ಹೇಳಿ ಕೊಂಡು, ಇಷ್ಟಾಪೂರ್ತಿ ಪಡಕೊಳ್ಳಲಿಕ್ಕೆ ಅನುವು ಹೊಂದಿದ್ದಾಗ್ಯೂ, ಅವಿವೇಕದಿಂದಲೂ ದುಡುಕಿನಿಂದಲೂ ಎಲ್ಲವನ್ನು ಕೆಡಿಸಿ ಕೊಂಡ ತಿಮ್ಮ ಕಾವೇರಿಯವರು ಒಬ್ಬರನ್ನೊಬ್ಬರು ನೋಡಿ, ತಮ್ಮ ಅಪ್ರಬುದ್ಧಿಗೂ ಆಶಾಮಾರಿತನಕ್ಕೂ ನಾಚಿ ಕೊಂಡು, ತಮ್ಮ ಶಿಟ್ಟನ್ನು ಬರಿದು ಬಾಯಿಯದವಡೇ ಮೂಲದಲ್ಲಿ ಅಣಗಿಸಿ ಕೊಂಡು, ತಮ್ಮ ಸ್ಥಿತಿಯಲ್ಲಿ ಸಮಾಧಾನವಾಗಿರ ಕಲಿತು ಕೊಳ್ಳ ಬೇಕಾಯಿತು.

ಪಾಠಕನೇ! ಪಾಠಕಳೇ! ನಿನಗೂ ಇದ್ದದಕ್ಕಿಂತ ಹೆಚ್ಚೂ ಹೆಚ್ಚಿನದೂ ಬೇಕು ಎಂಬುವ ಆಶೆಯುಂಟೋ? ಇದ್ದರೆ, ನನ್ನ ಮಾತಿಗೆ ಲಕ್ಷ್ಯವಿಡು; ಯಾವ ಮಾತಿಗಂದರೆ: ನೀನು ಎಷ್ಟೋ ಆಶೆ ತಾಳಿದರೂ, ನಿನಗೆ ಆಶಾಪೂರ್ತಿಗೆ ಮಾರ್ಗ ಸಹಾ ಆದರೂ, ನಿನಗೆ ಬುದ್ಧಿ, ವಿವೇಕ, ಭಕ್ತಿ, ಇವು ಇಲ್ಲದಿದ್ದರೆ, ಪ್ರಯೋಜನವೇನು? ಏನೂ ಪ್ರಯೋಜನವಾಗದು. ಆದ ಕಾರಣ ನೀನು ಒಂದು ಮಾಡು; ಏನಂದರೆ: ದೇವರು ನಿನಗೆ ಸಾಕೆಂಬುವ ಮನಸ್ಸನ್ನೂ, ಹೆಚ್ಚು ವಿವೇಕವನ್ನೂ, ಹೆಚ್ಚು ಭಕ್ತಿಯನ್ನೂ, ಹೆಚ್ಚು ಆಶೀರ್ವಾದವನ್ನೂ ದಯ ಪಾಲಿಸ ಬೇಕೆಂದು ಆತನನ್ನು ಬೇಡಿಕೋ!

ಮೂರು ಗಣಿತಾಭ್ಯಾಸಗಳು.

೧. ಒಬ್ಬಾನೊಬ್ಬ ಸ್ತ್ರೀ ಹಣ ಮಾಡ ಬೇಕೆಂತ ತನ್ನ ಮನೆಯ ಬದೀಲಿಯ ಮಾವಿನ ಮರದಲ್ಲಿ ಬೆಳೆದ ಮಾವಿನ ಹಣ್ಣುಗಳನ್ನು ಮಂಕರಿಯಲ್ಲಿ ಹಾಕಿ, ಸಂತೆಗೆ ಹೊತ್ತು ಕೊಂಡು ಹೋಗಿ, ಮಾರಲಿಕ್ಕಾಗಿ ಕೂತಳು. ಒಬ್ಬ ಬ್ರಾಹ್ಮಣಿ ಬಂದು, ಆಕೆಯ ಮಂಕರಿಯಲ್ಲಿದ್ದ ಹಣ್ಣುಗಳ ಅರೆವಾಶಿಯನ್ನಲ್ಲದೆ ಬಾಕಿ ಹಣ್ಣುಗಳ ಇನ್ನೊಂದರ ಅರೆವಾಶಿಯನ್ನೂ ಕ್ರಯಕ್ಕೆ ತೆಗೆದು ಕೊಂಡಳು. ಬಳಿಕ ಇನ್ನೊಬ್ಬಳು ಬಂದು, ಬಾಕಿಯ ಅರೆವಾಶಿಯನ್ನೂ ಇನ್ನೊಂದು ಹಣ್ಣಿನ ಅರೆವಾಶಿಯನ್ನೂ ಕೊಂಡು ಕೊಂಡಳು. ತದನಂತರ ಮೂರನೆಯವಳಾಗಿ ಒಬ್ಬಳು ಬಂದು, ಬಾಕಿಯ ಅರೆವಾಶಿಯನ್ನೂ ಇನ್ನೊಂದು ಹಣ್ಣಿನ ಅರೆವಾಶಿಯನ್ನೂ ಕ್ರಯ ಕಟ್ಟಿ, ತೆಗೆದು ಕೊಂಡಳು. ಕಡೆಗೆ ನಾಲ್ಕನೆಯವಳೊಬ್ಬಳು ಬಂದು, ಅಂದಿನ ಬಾಕಿಯ ಅರೆವಾಶಿಯನ್ನೂ ಇನ್ನೊಂದು

ಹಣ್ಣಿನ ಅರ್ಧಾಂಶವನ್ನೂ ಕೊಂಡುಕೊಂಡಳು. ಆದರೆ ಈ ಪ್ರಕಾರ ನಾಲ್ಕಾವರ್ತಿ ಒಂದೊಂದು ಸಾರಿ ಒಂದೊಂದು ಹಣ್ಣಿನ ಅರ್ಧ ಹೋಳು ಸಹಾ ಮಾರಾಟವಾದಾಗ್ಯೂ, ಆ ಹೆಂಗಸು ಒಂದು ಹಣ್ಣನ್ನಾದರೂ ಹೋಳು ಮಾಡದೆ ಮಾರಿದಳು. ಆ ನಾಲ್ಕು ಜನರು ಕೊಂಡು ಕೊಂಡಷ್ಟು ಹಣ್ಣುಗಳು ಹೋದ ಮೇಲೆ ಆ ಹೆಂಗಸಿನ ಮಂಕರಿಯಲ್ಲಿ ಇನ್ನೊಂದು ಹಣ್ಣು ಉಳಿದಿತ್ತು. ಹಾಗಾದರೆ ಅವಳು ಸಂತೆಗೆ ಹೊತ್ತು ಕೊಂಡು ಹೋದ ಹಣ್ಣುಗಳು ಎಷ್ಟಾಗಿದ್ದವು?

೨. ಎರಡು ಜನ ಕುರುಬರವರು ದಾರಿಯಲ್ಲಿ ಒಬ್ಬರಿಗೊಬ್ಬರು ಶಿಕ್ಕಿದಾಗ, ಪುಟ್ಟಪ್ಪನೆಂಬವನು ಹನುಮಂತಪ್ಪನೆಂಬವನ ಕುರಿಗಳನ್ನು ನೋಡಿ, ಹನುಮಂತಪ್ಪನಿಗೆ—ನಿನ್ನ ಕುರಿಗಳೊಂದನ್ನು ನೀನು ನನಗೆ ಕೊಟ್ಟು ಬಿಡುವದಾದರೆ, ನಿನಗುಳಿಯುವ ಕುರಿಗಳ ಎರಡು ಪಾಲಷ್ಟು ನನಗೆ ಶಿಕ್ಕಿದ ಹಾಗಾದೀತು ಎಂತ ಹೇಳಿದ್ದಕ್ಕೆ, ಹನುಮಂತಪ್ಪನು ಪುಟ್ಟಪ್ಪನಿಗೆ ಪ್ರತ್ಯುತ್ತರವಾಗಿ—ಆದರೆ ನೀನು ನಿನ್ನ ಕುರಿಗಳಲ್ಲೊಂದನ್ನು ನನಗೆ ಕೊಟ್ಟು ಬಿಡುವದಾದರೆ, ನಿನಗುಳಿಯುವಷ್ಟು ಕುರಿಗಳು ನನಗೆ ಶಿಕ್ಕಿದ ಹಾಗಾದೀತು ಎಂಥೇಳಿದನು. ಹಾಗಾದರೆ ಪುಟ್ಟಪ್ಪನಿಗೆ ಇದ್ದ ಕುರಿಗಳು ಎಷ್ಟು? ಹನುಮಂತಪ್ಪನಿಗಿದ್ದವುಗಳು ಎಷ್ಟು?

೩. ಏಳು ಜನ ಮಗಂದಿಯರಿದ್ದ ಗೃಹಸ್ಥನೊಬ್ಬನು ಮುಪ್ಪಾಗಿ, "ಹುಟ್ಟಿದಾಗ ಅಣ್ಣ ತಮ್ಮಂದಿಯರು, ಬೆಳದಾಗ ದಾಯಾದಿಗಳು" ಎಂಬ ಗಾದೆಯನ್ನು ನೆನಸಿ ಕೊಂಡು, ತಾನು ತೀರಿ ಕೊಂಡ ಮೇಲೆ ಮಗಂದಿಯರಿಗೆ ವ್ಯಾಜ್ಯಕ್ಕೆ ಆಸ್ಪದವಾಗ ಬಾರದು ಎಂತಾ ತನ್ನಾಸ್ತಿಯನ್ನು ಶಾಸನರೂಪವಾಗಿ ಪಾಲಿಟ್ಟು, ಬರ ಕೊಟ್ಟ ವಿಧಿಯು ಹ್ಯಾಗಂದರೆ: "ನನ್ನಾಸ್ತಿಯಲ್ಲಿ ಹಿರೀ ಮಗನಿಗೆ ಮೊದಲು ಇಡೀ ೧೦೦ ರೂಪಾಯಿಯೂ ಬಾಕಿಯ ೮ನೇ ಅಂಶವೂ, ಎರಡನೇ ಮಗನಿಗೆ ಬಾಕಿಯಲ್ಲಿ ೨೦೦ ರೂಪಾಯಿಯೂ ಉಳಿದ ಬಾಕಿಯ ೮ನೇ ಅಂಶವೂ, ಮೂರನೇ ಮಗನಿಗೆ ಅಂದಿನ ಬಾಕಿಯಲ್ಲಿ ೩೦೦ ರೂಪಾಯಿಯೂ ಬಾಕಿಯ ೮ನೇ ಅಂಶವೂ, ನಾಲ್ಕನೆಯವನಿಗೆ ಬಾಕಿಯಲ್ಲಿ ೪೦೦, ಐದನೆಯವನಿಗೆ ೫೦೦, ಆರನೆಯವನಿಗೆ ೬೦೦ ರೂಪಾಯಿಗಳೂ ಅಷ್ಟಷ್ಟು ಹೋದ ಬಾಕಿಯ ಎಂಟೆಂಟನೇ ಅಂಶವೂ, ಕಿರೀ ಮಗನಿಗೆ ಕಡೇ ಬಾಕಿಯೆಲ್ಲವೂ ಬರ ತಕ್ಕದು."

ಈ ಪ್ರಕಾರ ಪಾಲಿಟ್ಟು ಬರ ಕೊಟ್ಟವನ ಬದುಕಿನ ಬಾಳು ಎಷ್ಟು ರೂಪಾಯಿಯದು? ಪ್ರತಿಯೊಬ್ಬ ಮಗನಿಗೆ ಶಿಕ್ಕಿದ ಪಿತ್ರಾರ್ಜಿತ ಪಾಲು ಎಷ್ಟು?

ಮೂರು ಸವಾಲಿಗೆ ಒಂದೇ ಜವಾಬು.

ಒಬ್ಬ ಕಾಜಿಯ ಬಳಿಗೆ ಮುಸಲಮಾನರವನೊಬ್ಬನು ಬಂದು, ಮೂರು ಪ್ರಶ್ನೆಗಳನ್ನು ಹಾಕಿ ಕೇಳಿದ್ದೇನಂದರೆ: ೧. "ದೇವರು ಸರ್ವವ್ಯಾಪಕನೆಂಬ ಮಾತಿಗೆ ಆಧಾರ

ವೇನು? ಆತನು ಎಲ್ಲೆಲ್ಲಿಯೂ ಇರುವವನಾಗಿದ್ದರೆ, ನನಗೆ ಕಾಣ ಬೇಕಿತ್ತಲ್ಲಾ! ಆತನನ್ನು ನನಗೆ ತೋರಿಸು! ೨. ದೇವರು ಎಲ್ಲವನ್ನು ನಡಿಸುವ ಸರ್ವಕರ್ತನಾಗಿರಲಾಗಿ, ಮನುಷ್ಯನು ಸ್ವತಂತ್ರವಿಲ್ಲದೆ ಮಾಡುವ ಪಾಪಕ್ಕೆ ಶಿಕ್ಷೆ ಹೊಂದುವ ನ್ಯಾಯವೇನು? ೩. ತಾನೇ ಬೆಂಕಿಯಾಗಿರುವ ಸೈತಾನನನ್ನು ದೇವರು ಹ್ಯಾಗೆ ನರಕದ ಬೆಂಕಿಯಲ್ಲಿ ಹಾಕಿ ದಂಡಿಸ ಬಹುದು? ಬೆಂಕಿಯಿಂದ ಬೆಂಕಿಯಾದ್ದಕ್ಕೆ ಹ್ಯಾಗೆ ವೇದನೆಯಾಗ ಬಹುದು?"

ಈ ಮೂರು ಪ್ರಶ್ನೆಗಳನ್ನು ಲಾಲಿಸಿ ಆ ಕಾಜಿ ಒಂದು ಮಣ್ಣೆಂಟೆಯನ್ನು ತೆಗದು, ಪ್ರಶ್ನೆ ಹಾಕಿ ಕೇಳಿದವನ ತಲೆಗೆ ಬಹು ಜೋರಿನಿಂದ ಬೀಸಿ ತಗಲಿಸಿ ಬಿಟ್ಟನು. ಈ ತರದ ಜವಾಬಿಗೆ ಆ ಮನುಷ್ಯನು ಕಡು ಕೋಪಗೊಂಡು, ಕೊತ್ತವಾಲನ ಹತ್ತರ ಹೋಗಿ, ಕಾಜಿಯ ಮೇಲೆ ಫಿರ್ಯಾದಿ ಹಾಕಿದನು. ಕಾಜಿಯನ್ನು ಕರಿಸಿ ಕೊತ್ತವಾಲನು—"ಈ ಮನುಷ್ಯನ ಸವಾಲಿಗೆ ನೀನು ಜವಾಬು ಕೊಡದೆ, ಮಂಡೆಗೆ ಮಣ್ಣೆಂಟೆಯನ್ನೆಸದು ಹೊಡದ ನ್ಯಾಯವೇನು?" ಎಂತ ಕೇಳಿದ್ದಕ್ಕೆ ಆ ಕಾಜಿ ಪ್ರತ್ಯುತ್ತರವಾಗಿ ಹೇಳಿದ್ದೇನಂದರೆ: "ನಾನು ಮಣ್ಣೆಂಟೆಯನ್ನು ಅವನ ಮಂಡೆಗೆಸದು ತಗಲಿಸಿದ್ದೇ ಅವನ ಸವಾಲಿಗೆ ತಕ್ಕ ಜವಾಬು. ನಾನು ಬೀಸಿ ಹೊಡದ ಮಣ್ಣೆಂಟೆಯಿಂದ ತನಗೆ ತಲೇ ನೋವಾಯಿತೆಂದು ಅವನು ಈಗ ಫಿರ್ಯಾದಿ ತಂದು ಹೇಳಿದನಲ್ಲಾ! ಅವನ ತಲೇ ನೋವು ಎಲ್ಲಿ? ಅದು ಕಾಣದು: ಅದನ್ನು ತೋರಿಸಲಿ! ಅದನ್ನು ನನಗೆ ತೋರಿಸಿದರೆ, ನಾನು ಅವನಿಗೆ ದೇವರನ್ನು ತೋರಿಸುತ್ತೇನೆ. ಅದಲ್ಲದೆ ನನ್ನ ಮೇಲೆ ಫಿರ್ಯಾದಿ ಹಾಕಿದ್ದು ಯಾಕೆ? ಸ್ವತಂತ್ರಿಯಾಗಿರದೆ ಕೇವಲ ದೇವಾಧೀನನಾದ ನಾನು ಅವನಿಗೆ ಹೊಡದ್ದಲ್ಲಾ: ದೇವರೇ ಹೊಡಿಸಿದ್ದು. ನಾನೇ ಹೊಡದ್ದಾದರೂ, ಫಿರ್ಯಾದಿಗೆ ನ್ಯಾಯವೇನು? ನಾನು ಬೀಸಿ ಹೊಡೆದ್ದು ಮಣ್ಣೇ. ಅವನೂ ಮಣ್ಣಲ್ಲವೋ? ಮಣ್ಣು ಮಣ್ಣಿಗೆ ಏನು ಮಾಡೀತು? ಬೆಂಕಿಯಿಂದ ಬೆಂಕಿಯಾದ್ದಕ್ಕೆ ವೇದನೆಯಾಗಲಿಕ್ಕೆ ಕೂಡದಿದ್ದರೆ, ಮಣ್ಣಿನಿಂದ ಮಣ್ಣಿಗೆ ನೋವಾಗಲಿಕ್ಕೂ ಕೂಡದು.

ಈ ಜವಾಬು ಕೊತ್ತವಾಲನಿಗೂ ಪ್ರಶ್ನೆ ಹಾಕಿ ಕೇಳಿದವನಿಗೂ ಸಾಕಾಗಿ, ಸಮಾಧಾನ ಕೊಟ್ಟಿತಂತೆ.

೪೧ನೇ ಪಾನಿನಲ್ಲಿ ಹಾಕಿರುವ ಗಣಿತಾಭ್ಯಾಸದ ಪ್ರಶ್ನೆಗಳಿಗೆ ಉತ್ತರಗಳು.

೧. ಮೊದಲಿನ ಪ್ರಶ್ನೆಗೆ ಉತ್ತರ ಕೊಡ ಬೇಕಾದರೆ, ಒಂದೊಂದು ಸಾರಿ ಮಾರಿ ಹೋದಷ್ಟು ಮಾವಿನ ಹಣ್ಣುಗಳು ಹೋದ ಮೇಲೆ ಒಂದೊಂದು ಸಾರಿ ಒಂದೊಂದು ವಿಷಮ ಸಂಖ್ಯೆಯನ್ನು ಉಳಿಸಿ ಕೊಡುವಂಥಾದೊಂದು ವಿಷಮ ಸಂಖ್ಯೆಯನ್ನು ಊಹಿಸಿ ಹುಡುಕ ಬೇಕು. ಅಂಥಾದಾದ ವಿಷಮ ಸಂಖ್ಯೆ ಮುವ್ವತ್ತೊಂದು ಎಂಬದೇ.

ಮುವ್ವತ್ತೊಂದು ಹಣ್ಣುಗಳ ಅರೆವಾಶಿಯೂ ಇನ್ನೊಂದು ಹಣ್ಣಿನ ಅರ್ಧ ಹೋಳೂ ಕೂಡಿ ೧೬ ಹಣ್ಣು ಆಗುತ್ತದೆ. ೧೬ ಹಣ್ಣು ೩೧ರಿಂದ ಹೋಗಿ, ೧೫ ಉಳಿಯುವದು. ಈ ಬಾಕಿಯ ಅರೆವಾಶಿಯೂ ಇನ್ನೊಂದು ಹಣ್ಣಿನ ಅರೆವಾಶಿಯೂ ೮ ಆಗಿ, ೧೫ರಿಂದ ಹೋದ ಮೇಲೆ ೭ ಉಳಿಯಿತು. ೭ರ ಅರೆವಾಶಿಯೂ ಒಂದರ ಅರ್ಧಾಂಶವೂ ೪ ಆಗಿ ಹೋದ ಮೇಲೆ ೩ ಉಳಿಯಿತು. ೩ರ ಅರೆವಾಶಿಯೂ ಒಂದರ ಅರೆವಾಶಿಯೂ ೨ ಆಗಿ ಹೋದ ಮೇಲೆ ೧ ಉಳಿಯಿತು.

೨. ಪುಟ್ಟಪ್ಪನಿಗೆ ೭, ಹನುಮಂತಪ್ಪನಿಗೆ ೫ ಕುರಿಗಳಿದ್ದದರಿಂದ ಹನುಮಂತಪ್ಪನು ಪುಟ್ಟಪ್ಪನಿಗೆ ೧ ಕೊಟ್ಟದಾದರೆ, ಹನುಮಂತನ ಕುರಿ ನಾಲ್ಕಾಗಿ, ಪುಟ್ಟಪ್ಪನವು ೮ ಆಗುತ್ತಿದ್ದವು; ಪರಂತು ಪುಟ್ಟಪ್ಪ ಹನುಮಂತಪ್ಪನಿಗೆ ೧ ಕೊಟ್ಟದಾದರೆ, ಅವನವು ೬, ಇವನವೂ ೬ ಆಗುತ್ತಿದ್ದವು.

(ಬುದ್ಧಿ! ಒಂದಿಷ್ಟು ಇದ್ದವನಿಗೆ ಒಂದಿಷ್ಟು ಹೆಚ್ಚು ಶಿಕ್ಕಿದರೆ, ಬೇಗನೆ ಹೆಚ್ಚಿಕೆಯಾಗಿ, ಬಹಳವಾಗುತ್ತದೆ; ಹಾಗೂ ಒಂದಿಷ್ಟು ಇದ್ದವನು ಅದರದು ಒಂದಿಷ್ಟು ಕೊಟ್ಟು ಬಿಟ್ಟರೆ, ಅಥವಾ ಕಳಕೊಂಡರೆ, ಸ್ವಲ್ಪದರಲ್ಲಿ ಬಹಳ ಹೆಚ್ಚು ಕಡಿಮೆಯಾಗಿ, ಬಹಳ ತಪ್ಪಿ ಹೋದ ಹಾಗಾಗ ಬಹುದು. ಅಲ್ಲವೋ? ತಮ್ಮಾ! ಹಾಗಾದರೆ ನಿನಗಿದ್ದ ಒಂದಿಷ್ಟನ್ನು ಕಳಕೊಳ್ಳದೆ, ಸ್ವಲ್ಪದರಲ್ಲಿಯೂ ಸುಲಭವಾಗಿಯೂ ಒಂದಿಷ್ಟಕ್ಕೆ ಒಂದಿಷ್ಟನ್ನು ಕೂಡಿಸಿ, ಹೆಚ್ಚಿಸುವ ವಿವೇಕಿಯಾಗು! ಸಮುದ್ರವೇ ಆಗೋ ಸಂಗತಿ ಹ್ಯಾಗೆ? ನದಿಗೆ ನದಿ, ಹೊಳೆಗೆ ಹೊಳೆ, ಹಳ್ಳಕ್ಕೆ ಹಳ್ಳ ಕೂಡುವ ಸಂಗತಿಯಲ್ಲವೋ? ಹಳ್ಳವಾಗೋ ಸಂಗತಿ ಹ್ಯಾಗೆ? ಹನಿಗೆ ಹನಿ ಕೂಡೋದೇ! ಅಲ್ಲವೋ?)

೩. ಮೂರನೇ ಪ್ರಶ್ನೆಗೆ ಉತ್ತರವನ್ನು ಸಂಕ್ಷೇಪದಲ್ಲಿ ಕೊಡುತ್ತೇನೆ. ಅದರ ಹೆಚ್ಚಿನ ವಿವರವನ್ನು ಓದುವವರು ತಾವೇ ನೋಡಿ ಕೊಂಡು, ಮಾಡಿಕೊಳ್ಳಲಿ!

ಆ ಗೃಹಸ್ಥನ ಬದುಕಿನ ಬಾಳು ೪,೯೦೦ ರೂಪಾಯಿ. ಒಬ್ಬೊಬ್ಬ ಮಗನಿಗೆ ಶಿಕ್ಕಿದ್ದು ೭೦೦ ರೂಪಾಯಿ.—ಅವನು ಸೂಕ್ಷ್ಮ ವಿವೇಕಬುದ್ಧಿಯಾಗಿ ಯೋಚಿಸಿ, ಮಗಂದ್ಯರಿಗೆ ವ್ಯಾಜ್ಯಕ್ಕೆ ನ್ಯಾಯವಾಗಲಿ ನೆವವಾಗಲಿ ಶಿಕ್ಕದ ಹಾಗೆ ಮಾಡಿ, ವಿಧಿಸಿದ್ದು ಸ್ತುತ್ಯವಲ್ಲವೋ? ಹೆತ್ತವರೆಲ್ಲರು ವಿವೇಕವಾಗಿಯೂ ನೀತಿಯಾಗಿಯೂ ತಮ್ಮ ಮಕ್ಕಳಿಗೆ ನಡಿಸಿ, ಏಕ ಪ್ರಕಾರದ ಮಮತೆ ತೋರಿಸಿ, ಪ್ರೀತಿ ಮಾಡಿ, ಬದುಕನ್ನು ಸಹಾ ನೀತಿನ್ಯಾಯಭಾವಕ್ಕೆ ಸರಿಯಾಗಿ ಸಮ ಪಾಲು ಮಾಡಿ, ವ್ಯಾಜ್ಯಾದಿಗಳಿಗೆ ಏನೂ ಆಸ್ಪದ ಕೊಡದೆ ಇದ್ದರೆ, ಅಳಿಯಸಂತಾನದ ಕಟ್ಟುಕಟ್ಟಳೆ ಮೊದಲಾದ ಕಟ್ಟಳೆಗಳ ಸಂಬಂಧವಾಗಿಯೂ ವಕೀಲರ ದೆಶೆಯಿಂದಲೂ ಆಗುವ ಅನರ್ಥವೂ ನಷ್ಟವೂ ಗೃಹಛಿದ್ರಗಳೂ ಆಗದೆ ಹೋಗ ಬಹುದಿತ್ತಲ್ಲಾ!

೧೮೭೭ನೇ ವರ್ಷದಲ್ಲಿ ಸಂಭವಿಸುವ

ಗ್ರಹಣಗಳು.

ಈ ೧೮೭೭ನೇ ವರ್ಷದಲ್ಲಿ ಅನೇಕ ಗ್ರಹಣಗಳು ಸಂಭವಿಸುತ್ತವೆ: ಮೂರು ಸೂರ್ಯಗ್ರಹಣಗಳೂ ಎರಡು ಚಂದ್ರಗ್ರಹಣಗಳೂ. ಆದರೆ ಇವುಗಳಲ್ಲಿ ಚಂದ್ರಗ್ರಹಣಗಳು ಮಾತ್ರವೆ ನಮ್ಮ ಭರತಖಂಡದಲ್ಲಿ ದೃಶ್ಯ. ಇಲ್ಲಿ ಮಂಗಳೂರಿನ ಕಾಲದ ಪ್ರಕಾರ ಘಂಟೆ ಮಿನಿಟು ಹೇಳುತ್ತದೆ.

I. ಪೂರ್ಣ ಚಂದ್ರಗ್ರಹಣ ಫೆಬ್ರುವರಿ ೨೭ನೆಯಿಂದ ೨೮ನೆಗೆ ರಾತ್ರಿಯಲ್ಲಿ.

ಭೂಮಿಯ ಅರ್ಧಛಾಯೆಯಲ್ಲಿ ಚಂದ್ರಪ್ರವೇಶ, ೨೭ನೆ ರಾತ್ರಿ			೮ ಘಂ.	೩೩ ಮಿನಿಟಿಗೆ.	
,, ನಿಜ ,,	,,	,,	೧೦ ,,	೨೮	,,
ಪೂರ್ಣಗ್ರಹಣಾರಂಭ (ನಿಮೀಲನ)		,,	೧೧ ,,	೨೭	,,
ಗ್ರಹಣಮಧ್ಯ	೨೮ನೇ ಪ್ರಾತಃಕಾಲ		೧೨ ,,	೧೪	,,
ಪೂರ್ಣಗ್ರಹಣಾಂತ್ಯ (ಉನ್ಮೀಲನ)	,,	,,	೧ ,,	೨	,,
ಪೂರ್ಣಛಾಯೆಯಿಂದ ವಿಮೋಚನ (ಮೋಕ್ಷ)	,,	,,	೨ ,,		
ಅರ್ಧಛಾಯೆಯಿಂದ ,,	,,	,,	೨ ,,	೫೭	,,

ಚಂದ್ರದ ವ್ಯಾಸವು ೧ ಅಂತ ಎಣಿಸಿದರೆ, ಈ ಗ್ರಹಣದ ಪರಿಮಾಣವು=೧·೭೭೩. ಹಾಗಾದರೆ ಭೂಛಾಯೆಯು ಚಂದ್ರವನ್ನು ಪೂರ್ಣವಾಗಿ ಮುಚ್ಚುತ್ತದೆ ಮಾತ್ರವಲ್ಲ, ಆ ಛಾಯೆಯು ಚಂದ್ರವನ್ನು ದಾಟುವದರಿಂದ, ಇದು ಪೂರ್ಣಾಧಿಕ ಗ್ರಹಣವಾಗಿರುವದು, ಅಂದರೆ, ಚಂದ್ರವು ತಕ್ಕಷ್ಟು ಕಾಲ ಭೂಛಾಯೆಯಲ್ಲಿ ನಡಿಯುತ್ತಾ ಇರುವದು.

ಈ ಗ್ರಹಣವು ಭರತಖಂಡದಲ್ಲಿ ಎಲ್ಲಾ ಕಡೆಯಲ್ಲಿಯೂ ಆರಂಭದಿಂದ ಅಂತ್ಯದ ವರೆಗೂ ದೃಶ್ಯವಾಗುತ್ತದೆ. ಗ್ರಹಣ ಆರಂಭಿಸಿದ ಮೇಲೆ ವಿಲಾಯತಿಯಲ್ಲಿ ಚಂದ್ರೋದಯವಾಗುವದರಿಂದ, ಅಲ್ಲಿ ಅದರ ಆರಂಭ ಕಾಣುವದಿಲ್ಲಾ; ಆದರೆ ಭರತಖಂಡದವರಿಗೆ ಚಂದ್ರೋದಯವಾಗಿ ತಕ್ಕಷ್ಟು ಕಾಲ ಕಳೆದ ಮೇಲೆ, ಚಂದ್ರವು ಭೂಮಿಯ ಅರ್ಧಛಾಯೆಯಲ್ಲಿ ಪ್ರವೇಶಿಸುವ ಕಾರಣ, ಎಲ್ಲಾ ದೃಶ್ಯವಾಗುತ್ತದೆ. ಈ ಗ್ರಹಣ ಆರಂಭವಾಗುವಾಗ್ಯೆ ಚಂದ್ರವು ಅಕ್ಷೋತ್ತರ ೪ ಅಂಶ ೩೦ ಕಲೆಯಲ್ಲಿಯೂ, ಅಂತ್ಯವಾಗುವಾಗ್ಯೆ ೨ ಅಂಶ ೧೦ ಕಲೆಯಲ್ಲಿಯೂ ಇರುವದು.

ನಿಜ ಪೂರ್ಣಿಮೆಯು ಫೆಬ್ರುವರಿ ೨೭ನೆಯ ಮಧ್ಯ ರಾತ್ರಿ ಕಳೆದು, ೨೮ನೆಯ ತಾರೀಕು ಆರಂಭವಾದ ಮೇಲೆ ೮ ಮಿನಿಟಿಗೆ ಪ್ರಾಪ್ತವಾಗುತ್ತದೆ.

II. ಮಾರ್ಚಿ ೧೫ಲ್ಲು ಸೂರ್ಯಕ್ಕೆ ಪಾರ್ಶ್ವಗ್ರಹಣ.

ಅರ್ಧಗ್ರಹಣ ಅಥವಾ ಅಪೂರ್ಣಗ್ರಹಣ ಎಂಬದಕ್ಕೆ ಖಂಡಗ್ರಹಣ ಅಥವಾ ಪಾರ್ಶ್ವಗ್ರಹಣ ಎಂಬದಾಗಿ ಸಹ ಹೇಳುತ್ತಾರೆ.

ಈ ಗ್ರಹಣಾರಂಭ, ಪ್ರಾತಃಕಾಲ ೬ ಘು. ೧೪ ಮಿನಿ. ರೇಖಾಪೂರ್ವ ೭೧°೪೩', ಅಕ್ಷೋತ್ತರ ೩೪°
ಗ್ರಹಣಮಧ್ಯ, " ೭ " ೩೭ " " ೫೨°೫೮' " ೬೧° ೬'
ಗ್ರಹಣದ ಅಂತ್ಯ, " ೯ " " " ೬೫° " ೮೭°೪೫'

ಸೂರ್ಯದ ವ್ಯಾಸವು ೧ ಅಂತ ಎಣಿಸಿದರೆ, ಈ ಗ್ರಹಣದ ಪರಿಮಾಣವು=೦.೨೯೩. ಈ ಸಣ್ಣ ಗ್ರಹಣವು ಭರತಖಂಡದಲ್ಲಿ ಅದೃಶ್ಯ, ಆಸ್ಯ ಖಂಡದ ಉತ್ತರ ಭಾಗದಲ್ಲಿ ಮಾತ್ರವೆ ದೃಶ್ಯ.

III. ಅಗೊಸ್ತು ೯ಲ್ಲು ಸೂರ್ಯಕ್ಕೆ ಪಾರ್ಶ್ವಗ್ರಹಣ.

ಈ ಗ್ರಹಣಾರಂಭ, ಪ್ರಾತಃಕಾಲ ೯ ಘುಂ. ೧೧ ಮಿನಿ. ರೇಖಾಪಶ್ಚಿಮ ೩೯°೨೪', ಅಕ್ಷೋತ್ತರ ೭೧°೪೪'
ಗ್ರಹಣಮಧ್ಯ, " ೧೦ " ೨೯ " " ೧೩೮°೪೭', " ೬೨°೩೫'
ಗ್ರಹಣಾಂತ್ಯ, " ೧೧ ೩೦ " ರೇಖಾಪೂರ್ವ ೧೭೯° , " ೩೬° ೩'

ಸೂರ್ಯದ ವ್ಯಾಸವು ೧ ಅಂತ ಎಣಿಸಿದರೆ, ಈ ಗ್ರಹಣದ ಪರಿಮಾಣವು=೦.೩೯೧. ಈ ಗ್ರಹಣವು ಆಸ್ಯಖಂಡದ ಉತ್ತರ ಭಾಗದಲ್ಲಿ ಮಾತ್ರವೆ ದೃಶ್ಯ.

IV. ಅಗೊಸ್ತು ೨೪ಲ್ಲು ಚಂದ್ರಕ್ಕೆ ಪೂರ್ಣ ಗ್ರಹಣ.

ಭೂಮಿಯ ಅರ್ಧ ಛಾಯೆಯಲ್ಲಿ ಚಂದ್ರಪ್ರವೇಶ, ಪ್ರಾತಃಕಾಲ ೧ ಘಂಟೆ ೩ ಮಿನಿಟಿಗೆ.
" ಪೂರ್ಣ " " " ೨ " ೧೩ "
ಪೂರ್ಣಗ್ರಹಣಾರಂಭ (ನಿಮೀಲನ) " ೩ " ೧೮ "
ಗ್ರಹಣಮಧ್ಯ " ೪ " ೧೯ "
ಪೂರ್ಣಗ್ರಹಣದ ಅಂತ್ಯ (ಉನ್ಮೀಲನ) " ೫ " ೩ "
ಪೂರ್ಣಛಾಯೆಯಿಂದ ವಿಮೋಚನ " ೬ " ೮ "
ಅರ್ಧ " " " ೭ " ೧೮ "


ಚಂದ್ರದ ವ್ಯಾಸವು ೧ ಅಂತ ಎಣಿಸಿದರೆ, ಈ ಗ್ರಹಣದ ಪರಿಮಾಣವು=೧.೬೮೨. ಈ ಗ್ರಹಣವು ಭರತಖಂಡದಲ್ಲೆಲ್ಲಾ ದೃಶ್ಯವಾಗುತ್ತದೆ ಸರಿ, ಆದರೆ ಆರಂಭದಿಂದ ಅಂತ್ಯದ ವರೆಗೂ ಅಲ್ಲ. ಹ್ಯಾಗಂದರೆ ಪ್ರಾತಃಕಾಲ ೬ ಘಂಟೆ ೮ ಮಿನಿಟಿಗೆ ಚಂದ್ರವು ಪೂರ್ಣಛಾಯೆಯಿಂದ ಮೋಕ್ಷವಾಗುವಾಗ್ಯೆ, ಪಡುವಲಲ್ಲಿ ಚಂದ್ರವು ಅಸ್ತಮಾನವಾಗಿರುವದು.

V. ಸಪ್ತಂಬರ ೭ಲ್ಲು ಸೂರ್ಯಕ್ಕೆ ಪಾರ್ಶ್ವಗ್ರಹಣ.

ಈ ಗ್ರಹಣಾರಂಭ, ಪ್ರಾತಃಕಾಲ ೪ ಘುಂ. ೯ ಮಿ. ರೇಖಾಪಶ್ಚಿಮ ೭೮°೩೮', ಅಕ್ಷದಕ್ಷಿಣ ೨೩°೧೩'
ಗ್ರಹಣಮಧ್ಯ " ೫ " ೪೭ " " ೯೫° ೧', " ೬೧°೧೮'
ಗ್ರಹಣಾಂತ್ಯ " ೭ " ೨೬ " ರೇಖಾಪೂರ್ವ ೨೪°೧೫', " ೭೮°೩೯'

ಸೂರ್ಯದ ವ್ಯಾಸವು ೧ ಅಂತ ಎಣಿಸಿದರೆ, ಈ ಗ್ರಹಣದ ಪರಿಮಾಣವು=೦.೬೩೮. ಈ ಗ್ರಹಣವು ಭೂಮಿಯ ದಕ್ಷಿಣಾರ್ಧದಲ್ಲಿಯೂ ಮಹಾಸಾಗರದಲ್ಲಿಯೂ ಮಾತ್ರವೆ, ಮತ್ತು ದಕ್ಷಿಣ ಅಮೇರಿಕದಲ್ಲಿಯೂ ದೃಶ್ಯ.

೧೮೭೪ನೇ ದಶಂಬರ ೯ಲ್ಲು ಶುಕ್ರಗ್ರಹವು ಸೂರ್ಯಬಿಂಬಕ್ಕೆ ಎದುರಾಗಿ ದಾಟಿ ಹೋಗುವದರಿಂದ, ವಿದ್ಯಾಪ್ರಿಯರಾದ ವಿಲಾಯತಿ ಅಮೇರಿಕ ಸಂಸ್ಥಾನಗಳವರು ಬಹಳ ಹಣ ಖರ್ಚು ಮಾಡಿ, ಎಲ್ಲೆಲ್ಲಿ ಈ ಸೂರ್ಯಶುಕ್ರಸಂಕ್ರಮ ಗೋಚರವಾಗುವದೊ, ಅಲ್ಲಲ್ಲಿಗೆ ಜ್ಯೋತಿಃಶಾಸ್ತ್ರಜ್ಞರಾದ ವಿದ್ವಾಂಸರನ್ನು ಕಳುಹಿಸಿ, ಆಯಾ ಸ್ಥಳಗಳಲ್ಲಿ ವಿವಿಧವಾದ ಅವಲೋಕನಗಳನ್ನು (observations) ಮಾಡುವದರ ಹೊರ್ತಾಗಿ, ಈ ಸೂರ್ಯಶುಕ್ರಸಂಕ್ರಮಕಾಲದಲ್ಲಿ ಸೂರ್ಯದ ಪ್ರಕಾಶಮುದ್ರಾಂಕಿತಗಳನ್ನು (photographs) ಸಹ ತೆಗೆಯಬೇಕೆಂದು ಅಪ್ಪಣೆ ಕೊಟ್ಟರು. ಈ ಕಾರ್ಯವು ಕೆಲವು ಸ್ಥಳಗಳಲ್ಲಿ ಮೋಡ ಮಳೆ ಮುಂತಾದ್ದರಿಂದ ಕೈಕೂಡಿ ಬರಲಿಲ್ಲ, ಆದರೆ ಬೇರೆ ಕಡೆಯಲ್ಲಿ ಚನ್ನಾಗಿ ಹಸ್ತಗತವಾಯಿತು. ಈಗ ವಿದ್ವಾಂಸರು ಈ ಅವಲೋಕನಗಳ ವೃತ್ತಾಂತಗಳನ್ನೂ ಪ್ರಕಾಶಮುದ್ರಾಂಕಿತಗಳನ್ನೂ ಒಟ್ಟುಕೂಡಿಸಿ, ಅವುಗಳ ಮುಖ್ಯ ಫಲವೇನೆಂದು ವಿಚಾರಿಸುತ್ತಾ ಇದ್ದಾರೆ. ಈ ಕಾರ್ಯ ಇನ್ನೂ ಸಮಾಪ್ತಿಯಾಗಲಿಲ್ಲ. ಈ ದೊಡ್ಡ ಖರ್ಚಿನಿಂದಲೂ ಪ್ರಯತ್ನದಿಂದಲೂ ಉಂಟಾದ ಪ್ರಾಪ್ತಫಲವೇನೆಂಬದನ್ನು ದೇವರ ದಯದಿಂದ ಬರುವ ವರ್ಷದಲ್ಲಿ ನಮ್ಮ ಪಂಚಾಂಗಪ್ರಿಯರಿಗೆ ತಿಳಿಸ ಬಹುದೆಂತ ನೆನಸುತ್ತೇವೆ.



ವಿಲಾಯತಿಯ ಒಂದು ಜ್ಯೋತಿಃಶಾಲೆಯಲ್ಲಿಯ ಮಹಾ ಭೂತದುರ್ಬೀನು.

ದಕ್ಷಿಣ ಹಿಂದುಸ್ಥಾನದಲ್ಲಿ ರೂಢಿಯಾಗಿ ಎಣಿಸುವ

ಶಕಗಳ ಮೊಕಾಬಿಲೆ ಪಟ್ಟಿ

ಕ್ರಿಸ್ತಶಕ A. D.		ಹಿಂದು ಶಕಗಳು					ಫಸಲಿ		ಮಹಮ್ಮದಿ ಹಿಜರಿ	
		ಚಾಂದ್ರಮಾನ			ಸೌರಮಾನ					
		ಸಂವತ್ಸರಗಳು	ಶಾಲಿವಾಹನ ಶಕ		ಮಲಯಾಳ ಕೊಲ್ಲಮ್					
1807	1867	ಪ್ರಭವ	1729	1789	982	1042	1216	1276	1222	1284
1808	1868	ವಿಭವ	1730	1790	983	1043	1217	1277	1223	1285
1809	1869	ಶುಕ್ಲ	1731	1791	984	1044	1218	1278	1224	1286
1810	1870	ಪ್ರಮೋದೂತ	1732	1792	985	1045	1219	1279	1225	1287
1811	1871	ಪ್ರಜೋತ್ಪತ್ತಿ	1733	1793	986	1046	1220	1280	1226	1288
1812	1872	ಆಂಗೀರಸ	1734	1794	987	1047	1221	1281	1227	1289
1813	1873	ಶ್ರೀಮುಖ	1735	1795	988	1048	1222	1282	1228-29	1290
1814	1874	ಭಾವ	1736	1796	989	1049	1223	1283	1230	1291
1815	1875	ಯುವ	1737	1797	990	1050	1224	1284	1231	1292
1816	1876	ಧಾತು	1738	1798	991	1051	1225	1285	1232	1293
1817	1877	ಈಶ್ವರ	1739	1799	992	1052	1226	1286	1233	1294-95
1818	1878	ಬಹುಧಾನ್ಯ	1740	1800	993	1053	1227	1287	1234	1296
1819	1879	ಪ್ರಮಾದಿ	1741	1801	994	1054	1228	1288	1235	1297
1820	1880	ವಿಕ್ರಮ	1742	1802	995	1055	1229	1289	1236	1298
1821	1881	ವಿಷು	1743	1803	996	1056	1230	1290	1237	1299
1822	1882	ಚಿತ್ರಭಾನು	1744	1804	997	1057	1231	1291	1238	1300
1823	1883	ಸ್ವಭಾನು	1745	1805	998	1058	1232	1292	1239	1301
1824	1884	ತಾರಣ	1746	1806	999	1059	1233	1293	1240	1302
1825	1885	ಪಾರ್ಥಿವ	1747	1807	1000	1060	1234	1294	1241	1303
1826	1886	ವ್ಯಯ	1748	1808	1001	1061	1235	1295	1242	1304
1827	1887	ಸರ್ವಜಿತು	1749	1809	1002	1062	1236	1296	1243	1305
1828	1888	ಸರ್ವಧಾರಿ	1750	1810	1003	1063	1237	1297	1244	1306
1829	1889	ವಿರೋಧಿ	1751	1811	1004	1064	1238	1298	1245	1307
1830	1890	ವಿಕೃತಿ	1752	1812	1005	1065	1239	1299	1246	1308
1831	1891	ಖರ	1753	1813	1006	1066	1240	1300	1247	1309
1832	1892	ನಂದನ	1754	1814	1007	1067	1241	1301	1248	1310
1833	1893	ವಿಜಯ	1755	1815	1008	1068	1242	1302	1249	1311

ಕ್ರಿಸ್ತಶಕ A. D.		ಸಂವತ್ಸರಗಳು	ಶಾಲಿವಾಹನ ಶಕ		ಮಲಯಾಳ ಕೊಲ್ಲಮ್		ಫಸಲಿ		ಮಹಮ್ಮದಿ ಹಿಜರಿ	
1834	1894	ಜಯ	1756	1816	1009	1069	1243	1303	1250	1312
1835	1895	ಮನ್ಮಥ	1757	1817	1010	1070	1244	1304	1251	1313
1836	1896	ದುರ್ಮುಖಿ	1758	1818	1011	1071	1245	1305	1252	1314
1837	1897	ಹೇವಿಳಂಬಿ	1759	1819	1012	1072	1246	1306	1253	1315
1838	1898	ವಿಳಂಬಿ	1760	1820	1013	1073	1247	1307	1254	1316
1839	1899	ವಿಕಾರಿ	1761	1821	1014	1074	1248	1308	1255	1317
1840	1900	ಶಾರ್ವರಿ	1762	1822	1015	1075	1249	1309	1256	1318
1841	1901	ಪ್ಲವ	1763	1823	1016	1076	1250	1310	1257	1319
1842	1902	ಶುಭಕೃತು	1764	1824	1017	1077	1251	1311	1258	1320
1843	1903	ಶೋಭಕೃತು	1765	1825	1018	1078	1252	1312	1259	1321
1844	1904	ಕ್ರೋಧಿ	1766	1826	1019	1079	1253	1313	1260	1322
1845	1905	ವಿಶ್ವಾವಸು	1767	1827	1020	1080	1254	1314	1261-62	1323
1846	1906	ಪರಾಭವ	1768	1828	1021	1081	1255	1315	1263	1324
1847	1907	ಪ್ಲವಂಗ	1769	1829	1022	1082	1256	1316	1264	1325
1848	1908	ಕೀಲಕ	1770	1830	1023	1083	1257	1317	1265	1326
1849	1909	ಸೌಮ್ಯ	1771	1831	1024	1084	1258	1318	1266	1327-28
1850	1910	ಸಾಧಾರಣ	1772	1832	1025	1085	1259	1319	1267	1329
1851	1911	ವಿರೋಧಿಕೃತು	1773	1833	1026	1086	1260	1320	1268	1330
1852	1912	ಪರಿಧಾವಿ	1774	1834	1027	1087	1261	1321	1269	1331
1853	1913	ಪ್ರಮಾದೀಚ	1775	1835	1028	1088	1262	1322	1270	1332
1854	1914	ಆನಂದ	1776	1836	1029	1089	1263	1323	1271	1333
1855	1915	ರಾಕ್ಷಸ	1777	1837	1030	1090	1264	1324	1272	1334
1856	1916	ನಳ	1778	1838	1031	1091	1265	1325	1273	1335
1857	1917	ಪಿಂಗಳ	1779	1839	1032	1092	1266	1326	1274	1336
1858	1918	ಕಾಳಯುಕ್ತಿ	1780	1840	1033	1093	1267	1327	1275	1337
1859	1919	ಸಿದ್ಧಾರ್ಥಿ	1781	1841	1034	1094	1268	1328	1276	1338
1860	1920	ರೌದ್ರಿ	1782	1842	1035	1095	1269	1329	1277	1339
1861	1921	ದುರ್ಮತಿ	1783	1843	1036	1096	1270	1330	1278	1340
1862	1922	ದುಂದುಭಿ	1784	1844	1037	1097	1271	1331	1279	1341
1863	1923	ರುಧಿರೋದ್ಗಾರಿ	1785	1845	1038	1098	1272	1332	1280	1342
1864	1924	ರಕ್ತಾಕ್ಷಿ	1786	1846	1039	1099	1273	1333	1281	1343
1865	1925	ಕ್ರೋಧನ	1787	1847	1040	1100	1274	1334	1282	1344
1866	1926	ಕ್ಷಯ	1788	1848	1041	1101	1275	1335	1283	1345

ಜನರಲ್ ಸ್ಟಾಂಪು ಆಕ್ಟು.

(ದಸ್ತಾವೇಜುಗಳ ತಸೇ ಹಾಸಲನ್ನು ಕುರಿತು ಉಂಟಾದ ೧೮೬೯ನೇ ಇಸವಿ XVIIIನೇ ಆಕ್ಟಿನಿಂದ ತೆಗದ್ದು.)

ಒಂದು ದಸ್ತಾವೇಜಿನಲ್ಲಿ ಬಡ್ಡಿ ಕೊಡ ತಕ್ಕದೆಂದು ಸ್ಪಷ್ಟವಾಗಿ ನಮೂದಿಸೋಣಾಗಿದ್ದರೆ, ಅಂಥಾ ದಸ್ತಾವೇಜಿಗಾಗಿ, ಅದರಲ್ಲಿ ಬಡ್ಡಿ ನಮೂದಾಗದೆ ಇದ್ದರೆ, ಎಷ್ಟರ ಹಾಸಲಿಗೆ ಗುರಿಯಾಗುತ್ತಿತ್ತೋ, ಅದಕ್ಕಿಂತ ಹೆಚ್ಚಾಗಿ ಹಾಸಲು ತಕ್ಕೊಳ್ಳ ಕೂಡದು.

ಯಾವದಾದರೊಂದು ಪತ್ರ, ಅಡಮಾನಪತ್ರ, ಅಥವಾ ವ್ಯವಸ್ಥಾಪತ್ರ* ಇಂಥಾದ್ದರ ಮೊಬಲಗು ಯಾ ಕಿಮ್ಮತು ಗೊತ್ತಾಗದೆ ಹೋದರೆ, ಇಷ್ಟಾನುಸಾರವಾಗಿರ ಬಹುದಾದ ಸ್ಟಾಂಪು ಹಚ್ಚ ಬಹುದು.

ವಾಯಿದೆ ನಮೂದಿಲ್ಲದೆ ನಿಯಮಿತ ಕಾಲಗಳಲ್ಲಿ ಪಾವತಿಯಾಗ ತಕ್ಕ ವರುಷಾಸನದ ಯಾ ಇತರ ಮೊಬಲಗಿನ ಪಾವತೀ ಬಗ್ಗೆ ಪತ್ರದಿಂದ, ಪ್ರಾಮಿಸರಿ ನೋಟಿನಿಂದ, ಅಥವಾ ಅಡಮಾನಪತ್ರದಿಂದ ಭದ್ರ ಪಡಿಸಿದ ಇಡೀ ಮೊಬಲಗನ್ನು,—ಅಥವಾ ಒಂದು ಕ್ರಯಪತ್ರದ ಐವಜು ವಾಯಿದೆ ನಮೂದಿಲ್ಲದೆ ನಿಯಮಿತ ಕಾಲಗಳಲ್ಲಿ ಪಾವತಿಯಾಗ ತಕ್ಕ ವರುಷಾಸನವಾಗಿ ಯಾ ಇತರ ಮೊಬಲಗಾಗಿ ಇದ್ದರೆ, ಸದರಿ ಐವಜನ್ನು—ಒಂದು ಸಂವತ್ಸರಕ್ಕೆ ಲೆಖ್ಖ ಮಾಡಿದ ಮೊಬಲಗಿನ ೧೦ರಷ್ಟು ಎಂದು ಗ್ರಹಿಸ ತಕ್ಕದ್ದು.

ತಸೆ ಹಾಸಲಿನಿಂದ ವಿನಾಯಿಸಲ್ಪಟ್ಟ ದಸ್ತಾವೇಜುಗಳು ಯಾವವಂದರೆ:—ಗವರ್ನಮೆಂಟಿಗೆ ಕಂದಾಯ ತೆರುವ ಅಥವಾ ಇನಾಮತಿಯ ಜಮೀನುಗಳ ಬಗ್ಗೆ ಶಿಸ್ತು ಪಾವತಿ ಮಾಡಿದ್ದಕ್ಕಾಗಿ ರೈತನಿಗೆ ಕೊಡುವ ರಶೀದಿ; ಬೇಂಕಿನಲ್ಲ್ಯಾಗಲಿ, ಸಾವಕಾರನ ಕೈಯಲ್ಲ್ಯಾಗಲಿ ಅಮಾನತು ಇಟ್ಟ ಹಣಕ್ಕೆ ಕೊಡುವ ರಶೀದಿ; ಯಾವದೊಂದು ದಸ್ತಾವೇಜಿನ ಹಣ ಯಾ ಅಂಶ ಅಥವಾ ಬಡ್ಡಿ ಪಾವತೀ ರಶೀದಿ; ಬಿಲ್ ಒಫ್ ಎಕ್ಸ್‌ಚೇಂಜ್ ಎಂಬ ಹುಂಡಿಯೊಂದಿಗಿರುವ ಆಧಾರಪತ್ರ; ಸಂಬಳವುಳ್ಳ ಉದ್ಯೋಗದ ಕೆಲಸಗಳನ್ನು ಸರಿಯಾಗಿ ನಡಿಸುವಂತೆ, ಗವರ್ನಮೆಂಟಿಗೆ ಬರ ಕೊಡುವ ಪತ್ರ; ಸಾಮಾನುಗಳ ವಿಕ್ರಯದ ಬಗ್ಗೆ ಮಾಡುವ ಕರಾರು; ಕಾಣಿಕೆ ಇಲ್ಲದೆ ವ್ಯವಸಾಯಗಾರಗೆ ಬರ ಕೊಡೋಣಾಗುವ ಗೇಣಿಚೀಟು; ಅಂಥಾ ಗೇಣಿಚೀಟಿನ ಎದುರ್ನುಡಿ; ರೈತನು ತನ್ನ ವರ್ಗದಾರನಿಗೆ ಜಮೀನು ಬಿಟ್ಟು ಕೊಡುವ ನಿಶೂದಿ; ಒಬ್ಬ ಸರಕಾರ ಉದ್ಯೋಗಸ್ಥನು

* ಅಂದರೆ: ಚರ ಯಾ ಸ್ಥಿರ ಸೊತ್ತಿನ ವಿನಿಯೋಗದ ಯಾ ಪ್ರಾಪ್ತಿಯ ವ್ಯವಸ್ಥೆಯಾಗುವ ದಸ್ತಾವೇಜು.

ಕಾನೂನಿನ ಪ್ರಕಾರ ಮಾಡಿ ಕೊಡ ಬೇಕಾದ ಯಾವದೊಂದು ಕಾಗದದ ನಕಲು; ಬೀಮ ದಸ್ತಾವೇಜು* ಕೊಡುವ ಬಗ್ಯೆ ಮೇಲುಚೀಟು.

ಒಂದು ಠಸೆ ಕಾಗದವನ್ನು ಕೊಂಡುಕೊಂಡ ಮೇಲೆ, ಅದು ಚಿತ್ತಾದದರಿಂದಾಗಲಿ, ಅದರಲ್ಲಿ ಬರದ ಮತಲಬು ತಬದಿಲಾದದರಿಂದಾಗಲಿ ನಿಷ್ಪ್ರಯೋಜನವಾಗಿ, ಕೆಲಸಕ್ಕೆ ಬಾರದೆ ಕೆಟ್ಟು ಹೋದರೆ, ಅದನ್ನು ಪಡಕೊಂಡ ಮನುಷ್ಯನು ಆ ಕಾಗದ ಎಲ್ಲಿ ಪುರೋಕ್ತಾಯಿತೋ ಆ ಡಿಸ್ಟ್ರಿಕ್ಟಿನ ಕಲ್ಲೆಕ್ಟರರಿಗೆ, ಆ ಠಸೆ ಕಾಗದ ಕೊಂಡು ಕೊಂಡ ಒಂದು ವರ್ಷದೊಳಗೆ, ಅದನ್ನು ಹಾಜರು ಮಾಡಿ ಅರ್ಜಿ ಬರಕೊಂಡರೆ, ಸದರಿ ಠಸೇ ಮೊಬಲಗು ವಾಪಸು ಶಿಕ್ಕಲಾಗುವದು, ಅಥವಾ ಬೇಕಾದರೆ, ಅದಕ್ಕೆ ಸರಿಯಾದ ಮೊಬಲಗಿನ ಬೇರೊಂದು ಕಾಗದ ತೆಗದು ಕೊಳ್ಳ ಬಹುದು.

ಕೇಳಿದಾಗಲೇ ಅಲ್ಲದೆ ಅನ್ಯಥಾ ವಟಾಯಿಸ ತಕ್ಕ ಹುಂಡಿಗಳಿಗೆ (Bill of Exchange), ಅಥವಾ ವಾಯಿದೇ ಚೀಟುಗಳಿಗೆ (Promissory Note) ಈ ಕೆಳಗೆ ಬರೆದಿರುವ ಪ್ರಕಾರ ಸ್ಟಾಂಪು ಹಾಸಲು ಇರ ಬೇಕು:—

	ಒಂದಕ್ಕೆ ರೂ.	ಒಂದಕ್ಕೆ ಆ.	ದುಬಾರೆಗೆ ರೂ.	ದುಬಾರೆಗೆ ಆ.	ತಿಬಾರೆಗೆ ರೂ.	ತಿಬಾರೆಗೆ ಆ.
೧೦೦ ರೂಪಾಯಿಗೆ ಮಿಾರದಿದ್ದರೆ	೦	೧	೦	೧	೦	೧
೧೦೦ ರೂಪಾಯಿಗೆ ಮಿಾರಿ ೨೦೦ ,, ,,	೦	೨	೦	೧	೦	೧
೨೦೦ ,, ,, ೩೦೦ ,, ,,	೦	೩	೦	೨	೦	೧
೩೦೦ ,, ,, ೬೦೦ ,, ,,	೦	೬	೦	೩	೦	೨
೬೦೦ ,, ,, ೯೦೦ ,, ,,	೦	೯	೦	೫	೦	೩
೯೦೦ ,, ,, ೧೨೦೦ ,, ,,	೦	೧೨	೦	೬	೦	೪
೧೨೦೦ ,, ,, ೧೫೦೦ ,, ,,	೦	೧೫	೦	೮	೦	೫
೧೫೦೦ ,, ,, ೨೫೦೦ ,, ,,	೧	೮	೦	೧೨	೦	೮
೨೫೦೦ ,, ,, ೧೦೦೦೦ ವರೆಗೆ ಪ್ರತಿ ರೂ. ೨೫೦ಕ್ಕೆ ಯಾ ಅದರ ಅಂಶಕ್ಕೆ	೧	೮	೦	೧೨	೦	೮
೧೦೦೦೦ ,, ,, ೩೦೦೦೦ ವರೆಗೆ ಪ್ರತಿ ರೂ. ೫೦೦೦ಕ್ಕೆ ಯಾ ಅದರ ಅಂಶಕ್ಕೆ	೩	೦	೧	೮	೧	೦
೩೦೦೦೦ ರೂ. ಮೇಲೆ ಪ್ರತಿ ರೂ. ೧೦೦೦೦ಕ್ಕೆ ಯಾ ಅದರ ಅಂಶಕ್ಕೆ	೬	೦	೩	೦	೨	೦

ಅಡ್ಮಿನಿಸ್ಟ್ರೇಶನ್ ಪತ್ರ ಶಿವಾಯಿ ಇತರ ಯಾವದಾದರೂ ಸಾಲಪತ್ರ, ತೋರಡವು, ಇಂಡಾರ್ಸಮೆಂಟ ಮೂಲಕವಾಗಿ ಯಾ ಅನ್ಯಥಾ ಸದರಿ ಅಡವಿನ ಸೊತ್ತಿನ ಮೇಲೆ ಹಣ ಹೊರಿಸಿ ಆಗುವ ಪತ್ರ, ಇವುಗಳಿಗೆ ಈ ಕೆಳಗಿನ ವಿವರ ಪ್ರಕಾರ ಠಸೆ ಇರ ಬೇಕು:—

* ಅಂದರೆ: ಒಬ್ಬನಿಂದ ವಟ್ಟಾ ತೆಗದು ಕೊಂಡು, ಅವನಿಗೆ ಅಕಸ್ಮಾತ್ತಾಗಿ ಯಾ ಹಟಾತ್ತಾಗಿ ಸಂಭವಿಸುವ ಲುಕ್ಸಾನು, ನಷ್ಟ, ಯಾ ಸಾಲ ಭರ್ತಿ ಮಾಡಿ ಕೊಡುವ ಬಗ್ಯೆ ಒಪ್ಪಿ ಕೊಳ್ಳುವ ದಸ್ತಾವೇಜು.

		ತಸೆ. ರೂ.	ಆ.
ಪತ್ರದ ಮೊಬಲಗು	೨೫ ರೂಪಾಯಿಗೆ ಮೀರದಿದ್ದರೆ,	೦	೨
„ ೨೫ ರೂಪಾಯಿಗೆ ಮೀರಿ ೫೦	„ „	೦	೪
„ ೫೦ „ „ ೧೦೦	„ „	೦	೮
„ ೧೦೦ „ „ ೧೦೦೦ ರೂ. ವರೆಗೆ	ಪ್ರತಿ ರೂ. ೧೦೦ಕ್ಕೆ ಯಾ ಅದರ ಅಂಶಕ್ಕೆ	೦	೮
„ ೧೦೦೦ „ „ ೧೦೦೦೦	„ „ ೫೦೦ „	೫	೮
„ ೧೦೦೦೦ „ „ ೩೦೦೦೦	„ „ ೧೦೦೦ „	೨	೮
„ ೩೦೦೦೦ „	„ ಪ್ರತಿ ರೂ. ೧೦೦೦೦ಕ್ಕೆ ಯಾ ಅದರ ಅಂಶಕ್ಕೆ	೧೨	೮

ಯಾವದಾದರೂ ಕ್ರಯಪತ್ರ, ಅಥವಾ ಭೋಗ್ಯಾದಿ ಅಡವುಪತ್ರಗಳಿಗೆ ಈ ಕೆಳಗಿನ ಪ್ರಕಾರ ತಸೆ ಹಾಸಲು ಇರ ಬೇಕು:—

		ರೂ.	ಆ.
ಅದರ ಮೊಬಲಗು	೫೦ ರೂಪಾಯಿಗೆ ಮೀರದಿದ್ದರೆ,	೦	೮
೫೦ ರೂಪಾಯಿಗೆ ಮೀರಿ ೧೦೦	„ „	೧	೦
೧೦೦ „ „ ೧೦೦೦ ರೂ. ವರೆಗೆ	ಪ್ರತಿ ರೂ. ೧೦೦ಕ್ಕೆ ಯಾ ಅದರ ಅಂಶಕ್ಕೆ	೧	೦
೧೦೦೦ „ „ ೧೦೦೦೦	„ „ „ ೫೦೦ „	೫	೦
೧೦೦೦೦ „ „ ೩೦೦೦೦	„ „ „ ೧೦೦೦ „	೫	೦
೩೦೦೦೦ „ „ ೧೦೦೦೦೦	„ „ „ ೧೦೦೦೦ „	೫೦	೦
೧೦೦೦೦೦ „	„ ಪ್ರತಿ ರೂ. ೨೦೦೦೦ಕ್ಕೆ ಯಾ ಅದರ ಅಂಶಕ್ಕೆ	೭೫	೦

ಗೇಣಿಚೀಟಿಗೆ ಬೇಕಾದ ತಸೇ ಹಾಸಲಿನ ದರ:—

೧ ಸಂವತ್ಸರಕ್ಕಿಂತ ಕಮ್ಮಿ ವಾಯಿದೆಗಾದರೆ	ಒಟ್ಟು ಗೇಣಿ ಐವಜಿಗೆ ಸಾಲಪತ್ರ ಬರ ಕೊಡುವ ಪಕ್ಷಕ್ಕೆ ಎಷ್ಟು ಹಾಸಲು ಬೇಕೋ ಅಷ್ಟು. (ಸಾಲಪತ್ರದ ಹಾಸಲು ನೋಡು.)
೧ ಸಂವತ್ಸರಕ್ಕೆಮೀರಿ ೩ ಸಂವತ್ಸರಕ್ಕೆಮೀರದಿದ್ದರೆ	ಮೊದಲನೇ ವರ್ಷಕ್ಕೆ ಆಗುವ ಗೇಣೀ ಐವಜಿಗೆ ಸಾಲಪತ್ರ ಬರ ಕೊಡುವ ಪಕ್ಷಕ್ಕೆ ಎಷ್ಟು ಹಾಸಲು ಬೇಕೋ ಅಷ್ಟು.
೩ „ ಮೀರದಿದ್ದರೆ, ಅಥವಾ ವಾಯಿದೆ ನಮೂದಿಸದೆ ಇದ್ದರೆ	ಮೊದಲನೇ ವರ್ಷಕ್ಕೆ ಆಗುವ ಗೇಣೀ ಐವಜಿಗೆ ಪರಭಾರೆಸಾಧನ ಬರ ಕೊಡುವ ಪಕ್ಷಕ್ಕೆ ಎಷ್ಟು ಹಾಸಲು ಬೇಕೋ ಅಷ್ಟು.

ಗೇಣಿಚೀಟಿನ ಪರಭಾರೆಸಾಧನಕ್ಕೆ

ಗೇಣಿಚೀಟಿನ ಬಗ್ಯೆ ತೆರ ಬೇಕಾದ ಸ್ಟ್ಯಾಂಪು ೧೬ ರೂಪಾಯಿಗೆ ವಿಾರದಿದ್ದರೆ	ಗೇಣಿಚೀಟಿಗೆ ಬೇಕಾದಷ್ಟೆ ಸ್ಟ್ಯಾಂಪು.
ಇತರ ಸಂಗತಿಯಲ್ಲಿ	೧೬ ರೂಪಾಯಿ.

ಈ ಕೆಳಗಿನ ದಸ್ತಾವೇಜುಗಳಿಗೆ ಕಾಯಮ್ ಸ್ಟ್ಯಾಂಪ ಹಾಸಲು ಇರುತ್ತದೆ:—

ಲೆಟರ್ಸ್ ಒಫ್ ಕ್ರೇಡಿಟ್ ಎಂಬ, ಒಬ್ಬನಿಗೆ ಸಾಲ ಕೊಡುವಂತೆ ಮತ್ತೊಬ್ಬನನ್ನು ಕೇಳಿ ಕೊಳ್ಳುವ ದಸ್ತಾವೇಜು; ೨೦ ರೂಪಾಯಿ ಯಾ ಅದಕ್ಕೆ ವಿಾರಿರುವ ಯಾವದೊಂದು ಲೆಖ್ಖಾಚಾರ ಯಾ ಸಾಲವನ್ನು ಫಡಿಚಾ ಮಾಡಿ ಯಾ ಒಪ್ಪಿ ಬರಿಸೋಣಾದ ಯಾದಾಸ್ತು ಅಥವಾ ರಶೀದಿ.	೧ ಆಣೆ
ಬಿಲ್ ಒಫ್ ಲೇಡಿಂಗ್ ಎಂಬ, ಫಲಾನೆ ಮನುಷ್ಯನಿಗೆ ತಲ್ಪಿಸುವ ಬಗ್ಯೆ ಫಲಾನೆ ಸಾಮಾನುಗಳು ತನ್ನ ವಶಕ್ಕೆ ಬಂದಿರುವದಾಗಿ, ಒಂದು ಜಹಜಿನ ಯಜಮಾನನು ಯಾ ಅವನ ಮುತಾಲೀಕನು ತನ್ನ ದಸ್ಕತು ನಿಶೀ ಬರ ಕೊಡುವ ಪತ್ರ.	೪ ಆಣೆ
ಈ ಆಕ್ಟಿನಲ್ಲಿ ನಮೂದಿಸದೆ ಇರುವ ಯಾವದೊಂದು ಕರಾರು; ಒಂದು ದಸ್ತಾವೇಜನ್ನಾಗಲಿ, ಒಂದು ಲೇವಾದೇವಿಗೆ ಸಂಬಂಧವಾದ ಅನೇಕ ದಸ್ತಾವೇಜುಗಳನ್ನಾಗಲಿ ರಿಜಿಸ್ತ್ರೀ ಬಗ್ಯೆ ಹಾಜರು ಮಾಡುವಂತೆ ಮೊಕ್ತ್ಯಾರನಾಮೆ.	೮ ಆಣೆ
ದಸ್ತಾವೇಜಿನ ಕೌಂಟಪಾರ್ಟ ಯಾನೆ ಎದುರ್ನಕಲು*; ಪಾಲುಗಾರಿಕೆಯು ಅಗಲಿಕೆಯನ್ನು ಕುರಿತು ದಸ್ತಾವೇಜು; ೫೦೦ ರೂಪಾಯಿಯೊಳಗಿನ ಯಾವದೊಂದು ಕೆಲಸವನ್ನು ನಡಿಸುವ ಬಗ್ಯೆ ಕೊಡುವ ಮೊಕ್ತ್ಯಾರನಾಮೆ.	೧ ರೂಪ್ಯಾ
೫೦೦ ರೂಪಾಯಿಗೆ ವಿಾರಿದ ಯಾವದೊಂದು ಕೆಲಸವನ್ನು ನಡಿಸುವ ಬಗ್ಯೆ ಕೊಡುವ ಮೊಕ್ತ್ಯಾರನಾಮೆ; ಕಾನೂನಿಗೆ ಅನುಗುಣವಾದ ಯಾವದೊಂದು ಕಾರ್ಯದ ಬಗ್ಯೆ ತಕ್ಕ ಮೊಬಲಗಿನ ಠಸೇ ಕಾಗದದ ಮೇಲೆ ಮಾಡಿದ ದಸ್ತಾವೇಜಿಗೆ ಮಜಬೂತು ಜಾವಿಾನು ಹಾಕಿ ಬರ ಕೊಡುವ ಪತ್ರ ಅಥವಾ ಅಡಮಾನಪತ್ರ; ಸನ್ನದುಪತ್ರಗಳನ್ನು ಯಾ ಬೆಲೆಯುಳ್ಳ ಸಾಧನಗಳನ್ನು ಈಡಾಗಿಟ್ಟು ತೆಗದು ಕೊಂಡ ಸಾಲವನ್ನು ೩ ತಿಂಗಳೊಳಗೆ ವಾಪಸು ಸಲ್ಲಿಸುವಂತೆ ಮಾಡುವ ದಸ್ತಾವೇಜು; ಬಿಲ್ ಒಫ್ ಎಕ್ಸ್‌ಚೇಂಜನ್ನು ಯಾ ಪ್ರೊಮಿಸರಿ ನೋಟನ್ನು ಅಗೌರ ಪಡಿಸಿದಕ್ಕೆ ಸಾಕ್ಷಿಯಾಗಿ ಬರ ಕೊಡುವ ವಾಜ್ಮೂಲ.	೨ ರೂಪ್ಯಾ

---

* ಪರಂತು ಸರಿಯಾಗಿ ಸ್ಟ್ಯಾಂಪು ಹಾಸಲು ಕೊಟ್ಟದೆ ಎಂದು, ಅಸಲು ದಸ್ತಾವೇಜಿನ ಮೇಲೆ ಕಲ್ಲೆಕ್ಟರರಾಗಲಿ, ತಕ್ಕ ಅಧಿಕಾರ ಹೊಂದಿದ ಇತರ ಉದ್ಯೋಗಸ್ಥನಾಗಲೀ ಬರಿಯದೆ ಹೋದರೆ, ಸದರಿ ನಕಲು ಪ್ರಯೋಜನದ್ದಲ್ಲ.

ಸಾಲುಗಾರಿಕೇ ಬಾಬತು ದಸ್ತಾವೇಜು; ಅಡಮಾನಪತ್ರವನ್ನು ಮತ್ತೊಬ್ಬರಿಗೆ ವಿಕ್ರಯಿಸುವ ಪರಭಾರೆಪತ್ರ.	೪ ರೂಪ್ಯಾ
ದೇಣೇದಾರನು ಲೇಣೇದಾರನ ಪ್ರಯೋಜನಕ್ಕಾಗಿ ತನ್ನ ಸೊತ್ತನ್ನು ಪರಭಾರೆ ಮಾಡುವದಕ್ಕೆ, ಯಾ ಅವನಿಗೆ ಸಲ ತಕ್ಕ ಸಾಲಗಳಿಗೋಸ್ಕರ ಪಾವತಿ ಮಾಡುವದಕ್ಕೆ, ಅಥವಾ ಲೇಣೇದಾರನ ಪ್ರಯೋಜನಕ್ಕಾಗಿ ದೇಣೇದಾರನ ಕೆಲಸವನ್ನು ನಡಿಸುವದಕ್ಕೋಸ್ಕರ ಶರತು ನಮೂದಿಸಿ ದೇಣೇದಾರನಿಂದ ಬರಕೊಳ್ಳೋಣಾಗುವ ದಸ್ತಾವೇಜು; ಲೆಟರ್ ಒಫ್ ಲೈಸನ್ಸ್ ಎಂಬ ಅನುಜ್ಞಾಪತ್ರ; ಒಬ್ಬನು ಮತ್ತೊಬ್ಬನ ಮೇಲಾಗಲಿ ಯಾವದಾದರೊಂದು ಸೊತ್ತಿನ ಮೇಲಾಗಲಿ ಉಂಟಾಗಿರುವ ತನ್ನ ಬಾಧ್ಯತೆಯನ್ನು ಬಿಟ್ಟು ಬಿಡುವ ದಸ್ತಾವೇಜು ಯಾನೆ ಖುಲಾಸಾಪತ್ರ; ಪುತ್ರಸ್ವೀಕಾರಕ್ಕೆ ಅಧಿಕಾರ ಕೊಡುವ ದಸ್ತಾವೇಜು.	೮ ರೂಪ್ಯಾ
ಚರಸ್ಥಿರಸೊತ್ತಿನ ವಿಷಯದಲ್ಲಿ ಟ್ರಸ್ಟಿಗಳ ನೇಮಕದ ಬಗ್ಗೆ, ಅಥವಾ ಚರಸ್ಥಿರಸೊತ್ತಿನ ವಿನಿಯೋಗ ಯಾ ರಕ್ಷಣೆಯ ಬಗ್ಗೆ ಹುಟ್ಟುವ (ಮರಣ ಶಾಸನವಲ್ಲದ) ಇತರ ಪತ್ರ; ಸ್ಥಿರಸೊತ್ತಿನ ದಾನಪತ್ರ; ಹಣ ಪಾವತಿಯಾಗದ, ಅಥವಾ ಸೊತ್ತಿಗೆ ಬದಲಾಗಿ ಹಣ ಪಾವತಿ ಮಾಡುವಂತೆ ಕರಾರಾಗದ ಸ್ಥಿರಸೊತ್ತಿನ ಸಂಬಂಧವಾಗಿ ಉಂಟಾಗುವ ಬದಲಾವಣಿಪತ್ರ, ಅಥವಾ ವಿಭಾಗಪತ್ರ.	೧೬ ರೂಪ್ಯಾ

ಠಸೇ ಮೇಲೆ ಆಗ ತಕ್ಕ ಒಂದು ದಸ್ತಾವೇಜು ಬಾಶಿ ಕಾಗದದ ಮೇಲೆ ಅಥವಾ ಕಡಿಮೆ ಸ್ಟಾಂಪ ಕಾಗದದ ಮೇಲೆ ಬರಿಯಲ್ಪಟ್ಟಿದ್ದು, ಯಾವದೊಂದು ಶಿವಿಲ ಕೋರ್ಟಿನಲ್ಲಿ ಹಾಜರು ಮಾಡಲ್ಪಟ್ಟರೆ, (ಠಸೆ ತಪ್ಪಿಸಿ ಕೊಳ್ಳುವ ಇರಾದೆಯಿಂದ ಅದು ಮಾಡಿದ್ದಲ್ಲವೆಂತಾ ಕೋರ್ಟಿನವರಿಗೆ ಸಮಾಧಾನವಾದರೆ) ಈ ಕೆಳಗಿನ ದರದಲ್ಲಿ ಅದಕ್ಕೆ ಜುಲುಮಾನೆ ತೆರಬೇಕು, ಆಗ ಆ ದಸ್ತಾವೇಜಿನ ಬಗ್ಗೆ ತಕ್ಕ ಠಸೇ ಹಾಸಲು ವಸೂಲಾಯಿತೆಂದು ಅದರ ಮೇಲೆ ಸದರಿ ಕೋರ್ಟಿನವರು ಇಂಡಾರ್ಸ ಮಾಡ ತಕ್ಕದ್ದು.

ದಸ್ತಾವೇಜು ಹುಟ್ಟಿದ ಒಂದು ವರ್ಷದೊಳಗೆ ಹಾಜರು ಮಾಡಲ್ಪಟ್ಟರೆ, ತಕ್ಕ ಠಸೇ ಹಾಸಲಿನ ಐದಷ್ಟು ಮೊಬಲಗು,—೧ ವರ್ಷದ ತರುವಾಯ ಹಾಜರು ಮಾಡಲ್ಪಟ್ಟರೆ, ಇಪ್ಪತ್ತರಷ್ಟು ಮೊಬಲಗು ಜುಲುಮಾನೆಯಾಗಿರ ತಕ್ಕದ್ದು.

ಯಾವ ದಸ್ತಾವೇಜಿಗಾದರೂ ತೆರ ಬೇಕಾದ ಠಸೆ ಹಾಸಲು ಒಂದೇ ಸ್ಟಾಂಪಿನಿಂದ ಸೂಚಿಸ ತಕ್ಕದ್ದು. ಆದರೆ ಅದು ೧೦೦ ರೂಪಾಯಿಗಳಿಗೆ ಮೀರಿದರೆ, ಸದರಿ ಮೊಬಲಗು ಎರಡು ಯಾ ಹೆಚ್ಚು ಸ್ಟಾಂಪುಗಳಿಂದ ಸೂಚಿಸ ಬಹುದು.

ಇನ್ನು ಹೆಚ್ಚಿನ ವಿವರ ಬೇಕೆಂದಿರುವವರು ತಾಜಾ ಆಕ್ಟನ್ನೇ ಓದಿ ಕೊಳ್ಳಲಿ.

ಟಪ್ಪಾಲಿನ ವಿಷಯದ ಮುಖ್ಯ ಕಟ್ಟಳೆಗಳು.

ಈ ಕೆಳಗಿನ ಕ್ರಮಗಳು ಇಂಡ್ಯಾ ಗೌರ್ನಮೆಂಟೆಂಬ ಸರಕಾರದ ಕೆಳಗಿರುವ ದೇಶಗಳಲ್ಲಿ ಲಖೋಟೆಗಳು, ಕಟ್ಟುಗಳು ಮುಂತಾದ್ದನ್ನು ಒಂದು ಟಪ್ಪಾಲುಕಟ್ಟೆಯಿಂದ ಬೇರೊಂದಕ್ಕೆ ಕಳುಹಿಸುವ ವಿಷಯದಲ್ಲಿ ಏರ್ಪಡಿಸಿರುತ್ತವೆ.

ಒಂದು ಲಖೋಟೆ ಅಥವಾ ಕಟ್ಟು ಯಾವ ಮನುಷ್ಯನಿಗೆ ಮತ್ತು ಯಾವ ಊರಿಗೆ ತಲಪ ಬೇಕೋ ಆ ಮನುಷ್ಯನ ಮತ್ತು ಆ ಊರಿನ ಹೆಸರನ್ನು ಅದರ ಮೇಲ್ಗಡೆಯಲ್ಲಿ ಸ್ಪಷ್ಟವಾಗಿಯೂ ವಿರಳವಾಗಿಯೂ ಬರಿಯ ಬೇಕು. ದಸ್ತೂರಿ ತೆರುವ ಸ್ಟಾಂಪ ಚೀಟನ್ನು ಮೇಲುವಿಳಾಸದ ಬಲಗಡೆಯಲ್ಲಿ ಹಚ್ಚಿ, ಅದು ಅನ್ಯಥಾ ವಂಚನೆಯಾಗದ ಹಾಗೆ, ಅದರ ಮೇಲೆ ಗೆರೆಯಿಂದಾಗಲೀ ತಮ್ಮ ಅಂಕಿತದಿಂದಾಗಲೀ ನಿಶಾನಿ ಮಾಡ ಬಹುದು.

ಒಂದು ಲಖೋಟೆ ಅಥವಾ ಕಟ್ಟು ಟಪ್ಪಾಲಿಗೆ ಹಾಕಿದ ತರುವಾಯ, ಗೌರ್ನಮೆಂಟಿನವರ ಅಪ್ಪಣೆ ಪಡಕೊಂಡ ಹೊರ್ತು, ವಾಪಸು ಕೊಡಿಸ ಬೇಕೆಂತ ಹೇಳ ಕೂಡದು.

ಲಿಫಾಪೆಗಳು ಯಾವಾಗಲಾದರೂ ಟಪ್ಪಾಲಿಗೆ ಹಾಕ ಬಹುದು. ಟಪ್ಪಾಲು ಕೈದು ಮಾಡುವ ಒಂದು ತಾಸಿನ ಮುಂಚೆ ಬಂದ ಲಿಫಾಪೆಗಳೆಲ್ಲಾ ಕಳುಹಿಸಲ್ಪಡುವವು. ಆದರೆ ತರುವಾಯ ಬಂದವುಗಳೆಲ್ಲಾ ಮರು ಟಪ್ಪಾಲಿಗೆ ಹೋಗುವವು.

ಕೋವಿಮದ್ದು, ಗಂಧಕ, ಗಾಜಿನ ಸಾಮಾನು, ತೆಳು ಜೀನಸು ಮುಂತಾದ ಜ್ವಲನಾಸ್ಪದವಾದ, ಒಡೆಯುವ, ಅಥವಾ ಅಪಾಯಕರವಾದ ಯಾವ ತರದ ಜೀನುಸುಗಳಾದರೂ ಟಪ್ಪಾಲಿನ ದ್ವಾರಾ ಸರ್ವಥಾ ಕಳುಹಿಸೋಣಾಗಲಿಕ್ಕಿಲ್ಲ.

ನಾಣ್ಯ ಮುಂತಾದ ಬೆಲೆಯುಳ್ಳ ಪದಾರ್ಥ ಗರ್ಭಿತವಾದ ಲಖೋಟೆಯನ್ನು ಟಪ್ಪಾಲಿಗೆ ಹಾಕುವದಾದರೆ, ಅಗತ್ಯವಾಗಿ ರಿಜಿಸ್ತ್ರಿ ಮಾಡಿಸ ಬೇಕು. ಆದರೆ ಒಂದು ಲಖೋಟೆಯಲ್ಲಾಗಲೀ ಪಾರ್ಸೆಲೆಂಬ ಕಟ್ಟಿನಲ್ಲಾಗಲೀ ಒಂದು ಬೆಲೆಯುಳ್ಳ ಸಾಧನವುಂಟೆಂತ ತಿಳಿದು ಪೋಸ್ತಮಾಸ್ತರನು ಟಪ್ಪಾಲಿಗೆ ಅಂಗೀಕರಿಸಿ ಕೊಳ್ಳ ಕೂಡದು.

ಒಂದು ಲಖೋಟೆಯಾಗಲೀ ಕಟ್ಟಾಗಲೀ, ಅದು ಯಾರಿಗೆ ಮುಟ್ಟಿಸ ಬೇಕಾಗಿರುತ್ತದೋ ಅವನ ಮೇಲೆ ದ್ವೇಷದಿಂದ ಯಾರಾದರೂ ಕಳುಹಿಸಿದ್ದೆಂತ ಅದು ತಲ್ಪಿದ ಪೋಸ್ತಮಾಸ್ತರಿಗೆ ಕಂಡರೆ, ಆ ಆಫಿಸರು ಅದರ ದಸ್ತೂರಿಯನ್ನು ವಾಪಸು ಮಾಡ ಬಹುದು.

೧. ಕಾಗದಟಪ್ಪಾಲು. (Letter Post.)

ಇವುಗಳನ್ನು ಟಪ್ಪಾಲಿನ ದ್ವಾರಾ ಕಳುಹಿಸುವದಕ್ಕೆ ಕೆಳಗಿನ ನಿರಖು ಪ್ರಕಾರ ಟಪ್ಪಾಲ ಚೀಟು ಹಚ್ಚ ಬೇಕು:—

<table>
<tr><td colspan="3">ಕಾಗದಗಳು</td><td colspan="3">ರಿಜಿಸ್ತ್ರಿಯಾದ ವರ್ತಮಾನ ಪತ್ರಗಳೂ ಅಚ್ಚು ಕಾಗದಗಳೂ</td><td>ರಿಜಿಸ್ತ್ರಿಯಾಗದ ವರ್ತಮಾನಪತ್ರ ಮುಂತಾದವು</td></tr>
<tr><td colspan="3">ಭಾರದಲ್ಲಿ</td><td colspan="3">ಭಾರದಲ್ಲಿ</td><td>ಭಾರದಲ್ಲಿ</td></tr>
<tr><td>೧/೨ ತೊಲೆಗೆ</td><td>೧ ತೊಲೆಗೆ</td><td>೨ ತೊಲೆಗೆ</td><td>೧೦ ತೊಲೆಗೆ</td><td>೨೦ ತೊಲೆಗೆ</td><td>೩೦ ತೊಲೆಗೆ</td><td>೧೦ ತೊಲೆಗೆ</td></tr>
<tr><td colspan="3">ಮೀರದಿದ್ದರೆ</td><td colspan="3">ಮೀರದಿದ್ದರೆ</td><td>ಮೀರದಿದ್ದರೆ</td></tr>
<tr><td>೬ ಪೈ</td><td>೧ ಆಣೆ</td><td>೨ ಆಣೆ</td><td>೬ ಪೈ</td><td>೧ ಆಣೆ</td><td>೧೧/೨ ಆಣೆ</td><td>೧ ಆಣೆ</td></tr>
<tr><td colspan="3" rowspan="2">ಹೆಚ್ಚಿಗೆ ಪ್ರತಿ ಒಂದು ತೊಲೆಗೆ ೧ ಆಣೆ ಪ್ರಕಾರ.</td><td colspan="3">ಹೆಚ್ಚಿಗೆ ಪ್ರತಿ ೧೦ ತೊಲೆಗೆ ೬ ಪೈ ಪ್ರಕಾರ.</td><td>ಇದಕ್ಕಿಂತ ಹೆಚ್ಚಾದರೆ ಬಂಗೀ ಟಪ್ಪಾಲಿನಂತೆ ಕಳುಹಿಸಲಾದೀತು.</td></tr>
<tr><td colspan="4">ಇವೆರಡಕ್ಕೂ ದಸ್ತೂರಿ ಮುಂದಾಗಿ ಕೊಡುವದು ಅವಶ್ಯ.</td></tr>
</table>

a. ಲೇಖನಪತ್ರಗಳು.

ಕಾಗದವನ್ನು ಕಳುಹಿಸುವವನು ಅದನ್ನು ದಸ್ತೂರಿ ಮುಂದಾಗಿ ಕೊಟ್ಟು ಆಗಲೀ, (bearing) ಬೇರಿಂಗ್ ಆಗಿ ಅಂದರೆ ಕಾಗದವು ಯಾರಿಗೆ ಕಳುಹಿಸ ಬೇಕೋ ಅವನೇ ದಸ್ತೂರಿ ಕೊಡ ಬೇಕೆಂತಾಗಲೀ ಟಪ್ಪಾಲಿನ ಮೇಲೆ ಹಾಕ ಬಹುದು. ಆದರೆ ಒಬ್ಬನು ತನ್ನ ಹೆಸರಿಗೆ ಬಂದ ಕಾಗದವನ್ನು ತೆರಿಯದೆ ವಾಪಸು ಮಾಡಿದರೆ, ಅವನು ಅದರ ದಸ್ತೂರಿ ತೆರಲಿಕ್ಕೆ ಬದ್ಧನಾಗುವದಿಲ್ಲ.

ಬೇರಿಂಗ್ ಆಗಿ ಕಳುಹಿಸಲ್ಪಟ್ಟ ಕಾಗದಕ್ಕೆ ಮೇಲಿನ ನಿರಖಿನ ಇಮ್ಮಡಿ ದಸ್ತೂರಿ ವಸೂಲು ಮಾಡಲಾದೀತು.

ಟಪ್ಪಾಲದಸ್ತೂರಿಯನ್ನು ತಪ್ಪಿಸಿ ಕೊಳ್ಳುವ ಬಗ್ಯೆ ಬೇರೆ ಬೇರೆಯವರಿಗೆ ಪ್ರತ್ಯ ಪ್ರತ್ಯೇಕವಾಗಿ ಬರದ ಕಾಗದಗಳನ್ನು ಒಂದೇ ಲಿಫಾಪೆಯಲ್ಲಿ ಹಾಕಿ ಕಳುಹಿಸುವಂಥವರು ಆಕ್ಟಿನ ಪ್ರಕಾರ ಶಿಕ್ಷೆಗೆ ಪಾತ್ರರಾಗುತ್ತಾರೆ.

ತಮ್ಮ ಕಾಗದದಲ್ಲಿ ಹುಂಡಿಚೀಟು ಮುಂತಾದ ಯಾವದೊಂದು ಬೆಲೆಯುಳ್ಳ ಸಾಧನವನ್ನು ಮಲಫೂಪು ಮಾಡಿ, ಅದು ಹೆಚ್ಚು ಭದ್ರತೆಯಿಂದ ತಲಪ ಬೇಕೆಂದು ಮನಸ್ಸುಳ್ಳವರು ನಾಲ್ಕು ಆಣೆ ಕೊಟ್ಟು ಅದನ್ನು ರಿಜಿಸ್ತ್ರಿ ಮಾಡಿಸ ಬೇಕು. ಕರೆನ್ಸಿ ನೋಟುಗಳನ್ನು ಈ ಪ್ರಕಾರ ಕಳುಹಿಸುವವರು ಅದರ ಅರ್ಧವನ್ನು ಮೊದಲಾಗಿ ರವಾನಿಸಿ, ಅದು ತಲಪಿದ್ದಕ್ಕೆ ಉತ್ತರ ಬಂದ ಮೇಲೆ, ಇನ್ನೊಂದು ತುಂಡನ್ನು ಸಹಾ ಕಳುಹಿಸುವದು ಯುಕ್ತವಾಗಿರುತ್ತದೆ. ಮನಿ ಆರ್ಡರ್ ಎಂಬ ಹುಂಡಿಯಾದರೆ ಹಾಗಲ್ಲ, ಅದನ್ನು ಪ್ರತ್ಯೇಕವಾಗಿ ಒಂದು ಖಾಲಿ ಲಖೋಟೆಯಲ್ಲಿ ಕಳುಹಿಸ ಬೇಕೇ ಹೊರ್ತು, ಅದನ್ನು ಕುರಿತು ಬರದ ಕಾಗದದಲ್ಲೇ ಗರ್ಭಿಸಿ ಸರ್ವಥಾ ಕಳುಹಿಸ ಬಾರದು.

b. ರಿಜಿಸ್ತ್ರಿ ಆದ ವರ್ತಮಾನಪತ್ರಗಳೂ ಅಚ್ಚುಕಾಗದಗಳೂ.

ಮೂವತ್ತೊಂದು ದಿವಸಗಳಿಗೆ ಮೀರದ ಕಾಲಾವಧಿಯಾಗಿ ಪ್ರಕಟವಾಗುವ ಯಾವದಾದರೂ ಪ್ರಕಟಣೆಗಳು ಪೋಸ್ತಮಾಸ್ತರ ಜನರಲವರ ಆಫಿಸಿನಲ್ಲಿ ವರುಷಕ್ಕೊಮ್ಮೆ ರಿಜಿಸ್ತ್ರಿ ಮಾಡಿಸಲಾಗಿ, ಅಂಥವುಗಳು ರಿಜಿಸ್ತ್ರಿಯಾದ ವರ್ತಮಾನಪತ್ರಗಳೆನ್ನಿಸಿಕೊಳ್ಳುತ್ತವೆ. ಇಂಥಾ ಪತ್ರಿಕೆಯನ್ನು ಕಳುಹಿಸುವಾಗ ಅದರಲ್ಲಿ ಬೇರೆ ಯಾವ ಕಾಗದವಾದರೂ ವಸ್ತಾದರೂ ಗರ್ಭಿಸ ಬಾರದು; ಅದಕ್ಕೊಂದು ಕಾಗದಪಟ್ಟಿ ಸುತ್ತಿದರೂ ಚಿಂತೆ ಇಲ್ಲಾ. ಹ್ಯಾಗೂ ಅದು ಇಂಥಾ ನಂಬರಕ್ಕೆ ರಿಜಿಸ್ತ್ರಿಯಾಗಿರುತ್ತದೆಂತ ಮೇಲ್ಗಡೆಯಲ್ಲಿ ನಮೂದಿಸಿ, ಅದರ ಇಕ್ಕಡೆಯಲ್ಲಿಯೂ ಬಂದು ಮಾಡದೆ ಖುಲ್ಲಾ ಬಿಟ್ಟಿರ ಬೇಕು. ರಿಜಿಸ್ತ್ರಿ ಆದ ಪತ್ರಿಕೆಗೆ ಮೇಲೆ ನಮೂದಿಸಿದ ದರದಲ್ಲಿ ಮುಂದಾಗಿ ದಸ್ತೂರಿ ಹಚ್ಚದ ಹೊರ್ತು, ಅದು ಕಾಗದಟಪ್ಪಾಲಿನ ದ್ವಾರಾ ಕಳುಹಿಸ ಕೂಡದು. ಮತ್ತು ಒಂದೊಂದು ಪತ್ರಿಕೆಗೆ ಪ್ರತ್ಯಪ್ರತ್ಯೇಕ ದಸ್ತೂರಿ ಸಲ್ಲ ಬೇಕು.

ಅಚ್ಚುಕಾಗದಗಳು (proof-sheets) ಸಹಾ ರಿಜಿಸ್ತ್ರಿ ಆದ ಪತ್ರಿಕೆಗಿರುವ ದಸ್ತೂರಿಯ ದರದಲ್ಲಿಯೇ ಕಾಗದಟಪ್ಪಾಲಿನ ದ್ವಾರಾ ಕಳುಹಿಸ ಬಹುದು. ಆದರೆ ಕಳುಹಿಸುವವನು ಅದರಲ್ಲಿರುವ ಮಲಫೂಪುಗಳನ್ನು ಕುರಿತು ಅದರ ಮೇಲೆ ತನ್ನ ದಸ್ಕತಿನಿಂದ ಕಂಶೋಕ್ತ ಪಡಿಸ ಬೇಕು.

c. ರಿಜಿಸ್ತ್ರಿ ಆಗದ ವರ್ತಮಾನಪತ್ರಗಳು ಮುಂತಾದ್ದು.

ಹತ್ತು ತೊಲೆಗಳಿಗೆ ಮೀರದೆ ಇರುವ ಯಾವದೊಂದು ಲಿಫಾಪೆಯು, ಅದರ ಮಲಫೂಪುಗಳು ಪರೀಕ್ಷೆ ಬಗ್ಯೆ ಹೊರಗೆ ತೆಗಿಯಲಿಕ್ಕಾಗುವ ಹಾಗೆ, ಇಕ್ಕಡೆಯಲ್ಲಿಯೂ ಖುಲ್ಲಾ ಬಿಟ್ಟು ಕಳುಹಿಸಿದರೆ, ೧ ಆಣೆ ದಸ್ತೂರಿಯಲ್ಲಿ ಹೋಗುವದು. ಇಂಥಾದ್ದು ರಿಜಿಸ್ತ್ರಿ ಆಗದ ಪತ್ರಿಕೆ ಎಂದನ್ನಿಸಿ ಕೊಳ್ಳುತ್ತದೆ. ಬಂದು ಮಾಡಲ್ಪಟ್ಟ ಯಾವ ಕಾಗದವಾದರೂ ಈ ಟಪ್ಪಾಲಿನ ದ್ವಾರಾ ಕಳುಹಿಸೋಣಾಗಲಿಕ್ಕಿಲ್ಲ.

೨. ಬಂಗೀ ಟಪ್ಪಾಲು. (Banghy Post.)

ಇಂಥಾದ್ದಕ್ಕೆ ಟಪ್ಪಾಲು ಹಾಸಲಿನ ದರ ಯಾವದಂದರೆ:—

ಭಾರದಲ್ಲಿ	೨೦ ತೊಲೆಗೆ ಮಿಾರದಿದ್ದರೆ	೩೦ ತೊಲೆಗೆ ಮಿಾರದಿದ್ದರೆ	ಪ್ರತಿ ಹೆಚ್ಚಿಗೆ ೧೦ ತೊಲೆಗೆ
ಪಾರ್ಸೆಲು	೪ ಆಣೆ	೬ ಆಣೆ	೨ ಆಣೆ
ಪೇಕೆಟು	೨ ಆಣೆ	೩ ಆಣೆ	೧ ಆಣೆ

ಪಾರ್ಸೆಲಿಗೂ ಪೇಕೆಟಿಗೂ ಹೆಚ್ಚು ಕಡಿಮೆ ಏನಂದರೆ: (1) ಪೇಕೆಟು ಉಭಯ ಕಡೆಗಳಲ್ಲಿ ಮುಚ್ಚದೆ ಖುಲ್ಲಾ ಇರ ಬೇಕು; ಆದರೆ, ಪಾರ್ಸೆಲು ಕಳುಹಿಸುವವನ ಮುನಾಸಬು ಮೇರೆಗೆ ಬಂದು ಮಾಡ ಬಹುದು. (2) ಪಾರ್ಸೆಲು ರಿಜಿಸ್ಟ್ರೀ ಕ್ರಮದ ಮೇಲೆ ಕಳುಹಿಸೋಣಾಗುತ್ತದೆ, ಆದರೆ ಪೇಕೆಟು ಹಾಗಲ್ಲ. (3) ಪೇಕೆಟಿಗೆ ಮುಂದಾಗಿ ದಸ್ತೂರಿ ಹಚ್ಚದೆ ನಿರ್ವಾಹವಿಲ್ಲ; ಆದರೆ ಪಾರ್ಸೆಲಿಗೆ ದಸ್ತೂರಿ ಹಚ್ಚುವದಾಗಲಿ ಹಚ್ಚದೆ ಇರುವದಾಗಲಿ ಕಳುಹಿಸುವವನ ಮುನಾಸಬು ಆಗಿರುತ್ತದೆ. (4) ಒಂದು ಕಾಗದಕ್ಕಿಂತ ಹೆಚ್ಚು ಪಾರ್ಸೆಲಿನಲ್ಲಿ ಗರ್ಭಿಸ ಕೂಡದು; ಪೇಕೆಟಿನಲ್ಲಿ ಕಾಗದವಾಗಲೀ ನೋಡದ ಹಾಗೆ ಬಂದು ಮಾಡಿದ ಯಾವ ವಸ್ತಾಗಲೀ ಗರ್ಭಿಸ ಕೂಡದು.

ಪೇಕೆಟಿನಲ್ಲ್ಯಾಗಲೀ ಪಾರ್ಸೆಲಿನಲ್ಲ್ಯಾಗಲೀ ಕಳುಹಿಸುವ ವಡವೆಗಳನ್ನು ಕುರಿತು, ಮೇಲೆ ನಮೂದಿಸಿದ ಸಂಗತಿಗಳ ಹೊರ್ತು, ಬೇರೇನೂ ನಿಬಂಧನೆ ಇರುವದಿಲ್ಲ.

ಒಂದು ಪಾರ್ಸೆಲಿಗೆ ಮುಂದಾಗಿ ದಸ್ತೂರಿ ಕೊಡದಿದ್ದಾಗ್ಯೂ, ದಸ್ತೂರಿ ಮುಂದಾಗಿ ಕೊಡುವದಾದರೆ ಯಾವ ದರದಲ್ಲಿ ಕೊಡ ಬೇಕಿತ್ತೋ ಅದೇ ದರದಲ್ಲಿ ವಸೂಲು ಮಾಡಲಾಗುವದು. ಹೀಗಿರುವದರಿಂದ ಒಂದಕ್ಕೆ ಹಚ್ಚಿದ ದಸ್ತೂರಿ ಕಡಿಮೆಯಾಗಿದ್ದ ಪಕ್ಷಕ್ಕೆ ಆ ಕಡಿಮೆಯಾಗಿದ್ದಷ್ಟು ಅಂಶ ಮಾತ್ರ ಕೊಡ ಬೇಕಷ್ಟೆ.

ಒಂದು ಪಾರ್ಸೆಲು ರವಾನೇ ಬಗ್ಗೆ ಟಪ್ಪಾಲುಕಟ್ಟೆಯಲ್ಲಿ ಒಪ್ಪಿಸಿದ ಮನುಷ್ಯನು ಅದಕ್ಕಾಗಿ ರಶೀದಿ ಹೊಂದುವನು. ಅದು ಬಟ್ಟೆಯಲ್ಲಿ ಆಗಲೀ ಮೇಣದ ವಸ್ತ್ರದಲ್ಲ್ಯಾಗಲೀ ತವರದ ತಗಡಿನಲ್ಲ್ಯಾಗಲೀ ಸುತ್ತಿ ಕಟ್ಟಿ ತರ ಬೇಕು. ಅದು ವಸ್ತ್ರದಲ್ಲಿ ಕಟ್ಟಿದ ಪಕ್ಷಕ್ಕೆ, ಅದರ ಹೊಲಿಗೆಯ ಮೇಲೆ ಮೂರು ಇಂಚಿಗೆ ಮಿಾರದ ದೂರದಲ್ಲಿ (ಚಲಾವಣಿ ನಾಣ್ಯವಲ್ಲದ) ಮುದ್ರೆಯಿಂದ ಮೊಹರು ಹಾಕ ಬೇಕು.

ಪಾರ್ಸೆಲು ಯಾರಿಗೆ ಕಳುಹಿಸೋಣಾಗುತ್ತದೋ ಆ ಮನುಷ್ಯನು ಅದು ತನಗೆ ತಲಪಿದ್ದಕ್ಕೆ ರಶೀದಿ ಕೊಡ ಬೇಕು.

೨೫ ಶೇರು(ಅಂದರೆ ೨೦೦ ತೊಲೆ)ಗಳಿಗೆ ಮಿಾರಿರುವ ಯಾವ ಪಾರ್ಸೆಲನ್ನಾದರೂ ಟಪ್ಪಾಲಿನ ದ್ವಾರಾ ಕಳುಹಿಸೋಣಾಗಲಿಕ್ಕಿಲ್ಲ. ಒಂದು ಪೇಕೆಟು ೧⅔ ಫೂಟ್ ಉದ್ದ, ೧ ಫೂಟ್ ಅಗಲ ಅಥವಾ ದಪ್ಪಕ್ಕೆ ಮಿಾರ ಕೂಡದು; ಮಿಾರಿದರೆ, ಅದು ಪಾರ್ಸೆಲೆಂತ ಎಣಿಸಲಾಗಿ, ಆ ರೀತಿ ದಸ್ತೂರಿ ವಸೂಲು ಮಾಡಲಾಗುವದು.

ಕೋಷ್ಟಕ.

೧. ಚಿನ್ನ ಬೆಳ್ಳಿಗಳ ತೂಕ.

ವೀಸ.				
೪	೧ ಹಾಗ.			
೮	೨ ,,	೧ ಅಡ್ಡ.		
೧೬	೪ ,,	೨ ,,	೧ ಹಣ.	
೧೪೪	೩೬ ,,	೧೮ ,,	೯ ,,	೧ ವರಹ.

೩ ವರಹ ೩ ಹಣತೂಕ ಅಂದರೆ: ೧ ರೂಪಾಯಿತೂಕ; ಆದರೆ ಬಹಳ ತೂಕವುಳ್ಳದ್ದನ್ನು ಒಂದೇ ಸಾರಿ ಕೊಂಡು ಕೊಳ್ಳುವದರಲ್ಲಿಯೂ ಮಾರುವದರಲ್ಲಿಯೂ ೩ ವರಹ ೩ ಹಣ ತೂಕ ೩ ಹಾಗ ಅಂದರೆ: ೧ ರೂಪಾಯಿತೂಕ ಆಗುವದು.

೨. ಸಾಧಾರಣ ತೂಕ.

ವರಹತೂಕ.					
೩⅓	೧ ರೂಪಾಯಿತೂಕ.				
೮೦	೨೪ ,,	೧ ಶೇರು.			
೧೩೩⅓	೪೦ ,,	೧⅔ ,,	೧ ರಾತಲು.		
೯೬೦	೨೮೮ ,,	೧೧⅔ ,,	೭ ,,	೧ ಥಡೆ.	
೩೪೮೦	೧೧೨೦ ,,	೪೬⅔ ,,	೨೮ ,,	೪ ,,	೧ ಮಣ.
೭೬೮೦೦	೨೨೪೦೦ ,,	೯೩೩⅓ ,,	೫೬೦ ,,	೮೦ ,,	೨೦ ,, ೧ ಖಂಡಿ.

೩. ಈಗ ನಡೆಯುವಂಥ ಉಪ್ಪಿನ ಮುಂಬಯಿ ಅಳತೆ.

ರೂಪಾಯಿತೂಕ.			
೮೦	೧ ಶೇರು.		
೩೨೦೦	೪೦ ,,	೧ ಮಣ.	
೩೮೪೦೦೦	೪೮೦೦ ,,	೧೨೦ ,,	೧ ಗಾರಸು.

ಸರಕಾರ ಕೋಠಿಗಳಲ್ಲಿ ಉಪ್ಪು ಮಾರುವ ರೀತಿ ಇದೇ.

೪. ಮರಗಳ ಅಳತೆ.

ವೀಸ.		
೧೬	೧ ಅಂಗುಲ.	
೩೮೪	೨೪ ,,	೧ ಗಜ ಯಾನೆ ಕೋಲು.

ಮರದ ಖಂಡಿ ಅಂದರೆ: ೨೪ ಕೋಲು ಉದ್ದವೂ, ೧೨ ಅಂಗುಲ ಅಗಲವೂ, ೧ ಅಂಗುಲ ದಪ್ಪವೂ ಆಗಿರುವಂಥಾದ್ದು. ಆದರೆ ಬೇರೆ ಶೀಮೆಗಳಲ್ಲಿ ಖಂಡಿ ಎರಡಷ್ಟು ದೊಡ್ಡದಾಗಿ, ಉದ್ದದಲ್ಲಿಯೂ ಅಗಲದಲ್ಲಿಯೂ ದಪ್ಪದಲ್ಲಿಯೂ ಒಂದು ಕೋಲಿನ ಪ್ರಮಾಣವುಳ್ಳದಾಗಿದೆ.

ಕೊಡಗು ದೇಶದ ಸರಕಾರ ಉದ್ಯೋಗಸ್ಥರು.

(೧೮೭೬ನೇ ಆಗೋಸ್ತು ಆಖೈರ ವರಿಗೆ.)

ಹೆಸರು	ಉದ್ಯೋಗ	ಪ್ರಾರಂಭ ನೇಮಕವಾದ ತಾರೀಕು	ಪ್ರಕೃತದ ಉದ್ಯೋಗಕ್ಕೆ ನೇಮಕವಾದ ತಾರೀಕು
Captain E. Shaw ಕೆಪ್ಟನ್ ಈ. ಷಾ ಸಾಹೇಬರು	ಆಫಿಷಿಯೇಟಿಂಗ್ ಸುಪರಿಂಟೆಂಡೆಂಟ	೧೪ನೇ ಜೂನ್ ೧೮೬೪	೧೫ನೇ ಫೆಬ್ರುವರಿ ೧೮೭೬
H. M. S. Magrath Esq. ಹ. ಮ. ಸ. ಮಗ್ರಾತ್ ಸಾಹೇಬರು	ಫಸ್ಟ ಅಶಿಷ್ಟಾಂಟ ಸುಪರಿಂಟೆಂಡೆಂಟ	೨೫ನೇ ನವಂಬರ ೧೮೭೬	ಸದರ
ಚಪ್ಪುಡಿ ಸುಬ್ಬಯ್ಯನವರು .	ಸೆಕೆಂಡ್ ಅಶಿಷ್ಟಾಂಟ ಸುಪರಿಂಟೆಂಡೆಂಟ	೨೦ನೇ ನವಂಬರ ೧೮೪೭	೧ನೇ ಜನವರಿ ೧೮೬೪
Mr. J. D'Vaz ಮಿಸ್ತರ್ ಜೆ. ಡಿ ವಾಜ್	ಮೆನೇಜರ್	೧ನೇ ಎಪ್ರಿಲ್ ೧೮೬೯	೧ನೇ ಎಪ್ರಿಲ್ ೧೮೬೯
Mr. A. Dunning ಮಿಸ್ತರ್ ಎ. ಡನ್ನಿಂಗ್	ಹೆಡ್ ಕ್ಲರ್ಕ	೧ನೇ ಸಪ್ತಂಬರ ೧೮೭೨	೧ನೇ ಸಪ್ತಂಬರ ೧೮೭೨
ಸ. ಶಂಕ್ರನಾರಣಯ್ಯ . . .	ಹೆಡ್ ಎಕೌಂಟಾಂಟ	೧ನೇ ಜುಲಾಯಿ ೧೮೬೪	೨೩ನೇ ಜುಲಾಯಿ ೧೮೬೯
ಎ. ಪಿ. ಸುಬ್ಬಯ್ಯ	ಕಂಪೈಲಿಂಗ್ ಬ್ರಾಂಚ್ ಸದರ್	೧೫ನೇ ಎಪ್ರಿಲ್ ೧೮೬೮	೩ನೇ ಮೇ ೧೮೭೨

ಹುಜೂರು ರೆವಿನ್ಯು ಇಲಾಖಾ.

ಪ. ಅಪ್ಪಣ್ಣನವರು	ಹೆಡ್ ಶಿರಸ್ತೇದಾರ್	೧ನೇ ಮೇ ೧೮೬೨	೨೮ನೇ ದಶಂಬರ ೧೮೭೩
ಉ. ಮಂದಣ್ಣನವರು ...	ನಾಯಬ್ ಶಿರಸ್ತೇದಾರ್	೧ನೇ ಜುಲಾಯಿ ೧೮೪೮	೧೨ನೇ ಜನವರಿ ೧೮೭೬
ಚ. ತಿಂಮ್ಮೈಯ್ಯ	ಹೆಡ್ ಮುನಶಿ	೧ನೇ ಜನವರಿ ೧೮೬೭	೧ನೇ ಜುಲಾಯಿ ೧೮೭೪
ರಾಮೈಯ್ಯ	ನೇಟಿವ್ ಹೆಡ್ ಎಕೌಂಟಾಂಟ		೧ನೇ ಜನವರಿ ೧೮೭೬

ಹುಜೂರು ಜುಡಿಶಿಯಲ್ ಇಲಾಖಾ.

ಹ. ಶಾಮಣ್ಣನವರು ...	ಜುಡಿಶಿಯಲ್ ಶಿರಸ್ತೇದಾರ್	೧೭ ಜುಲಾಯಿ ೧೮೪೩	೧ನೇ ಮಾರ್ಚ್ ೧೮೬೩
ಮ. ಸೋಮೈಯ್ಯ.....	ಹೆಡ್ ಮುನಶಿ		೮ನೇ ಜನವರಿ ೧೮೭೬

ಹುಜೂರು ಅಬ್ಕಾರಿ ಇಲಾಖಾ.

ಪ. ಮಾದೈಯ್ಯ	ಮೆನೇಜರ್	೬ನೇ ಒಕ್ಟೋಬರ ೧೮೩೧	೧೨ನೇ ಸಪ್ಟಂಬರ ೧೮೭೦
ಕೊ. ಅಪ್ಪಯ್ಯ	ಹೆಡ್ ಮುತ್ಸದ್ದಿ	೧ನೇ ಮೇ ೧೮೩೮	೧ನೇ ಸಪ್ಟಂಬರ ೧೮೭೦

ಕೊಡಗು ಟ್ರೆಜರಿ ಇಲಾಖಾ.

ಬಿ. ಐಯಪ್ಪ	ಖಜಾನ್‌ಜಿ	೬ನೇ ಫೆಬ್ರುವರಿ ೧೮೬೨	೨ನೇ ಎಪ್ರಿಲ್ ೧೮೭೪
ರ. ಸುಬ್ಬರಾವ್	ಹೆಡ್ ಮುತ್ಸದ್ದಿ	೧೮ನೇ ಜೂನ್ ೧೮೬೨	೧ನೇ ಜನವರಿ ೧೮೭೪
ಕ. ಪೂವೈಯ್ಯ	ಹೆಡ್ ಎಕೌಂಟಾಂಟ	೬ನೇ ಒಕ್ಟೋಬರ ೧೮೬೮	೨ನೇ ಎಪ್ರಿಲ್ ೧೮೭೪

ಫಸ್ಟ್ ಅಶಿಷ್ಟಾಂಟ್ ಸುಪರಿಂಟೆಂಡೆಂಟ್ ಆಫಿಸ್.

ನ. ಮೊಣ್ಣಪ್ಪ.......	ನಾಯಬ್ ಶಿರಸ್ತೇದಾರ್		೧೨ನೇ ಜನವರಿ ೧೮೭೬

ಹೆಸರು	ಉದ್ಯೋಗ	ಪ್ರಾರಂಭ ನೇಮಕವಾದ ತಾರೀಕು	ಪ್ರಕೃತದ ಉದ್ಯೋಗಕ್ಕೆ ನೇಮಕವಾದ ತಾರೀಕು
ಬಿ. ಕಾಳಪ್ಪ	ಹೆಡ್ ಮುನಶಿ	೧ನೇ ಜೂನ್ ೧೮೬೩	೧ನೇ ಜೂನ್ ೧೮೭೩
ವಾಸುದೇವರಾವ್	ಕ್ಲರ್ಕ್	೩ನೇ ಮಾರ್ಚಿ ೧೮೭೩	೨೫ನೇ ಜನವರಿ ೧೮೭೫
	ಸೆಕೆಂಡ್ ಅಶಿಷ್ಟಾಂಟ್ ಸುಪರಿಂಟೆಂಡೆಂಟ್ ಆಫಿಸ್.		
ಸು. ತಿರುನಾರಣೈಯ್ಯಂಗಾರ್	ನಾಯಬ್ ಶಿರಸ್ತೇದಾರ್	೧ನೇ ಜೂನ್ ೧೮೫೪	೬ನೇ ಒಕ್ಟೋಬರ ೧೮೭೫
ತೊ. ಕಾರ್ಯಪ್ಪ	ಹೆಡ್ ಮುನಶಿ	೨ನೇ ಒಕ್ಟೋಬರ ೧೮೫೬	೧ನೇ ಮೇ ೧೮೭೪
ಲ. ಶ್ರೀನಿವಾಸೈಯ್ಯಂಗಾರ್	ಕ್ಲರ್ಕ್	೯ನೇ ಜನವರಿ ೧೮೬೦	೧೩ನೇ ಮೇ ೧೮೭೪
	ಮಡಿಕೇರಿ ತಾಲೂಕು.		
ಬಿ. ಕಾರ್ಯಪ್ಪ.......	ಸುಬೇದಾರ್	೧ನೇ ಫೆಬ್ರುವರಿ ೧೮೫೪	೧೨ನೇ ಜನವರಿ ೧೮೭೬
ಕೆ. ಸೋಮೈಯ್ಯ	ಶಿರಸ್ತೇದಾರ್		೧ನೇ ಜನವರಿ ೧೮೭೬
ಅ. ಮಂದಣ್ಣ	ಮಡಿಕೇರಿ ಹಾಲೇರಿನಾಡು ಪಾರುಪತ್ಯಗಾರ್		೧೨ನೇ ಜನವರಿ ೧೮೭೬
ಪೂಣಚ್ಚ	ಉಲುಗುರಿಮೂಡಿಗೇರಿನಾಡು ಸದರ		೧೪ನೇ ಜುಲಾಯಿ ೧೮೭೫
ಬಿ. ಮಂದಣ್ಣ	ಹುದಿಕೇರಿಕಾಂತಮೂರ್ನಾಡು ಸದರ		೧ನೇ ನವಂಬರ ೧೮೭೫
ಪ. ಉತ್ತೈಯ್ಯ	ಕಗ್ಗೊಡಲ್‌ನಾಡು ಸದರ		೧ನೇ ಮೇ ೧೮೭೫
ಕೊ. ಉತ್ತೈಯ್ಯ	ಹೊರೂರುನೂರೊಕ್ಲುನಾಡು ಸದರ		
	ಪಾಡಿನಾಲ್ಕುನಾಡು ತಾಲೂಕು.		
ಪು. ಅಪ್ಪಯ್ಯ	ಸುಬೇದಾರ್		೧ನೇ ಮೇ ೧೮೭೦
ಶ್ರೀನಿವಾಸೈಯ್ಯಂಗಾರ್ ..	ಶಿರಸ್ತೇದಾರ್	೧೭ನೇ ಜನವರಿ ೧೮೬೦	೧೮ನೇ ಒಕ್ಟೋಬರ ೧೮೭೩
ಕು. ಚಂಗಪ್ಪ	ಪಾಡಿನಾಲ್ಕುನಾಡು ಪಾರುಪತ್ಯಗಾರ್	೧ನೇ ಮಾರ್ಚಿ ೧೮೬೪	೧೧ನೇ ಎಪ್ರಿಲ್ ೧೮೭೬

ಮು. ಚಟ್ಟಿಚ್ಚ	ಕಡಿಯತ್ತುನಾಡು ಪಾರುಪತ್ಯಗಾರ್	೨೬ನೇ ಒಕ್ಟೋಬರ ೧೮೭೧	೨೬ನೇ ಒಕ್ಟೋಬರ ೧೮೭೧
ಚ. ಪೊನ್ನಪ್ಪ.......	ಕುಯಂಗೇರಿನಾಡು ಸದರ		೧ನೇ ಜುಲಾಯಿ ೧೮೭೬
ಜೋಯಪ್ಪ	ಬೇಂಗುನಾಡು ಸದರ	೧೨ನೇ ಮೇ ೧೮೫೬	೨೫ನೇ ಜುಲಾಯಿ ೧೮೭೨
ಪ. ದೇವೈಯ್ಯ.......	ತಾವುನಾಡು ಸದರ	೧ನೇ ನವಂಬರ ೧೮೬೨	೨೨ನೇ ಮೇ ೧೮೭೬

ಎಡೆನಾಲ್ಕುನಾಡು ತಾಲೂಕು.

ಕೊ. ಗಣಪತಿ	ಸುಬೇದಾರ್	೧ನೇ ನವಂಬರ ೧೮೬೨	೧೨ನೇ ಜನವರಿ ೧೮೭೬
ನಂಜಪ್ಪ	ಶಿರಸ್ತೇದಾರ್		೧೫ನೇ ಎಪ್ರಿಲ್ ೧೮೭೬
ಮ. ಬೆಳ್ಳಪ್ಪ.......	ಎಡೆನಾಲ್ಕುನಾಡು ಪಾರುಪತ್ಯಗಾರ್		೧೫ನೇ ಮೇ ೧೮೭೬
ಪಾ. ಪೊನ್ನಪ್ಪ.......	ಬೆಪ್ಪುನಾಡು ಸದರ	೧ನೇ ಅಗೊಸ್ತು ೧೮೫೪	೧ನೇ ಜೂನ್ ೧೮೭೩
ಕೊ. ಕಾರ್ಯಪ್ಪ.......	ಅಮ್ಮತ್ತಿನಾಡು ಸದರ	೧ನೇ ಅಗೊಸ್ತು ೧೮೬೮	೧೨ನೇ ಫೆಬ್ರುವರಿ ೧೮೭೫

ಕಿಗ್ಗಟ್ಟುನಾಡು ತಾಲೂಕು.

ಕೊ. ಮುದ್ದೈಯ್ಯ	ಸುಬೇದಾರ್		೨೮ನೇ ಮೇ ೧೮೭೫
ಅಚ್ಚಮ್ಮ	ಶಿರಸ್ತೇದಾರ್	೧ನೇ ಒಕ್ಟೋಬರ ೧೮೫೯	೧೫ನೇ ಎಪ್ರಿಲ್ ೧೮೭೬
ಕ. ಕಾರ್ಯಪ್ಪ.......	ಅಂಜಿಗೇರಿನಾಡು ಪಾರುಪತ್ಯಗಾರ್	೧ನೇ ಜುಲಾಯಿ ೧೮೬೪	೧೫ನೇ ಮೇ ೧೮೭೪
ಐ. ಮಾಚೈಯ್ಯ	ಹತ್ತುಗಟ್ಟುನಾಡು ಸದರ	೧ನೇ ಜನವರಿ ೧೮೬೯	೧ನೇ ಜೂನ್ ೧೮೭೬
ಕೆ. ಮೇದೈಯ್ಯ	ತಾವಳಗೇರಿಮೂರ್ನಾಡು ಸದರ	೧೫ನೇ ಸಪ್ತಂಬರ ೧೮೫೮	೧ನೇ ಜುಲಾಯಿ ೧೮೭೬
ಪ. ಕಾರ್ಯಪ್ಪ.......	ಬೆಟ್ಯತ್ತುನಾಡು ಸದರ		೧ನೇ ಅಗೊಸ್ತು ೧೮೭೬

ನಂಜರಾಯಪಟ್ಣ ತಾಲೂಕು.

ಪ. ಮಂದಂಣ.......	ಸುಬೇದಾರ್	೧ನೇ ಸಪ್ತಂಬರ ೧೮೫೧	೧ನೇ ಮೇ ೧೮೭೨
ಪುಟ್ಟಂಣೈಯ್ಯ	ಶಿರಸ್ತೇದಾರ್		೧ನೇ ಜನವರಿ ೧೮೭೬

ಹೆಸರು	ಉದ್ಯೋಗ	ಪ್ರಾರಂಭ ನೇಮಕವಾದ ತಾರೀಕು	ಪ್ರಕೃತದ ಉದ್ಯೋಗಕ್ಕೆ ನೇಮಕವಾದ ತಾರೀಕು
ಪೂವೈಯ್ಯ	ನಂಜರಾಯಪಟ್ಣದ ಹೋಬಳಿ ಪಾರುಪತ್ಯಗಾರ್		೨೦ನೇ ಜೂನ್ ೧೮೭೬
ಕೆ. ಬಿದ್ದೈಯ್ಯ........	ರಾಮಸ್ವಾಮಿಕಣಿವೆ ಸದರ		೧ನೇ ಜುಲಾಯಿ ೧೮೭೫
ನಂಜಪ್ಪ	ಎಡವನಾಡು ಸದರ	೭ನೇ ಅಗೊಸ್ತು ೧೮೬೫	೨೯ನೇ ಎಪ್ರಿಲ್ ೧೮೭೫
ಉತ್ತೈಯ್ಯ........	ಗಡಿನಾಡುಮುತ್ತನಾಡು ಸದರ		೧೩ನೇ ಒಕ್ಟೋಬರ ೧೮೭೦
	ಏಳುಸಾವಿರಶೀಮೆ ತಾಲೂಕು.		
ಬಿ. ಮುತ್ತಂಣ........	ಸುಬೇದಾರ್	೧ನೇ ಎಪ್ರಿಲ್ ೧೮೪೯	೧ನೇ ಮೇ ೧೮೭೨
ನಂಜಂಣ	ಶಿರಸ್ತೇದಾರ್	೧ನೇ ಜೂನ್ ೧೮೬೨	೧ನೇ ಜೂನ್ ೧೮೭೪
ಮ. ಕುಶಾಲಪ್ಪ........	ಕೊಡ್ಲಿ ಹೋಬಳಿ ಪಾರುಪತ್ಯಗಾರ್	೧ನೇ ನವಂಬರ ೧೮೬೨	೭ನೇ ಎಪ್ರಿಲ್ ೧೮೭೬
ತಿಮ್ಮಪ್ಪ	ಬಿಳಹದ ಹೋಬಳಿ ಸದರ	೧ನೇ ಒಕ್ಟೋಬರ ೧೮೬೬	೧ನೇ ಮಾರ್ಚ ೧೮೭೩
ನಂಜಪ್ಪ	ನಿಡುತದ ಹೋಬಳಿ ಸದರ		೨೪ನೇ ಫೆಬ್ರವರಿ ೧೮೭೬
	ರಿಜಿಸ್ತ್ರೇಶನ್ ಇಲಾಖಾ.		
ಚ. ಕಾರ್ಯಪ್ಪ	ಕ್ಲರ್ಕ		೧ನೇ ಏಪ್ರಿಲ್ ೧೮೭೫
	ಮಹದೇವಪ್ಪಾಟಿ.		
ಕು. ಚಿಂಣಪ್ಪ	ಸುಬೇದಾರ್	೧ನೇ ನವಂಬರ ೧೮೬೨	೧೨ನೇ ಜನವರಿ ೧೮೭೬
ತೆ. ಪೂವೈಯ್ಯ......	ಹೆಡ್ ಮುತ್ಸದ್ದಿ		೧೫ನೇ ಜನವರಿ ೧೮೭೬
ಮ. ಮಹಮ್ಮದ್ ಹುಸೇನ್.	ಪೊಲೀಸ್ ಪಾರುಪತ್ಯಗಾರ್		
	ವೀರರಾಜೇಂದರಪ್ಪಾಟಿ.		
ಚಿ. ದೇವೈಯ್ಯ......	ಸುಬೇದಾರ್	೧೦ನೇ ನವಂಬರ ೧೮೫೭	೧ನೇ ಮೇ ೧೮೭೨
ಕೃಷ್ಣಯ್ಯಂಗಾರ್	ಹೆಡ್ ಮುತ್ಸದ್ದಿ	೧೫ನೇ ಎಪ್ರಿಲ್ ೧೮೫೭	೧೫ನೇ ಎಪ್ರಿಲ್ ೧೮೭೬

ದೇವರ ದಯವಿದ್ದರೆ ತಾಯಿಯಿಲ್ಲದವನಿಗೆ

ಕರಡಿಯಾದರೂ ತಾಯಿಯ ಹಾಗಾಗ ಬೇಕು.

೧೭೮೯ನೇ ಇಸ್ವಿಯ ಜನವರಿ ತಿಂಗಳಲ್ಲಿ ವಿಲಾಯತಿಯಲ್ಲೆಲ್ಲಾ ಕೇವಲ ಅಪೂರ್ವ ಛಳಿಯಾಯಿತು. ಅಂದಿನ ಹಿಮಕಾಲದಲ್ಲಿ ಅನೇಕಾನೇಕರು ದಾರಿಯಲ್ಲಿ ಮಾತ್ರವಲ್ಲಾ, ಮನೆಯಲ್ಲಿಯೂ ಮಂಚದಲ್ಲಿಯೂ ಛಳಿಯನ್ನು ತಡೆಯಲಾರದೆ ಸತ್ತು ಹೋದರು. ಅಗಿಷ್ಟಿಕೆಯಲ್ಲಿ ಬೆಂಕಿ ಚನ್ನಾಗಿ ಉರಿದರೂ, ಕೋಣೆ ಬೆಚ್ಚಗಾಗವಲ್ಲದು. ಬೆಂಕಿಯ ಹತ್ತರದಲ್ಲ್ಯಾದರೂ ನೀರು ಛಳಿಯಿಂದ ಗಾಜಿನಷ್ಟು ಘಟ್ಟಿಯಾಗಿ ಹೋಗುವದು. ಗುಬ್ಬಿ ಕಾಗೆ ಇತ್ಯಾದಿ ಪಕ್ಷಿಗಳೂ, ಮಿಾನುಗಳೂ, ಮೊಲ ಜಿಂಕೆ ಮೊದಲಾದ ಕಾಡು ಮೃಗಗಳೂ ರಾಶಿರಾಶಿಯಾಗಿ ಸತ್ತು ಹೋದವು. ಚಾನವೃಕ್ಷ, ದೇವದಾರು ಮುಂತಾದ ದೊಡ್ಡ ದೊಡ್ಡ ಮರಗಳು ಗರ್ಜನೆಯೊಂದಿಗೆ ಬಿರಿದು, ಶೀಳಿ ಹೋದವು. ಕರಿ ಕಲ್ಲು, ಬಂಡೆ ಇತ್ಯಾದಿ ಪಾಷಾಣಗಳಾದರೂ ಛಳಿಯಿಂದ ಒಡದು ಹೋದವು.

ಆ ಕಾಲದಲ್ಲಿ ಸವೊಯಿ ಶೀಮೆಯಲ್ಲಿ ಹುಟ್ಟಿದ ಅನಾಥ ಹುಡುಗರಿಬ್ಬರು ಫ್ರೆಂಚ ದೇಶದ ಒಂದು ಪಟ್ಣದಲ್ಲಿ ಚಿಲ್ಲರೆ ಚಾಕ್ರಿಗಳನ್ನು ಮಾಡುವವರಾಗಿಯೂ ಭಿಕ್ಷೆ ಬೇಡುವವರಾಗಿಯೂ ಬಹಳ ಕಷ್ಟದ ಕಾಲಕ್ಷೇಪ ಮಾಡುತ್ತಿದ್ದರು. ಆದರೆ ಒಂದಾನೊಂದು ದಿನ ಹಿರಿಯನು ಯಾರದೊಂದು ಕಾಗದವನ್ನು ಬೇರೊಂದೂರಿಗೆ ತಕ್ಕೊಂಡು ಹೋಗಿ ಮುಟ್ಟಿಸ ಬೇಕೆಂತ ಹೊರಟು, ದಾರಿಯಲ್ಲಿ ಛಳಿಯಿಂದಲೂ ಹಶಿವೆಯಿಂದಲೂ ದಣಿದು, ಸೋತು ಹೋಗಿ, ಪ್ರಾಣ ಕಳದನು. ಅಣ್ಣ ತಿರಿಗಿ ಬಾರದೆ ಹೋದ್ದರಿಂದ, ಕಿರಿಯನು ಒಂಟಿಗನಾಗಿ ಪರದೇಶದಲ್ಲಿ ಉಳಿದು, ಮತ್ತಷ್ಟು ಕಷ್ಟಕ್ಕೆ ಗುರಿಯಾಗಿ ಹೋಗುವ ಹಾಗಾದನು. ರಾತ್ರೀ ವೇಳೆಯಲ್ಲಿ ವಿಶೇಷವಾಗಿ ಆ ಹುಡುಗನಿಗೆ ಛಳಿಯಿಂದ ತಡೆಯಲಾರದ ಬಾಧೆಯಾಯಿತು. ಮೊದಲು ಇಬ್ಬರು ಒಟ್ಟು ಕೂಡಿಕೊಂಡು ಮಲಗಿ ಕೊಳ್ಳುತ್ತಿದ್ದದರಿಂದ ಒಬ್ಬನಿಗೊಬ್ಬನು ಛಳಿಗೆ ಒಂದಿಷ್ಟು ಆಸರ ಕೊಟ್ಟಂತಾಯಿತು. ಇಬ್ಬರು ಒಬ್ಬ ಬಡಿಗೆಯವನ ಕಟ್ಟಿಗೇ ಗಡಂಗಿನಲ್ಲಿ ಮಲಗಿ ಕೊಂಡು ರಾತ್ರಿ ಕಳೆಯುತ್ತಿದ್ದರು. ಆದರೆ ಅಣ್ಣ ತೀರಿ ಹೋದ ಮೇಲೆ ಚಿಕ್ಕ ತಮ್ಮನೊಬ್ಬನಿಗೆ ಅಲ್ಲಿ ಛಳಿಯ ನಿಮಿತ್ತ ಇನ್ನು ಆಗದ್ದರಿಂದ, ಬೇರೊಂದು ಕಡೆಯಲ್ಲಿ ರಾತ್ರಿ ಕಳೆಯಲಿಕ್ಕೆ ಠಿಕಾಣಿ ಹುಡುಕುವದು ಅವಸರ ಬಿತ್ತು. ಹುಡುಕಿ, ಹುಡುಕಿ, ಕಡೆಗೆ ದೊಡ್ಡ ಪ್ರಭುಧೊರೆಯ ಕುದುರೇ ಚಾಕ್ರಿಯವರಲ್ಲೊಬ್ಬನ ಹೆಂಡತಿಯಲ್ಲಿ ತನ್ನ ಮೇಲೆ ಕರುಣೆ ಹುಟ್ಟಿಸಿ, ಕುದುರೆಲಾಯದಲ್ಲಿ ಜಾಗ ದೊರಕಿಸಿ ಕೊಂಡನು. ಮೊಬ್ಬಾಗಿ ಅಲ್ಲಿ ಶೇರಿ, ಹುಲ್ಲಿನಲ್ಲಿ ಬಿದ್ದುಕೊಂಡು ಮುದುರಿ ಕೊಂಡನು. ಆದರೆ ಛಳಿಯ ದೆಶೆಯಿಂದ ನಿದ್ರೆ ಬಾರದೆ, ಬಹಳ ಕಷ್ಟ ತಾಳಿ, ತಿರಿಗಿ ಎದ್ದು, ಕತ್ತಲೆಯಲ್ಲಿ ಲಾಯದಲ್ಲೆಲ್ಲಾ ತಡವ್ಯಾಡಿ, ಹೆಚ್ಚು ಬೆಚ್ಚಗಾದ ಸ್ಥಳವನ್ನು ಹುಡುಕಿದ ಕಡೆಗೆ ಒಂದು ಪಂಜರಕ್ಕೆ ತಡವಿ, ಅದರಲ್ಲಿ ಸ್ವಲ್ಪ ಬೆಚ್ಚಗೆಂತ ತಿಳಿದು, ಅದರಲ್ಲಿ ನುಸುಳಿ ಹೊಕ್ಕನು. ಹೊಕ್ಕ ಕೂಡಲೇ ಭಯಂಕರ ಗುರುಗುರುಕಾಯಿಸುವ ಶಬ್ದವಾಯಿತು. ಆ ಶಬ್ದವು ನಾಯಿಯದೋ? ಎಂಥಾ

ದ್ದೋ? ಎಂದು ತಿಳಿಯದೆ ಬಹಳ ಅಂಜಿ ಕೊಂಡು, ಮುದರಿ ಕೊಂಡು, ನಡುಗಿ, ಮನಸ್ಸಿನಲ್ಲಿ ಯೇಸುವನ್ನು ಸ್ಮರಿಸಿ ಪ್ರಾರ್ಥಿಸಿದನು. ನಾಯಿಯಲ್ಲಾ, ಒಂದು ದೊಡ್ಡ ಹೆಣ್ಣು ಕರಡಿ ಆ ಪಂಜರದಲ್ಲಿ ಶೆರೆಯಾಗಿತ್ತು. ಆ ಕರಡಿ ಬಂದು, ಹುಡುಗನನ್ನು ಕಚ್ಚದೆ, ತಬ್ಬಿ ಕೊಂಡು, ಅವನ ಸಂಗಡ ಮಲಗಿ ಕೊಂಡಿತು. ಹುಡುಗನಿಗೆ ಕರಡಿಯ ಎದೆಯಲ್ಲಿ ಬೇಗನೇ ಬೆಚ್ಚಗಾಗಿ, ಅಂಜಿಕೆ ಹೋಗಿ, ನಿದ್ರೆ ಬರುವದಾಯಿತು. ಆ ರಾತ್ರಿ ಅವನಿಗೆ ಛಳಿ ಏನೂ ಆಗದೆ, ಬೆಳಿಗ್ಯೇ ವರೆಗೂ ಬಹಳ ಸೌಖ್ಯದ ನಿದ್ರೆಯಿತ್ತು. ಬೆಳಿಗ್ಯೆ ನಿದ್ರೆ ತಿಳಿದು, ಎದ್ದು, ತಾನು ಯಾರ ಸಂಗಡ ಮಲಗಿ ಕೊಂಡಿದ್ದದನ್ನು ನೋಡಿ, ಪಂಜರದಿಂದ ಜರಿದು ಹೊರಟನು. ಆದರೆ ಎದ್ದು ಹೊರಡುವಾಗ, ಕರಡಿ ಏನೂ ಹೆದರಿಸದೆ, ಗುರುಗುರುಕಾಯಿಸದೆ ಇದ್ದದರಿಂದಲೂ ಆ ರಾತ್ರಿ ಅವನಿಗೆ ಅಲ್ಲಿ ಒಳ್ಳೇ ಸೌಖ್ಯದ ನಿದ್ರೆ ಬಿದ್ದಿದರಿಂದಲೂ, ಅವನು ಬರುವ ರಾತ್ರಿಗೆ ತಿರಿಗಿ ಬಂದು, ಪಂಜರದಲ್ಲಿ ನುಸುಳಿ, ಕರಡಿಯ ಹತ್ತರ ಮಲಗಿ ಕೊಳ್ಳಲಿಕ್ಕೆ ಧೈರ್ಯಗೊಂಡನು. ಈ ಪ್ರಕಾರವಾಗಿ ಅವನು ಯಾರಿಗೂ ತಿಳಿಯದೆ ನಾಲ್ಕೈದು ರಾತ್ರಿಗಳನ್ನು ಕರಡಿಯ ಎದೇ ಹತ್ತರ ಸೌಖ್ಯವಾಗಿ ಮಲಗಿ ಕೊಂಡು ಕಳದನು. ಆರನೇ ದಿನದ ಬೆಳಿಗ್ಯೆ ನಿದ್ರೆ ಬೇಗ ತಿಳಿದೇಳದೆ ಹೋದದರಿಂದ, ಅವನು ಇನ್ನು ಅಲ್ಲಿಯೇ ಮಲಗಿ ಕೊಂಡು ನಿದ್ರೆ ಗೈಯುವ ಹೊತ್ತಿನಲ್ಲಿ ಧೊರೆಯ ಚಾಕ್ರಿಯವರು ಕುದುರೇ ಲಾಯಕ್ಕೆ ಬಂದು, ಅವನನ್ನು ಕರಡಿಯ ಕೈಯಲ್ಲಿ, ತಾಯಿಯ ಕೈಯಲ್ಲಿ ಎಂಬ ಹಾಗೆ, ಮಲಗಿ ಕೊಂಡು ಬಹು ಸೌಖ್ಯವಾಗಿ ನಿದ್ರೆ ಗೈಯುವದನ್ನು ಕಂಡು, ವಿಸ್ಮಿತರಾಗಿ ಪಂಜರದ ಬದಿಗೆ ಬರಲು, ಕರಡಿ ಹುಡುಗನನ್ನು ಕಾಪಾಡ ಬೇಕೆಂತ ಗುರುಗುರುಕಾಯಿಸುವಂಥಾದ್ದಾಯಿತು. ಆದ್ದರಿಂದವನು ನಿದ್ರೆ ತಿಳಿದೆದ್ದು, ಹೊರಗೆ ಜರಿದು ಬಂದನು. ಈ ಅತ್ಯಂತ ಆಶ್ಚರ್ಯದ ಸಂಗತಿ ಆ ಪ್ರಭುಧೊರೆಗೂ ಪಟ್ಣವೆಲ್ಲಕ್ಕೂ ಸುದ್ದಿಯಾಗಿ ಗೊತ್ತಾಯಿತು. ಆ ದಿನದ ಸಾಯಂಕಾಲ ಹುಡುಗನು ತಿರಿಗಿ ಬಂದು, ಪಂಜರದಲ್ಲಿ ನುಸುಳಿ, ಕರಡಿಯ ಎದೇ ಬದೀಲಿ ಮಲಗಿ ಕೊಂಡಾಗ, ಆ ಪ್ರಭುಧೊರೆಯೂ ಅವನ ಕುಮಾರ ಕುಮಾರ್ತೆಯರೂ, ಬೇರೆ ಅನೇಕ ಗೃಹಸ್ಥರೂ ಆ ಅಪೂರ್ವ ಸಂಗತಿಯನ್ನು ಕಣ್ಣಾರೆ ನೋಡ ಬೇಕೆಂತ ಬಂದು ನೋಡಿದರು. ಎಲ್ಲವರಿಗೆ ಮಹದಾಶ್ಚರ್ಯ ಹಿಡಿದು ಹೋಯಿತು. ಮಾರಣೆ ದಿನದ ಬೆಳಿಗ್ಯೆ ಆ ಧೊರೆ ಹುಡುಗನನ್ನು ಕರಿಸಿ, ಅವನ ಪೂರ್ವೋತ್ತರಗಳೆಲ್ಲವನ್ನು ವಿಚಾರಿಸಿ ಕೇಳಿ ಕೊಂಡನು. ಆಗ ಹುಡುಗನ ಮೇಲೆ ಕರುಣೆ ಹುಟ್ಟಿ, ಅವನನ್ನು ಶೇರಿಸಿ ಕೊಂಡು, ಸಂರಕ್ಷಿಸಿ, ವಿದ್ಯಾಭ್ಯಾಸ ಮಾಡಿಸಿ, ಬೆಳಿಸಿದನು. ಹುಡುಗನು ಚನ್ನಾಗಿ ಕಲಿತು, ಸುಶೀಲನಾಗಿ ನಡದು ಕೊಂಡು, ತನ್ನುಪಕಾರಿಗೆ ಮೆಚ್ಚಿ, ಸಂತೋಷ ಕೊಡುವವನಾದನು.—ದೇವರು ಒಲಿದರೆ, ತಾಯಿಯಿಲ್ಲದವನಿಗೆ ಕರಡಿಯನ್ನಾದರೂ ತಾಯಿ ಎಂಬ ಹಾಗಾಗಲೂ, ಸಿಂಹಗಳ ಗವಿಯಲ್ಲಿ ಬಿದ್ದವನಿಗೆ ಹಶಿದ ಸಿಂಹಗಳು ಆಟಗಾರರೂ ಗೆಳೆಯರೂ ಎಂಬ ಹಾಗಾಗಲೂ ಮಾಡ ಬಹುದು. ಆದ್ದರಿಂದ ದೇವರು ಸರ್ವದಾ ಭಯಕ್ಕೂ ಭರವಸಕ್ಕೂ ಪ್ರೀತಿಗೂ ಸ್ತೋತ್ರಕ್ಕೂ ಅತಿ ಯೋಗ್ಯನೇ.

೧೮೭೭ನೇ ವರ್ಷದ ಹಬ್ಬಗಳು.

* ಈ ಚಿನ್ಹೆಯು ಸುವಾರ್ತಾಪಕ್ಷದವರಿಗೂ ರೋಮಾಯರಿಗೂ ಕೂಡ ಇರುವ ಹಬ್ಬಗಳನ್ನೂ,
† ಈ ಚಿನ್ಹೆಯು ರೋಮಾಯರಿಗೆ ಪ್ರತ್ಯೇಕವಾಗಿ ಇರುವ ಹಬ್ಬಗಳನ್ನೂ,
§ ಈ ಚಿನ್ಹೆಯು ಸರಕಾರ ರಜಾ ಇರುವ ದಿನಗಳನ್ನೂ ಸೂಚಿಸುತ್ತವೆ.

ಕ್ರೈಸ್ತರ ಹಬ್ಬಗಳು.

CHRISTIAN FESTIVALS.

ಜನವರಿ ೧ * ನವಸಂವತ್ಸರದ ಹಬ್ಬ (New Year's Day) §.
,, ೬ * ಪ್ರತ್ಯಕ್ಷತೆಯ ಹಬ್ಬ (Epiphany).
ಫೆಬ್ರುವರಿ ೨ † ಮರೀಯಳ ಶುದ್ಧೀಕರಣ.
,, ೧೪ † ಉಪೋಸ್ಯದ ಮೊದಲನೇ ದಿನ §.
ಮಾರ್ಚಿ ೨೩ † ಮರೀಯಳ ಸಪ್ತವ್ಯಥೆಗಳ ಹಬ್ಬ.
,, ೨೫ * ಪಾಮ್ ಸಂಡೆ ಹಬ್ಬ (Palm Sunday).
,, ,, † ಮರೀಯಳಿಗಾದ ಶುಭವಾರ್ತೆ.
,, ೨೯ † ಮಂಡಿ ಥರ್ಸ್‌ಡೆ ಹಬ್ಬ.
,, ೩೦ * ಕ್ರಿಸ್ತನ ಮರಣದಿನ (Good Friday) §.
,, ೩೧ † ಪರಿಶುದ್ಧ ಶನಿವಾರ.
ಎಪ್ರಿಲ್ ೧ * ಪಸ್ಕಹಬ್ಬ (Easter Sunday).
,, ೨ † ಪಸ್ಕದ ಮೇಲಿನ ಸೋಮವಾರ.
,, ೩ † ಪಸ್ಕದಮೇಲಿನ ಮಂಗಳವಾರ.
ಮೇ ೧೦ * ದಿವಾರೋಹಣದ ಹಬ್ಬ (Ascension Day) §.
,, ೨೦ * ಪಂಚಾಶತ್ತಿನ ಹಬ್ಬ (Pentecost).
,, ೨೭ * ತ್ರಿಯೇಕತ್ವದ ಹಬ್ಬ (Trinity).
,, ೩೧ † ಕೊರ್ಪುಸ್ ಕ್ರಿಸ್ತೀ ಹಬ್ಬ §.
ಜೂನ್ ೨೪ † ಸ್ನಾನಿಕ ಯೋಹಾನನ ಜನ್ಮದಿನ.
,, ೨೯ † ಪೇತ್ರುನ ಮತ್ತು ಪೌಲನ ದಿನ.
ಜುಲಾಯಿ ೨ † ಮರೀಯಳ ಸಂದರ್ಶನ.
,, ೧೬ † ಕಾರ್ಮೆಲ ಬೆಟ್ಟದ ಮರೀಯಳ ದಿನ.
ಅಗೋಸ್ತು ೨ † ಪೋರ್ಸಿಯುಂಕುಲ ಹಬ್ಬ.
,, ೧೦ † ರಕ್ತಸಾಕ್ಷಿಯಾದ ಲಾರೆನ್ಸನ ದಿನ.
ಅಗೋಸ್ತು ೧೫ † ಮರೀಯಳ ಸ್ವರ್ಗಾರೋಹಣ.
ಸಪ್ತಂಬರ ೮ † ಮರೀಯಳ ಜನ್ಮದಿನ.
,, ೨೯ † ಮಿಕಾಯಲ್ಮಾಸ್ ಹಬ್ಬ.
ಒಕ್ಟೋಬರ ೪ † ಸನ್ ಫ್ರಾನ್ಸಿಸ್ ದೆ ಅಸ್ಸೀಸ್.
ನವಂಬರ ೧ † ಸಮಸ್ತ ಪರಿಶುದ್ಧರ ದಿನ.
,, ೨ † ಸಮಸ್ತ ಪ್ರಾಣಗಳ ದಿನ.
ದಶಂಬರ ೨ * ಕ್ರಿಸ್ತನ ಆಗಮನ (Advent).
,, ೩ † ಸೆಂತ್ ಫ್ರಾನ್ಸಿಸ್ ಕ್ಸವೀರನ ದಿನ.
,, ೮ † ಮರೀಯಳ ಶುದ್ಧೋತ್ಪತ್ತಿ.
,, ೨೧ † ಅಪೊಸ್ತಲ ತೋಮನ ದಿನ.
,, ೨೫ * ಕ್ರಿಸ್ತನ ಜನನದ ಹಬ್ಬ (Nativity of our Lord Jesus Christ) §.
,, ೨೬ † ರಕ್ತಸಾಕ್ಷಿ ಸ್ತೆಫನನ ದಿನ.

ಮಹಮ್ಮದೀ ಹಬ್ಬಗಳು.

MAHOMMEDAN HOLIDAYS.

ಜನವರಿ ೧೬ ಮೊಹರಮ್ ಹಬ್ಬದ ಆರಂಭ §.
,, ೨೫ ಮೊಹರಮ್ ಹಬ್ಬದ ಕಡೇ ದಿನ §.
ಫೆಬ್ರುವರಿ ೧೫ ಸಫರ್ ತಿಂಗಳ ಆರಂಭ.
ಮಾರ್ಚ್ ೧೪ ಆಖರ್ ಚಾರ್‌ಶುಂಬ.
,, ೧೭ ರಬಿಲಾವಲ್.
ಎಪ್ರಿಲ್ ೧೬ ರಬಿಲಾಖರ್.
ಮೇ ೧೫ ಜಮಾದಿಲಾವಲ್.
ಜೂನ್ ೧೩ ಜಮಾದಿಲಾಖರ್.
ಜುಲಾಯಿ ೧೩ ರಜಬ್.
ಅಗೊಸ್ತು ೧೧ ಶಾಬಾನ್.
,, ೨೪ ಶಬೀಬರಾತ್ §.
ಸಪ್ತಂಬರ ೯ ರಮ್‌ಜಾನ್ ಹಬ್ಬ (ಉಪವಾಸ) §.
ಒಕ್ಟೋಬರ ೮ ರಮ್‌ಜಾನ್ ಹಬ್ಬದ ಕಡೇ ದಿನ §.
,, ೯ ಶವ್ವಾಲ್ (ಪೆರುನಾಳ್).
ನವಂಬರ ೭ ಜಿಲ್ಹಾಯದ್.

ದಶಂಬರ ೭ ಜಿಲ್‌ಹಜ್.
,, ೧೫ ಜಿಲ್‌ಹಜ್ (ಉಪವಾಸ).
,, ೧೬ ಬಕ್ರೀದ್ (ಪೆರುನಾಳ್) §.

ಹಿಂದು ಹಬ್ಬಗಳು.
HINDOO HOLIDAYS.

ಜನವರಿ ೧೨ ಮಕರಸಂಕ್ರಮಣ, (ಉತ್ತರಾಯಣ, ಪುಣ್ಯಕಾಲ).
,, ೨೧ ರಥಸಪ್ತಮಿ §.
ಫೆಬ್ರುವರಿ ೧೧ ಶಿವರಾತ್ರಿ (ಮರುದಿನ ರಜೆ §).
,, ೨೭ ಹೋಳಿ ಹುಣ್ಣಿಮೆ.
,, ,, ಚಂದ್ರಗ್ರಹಣ, ಪುಣ್ಯಕಾಲ §.
,, ೨೮ ಹೋಳಿ ಹಬ್ಬದ ಕಡೇ ದಿನ.
ಮಾರ್ಚಿ ೧೬ ಚಾಂದ್ರಮಾನ ಯುಗಾದಿ §.
,, ೨೩ ರಾಮಜಯಂತಿ §.
ಎಪ್ರಿಲ್ ೧೨ ಸೌರಮಾನ ಯುಗಾದಿ.
,, ೧೬ ಅಕ್ಷತೃತೀಯ, ಪರಶುರಾಮ ಜಯಂತಿ.
,, ೨೬ ನರಸಿಂಹಜಯಂತಿ §.
ಜೂನ್ ೧೧ ಸೋಮವತೀವ್ರತ.
ಜುಲಾಯಿ ೧೪ ಕರ್ಕಾಟಕಸಂಕ್ರಮಣ (ದಕ್ಷಿಣಾಯನ, ಪುಣ್ಯಕಾಲ) §.
,, ೨೧ ಪ್ರಥಮೈಕಾದಶೀ.
,, ೨೨ ಪ್ರಥಮದ್ವಾದಶೀ.
ಅಗೊಸ್ತು ೧೦ ವರಲಕ್ಷ್ಮೀವ್ರತ §.
,, ೧೩ ನಾಗರಪಂಚಮಿ; ಸಾಮೋಪಾಕರ್ಮ §.
,, ೨೨ ಉಪಾಕರ್ಮ (ಋಗ್ವೇದಿಗಳಿಗೆ) §.
,, ೨೩ ಚಂದ್ರಗ್ರಹಣ, ಪುಣ್ಯಕಾಲ §.
,, ೩೧ ಕೃಷ್ಣಾಷ್ಟಮೀವ್ರತ (ಮರು ದಿನ ರಜೆ §).
ಸಪ್ತಂಬರ ೧೦ ಗೌರಿತೃತೀಯ; ವರಾಹಜಯಂತಿ §.
,, ೧೦ ವಿನಾಯಕ ಚತುರ್ಥಿ §.
,, ೧೧ ಋಷಿಪಂಚಮಿ.
,, ೧೪ ಎಳೇ ಅಷ್ಟಮಿ.
,, ೨೧ ಅನಂತಚತುರ್ದಶೀ §.
,, ೨೩ ಮಹಾಲಯಪಕ್ಷಾರಂಭ.
ಒಕ್ಟೋಬರ ೬ ಮಹಾಲಯ ಅಮಾವಾಸ್ಯೆ §.
,, ೭ ನವರಾತ್ರಿ ಆರಂಭ.
ಒಕ್ಟೋಬರ ೧೧ ಲಲಿತಾಪಂಚಮಿ.
,, ೧೨ ಮೂಲನಕ್ಷತ್ರ, ಶಾರದಾಪೂಜೆ §.
,, ೧೫ ಮಹಾನವಮಿ.
,, ,, ಕಾವೇರಿಸಂಕ್ರಮಣ.
,, ೧೬ ವಿಜಯದಶಮಿ, ಶಮಿಪೂಜೆ §.
ನವಂಬರ ೪ ನರಕಚತುರ್ದಶೀ §.
,, ೫ ಸೋಮವತೀವ್ರತ; ದೀಪಾವಳೀ ಅಮಾವಾಸ್ಯೆ §.
,, ೫ ಗೋಪೂಜೆ §.
,, ೬ ಬಲಿಪಾಡ್ಯ §.
,, ೧೬ ಕಾರ್ತಿಕ ಏಕಾದಶೀ.
,, ೧೭ ಉತ್ಥಾನದ್ವಾದಶೀ, ತುಲಸೀ ಪೂಜೆ §.
,, ೨೦ ಕಾರ್ತಿಕ ಪೂರ್ಣಿಮಾ, ದೀಪೋತ್ಸವ.
ದಶಂಬರ ೧೧ ಸುಬ್ರಹ್ಮಣ್ಯ ಷಷ್ಠಿ.
,, ೧೬ ವೈಕುಂಠ ಏಕಾದಶೀ.
,, ೧೭ ಮುಕುಟದ್ವಾದಶೀ.

ಇತರ ರಜಾ ದಿನಗಳು.
OTHER HOLIDAYS.

ಮೇ ೨೪ ವಿಕ್ಟೋರಿಯ ಮಹಾರಾಣಿಯವರ ಜನ್ಮದಿನ §.
ನವಂಬರ ೯ ಮಹಾರಾಣಿಯವರ ಜ್ಯೇಷ್ಠಪುತ್ರ ವೇಲ್ಸಿನ ಶ್ರೀಮಂತನ ಜನ್ಮದಿನ §.

೧೮೭೭ನೇ ವರ್ಷದಲ್ಲಿ ಆರಂಭವಾಗುವ ಬೇರೆ ಬೇರೆ ಶಕಗಳು.
HINDOO AND MAHOMMEDAN ERAS.

ಜನವರಿ ೧೭ ಮುಹಮ್ಮದೀ ಹಿಜರೀ ಎಂಬ ೧೨೯೪ನೇ ವರ್ಷದ ಆರಂಭವು.
ಮಾರ್ಚ್ ೧೬ ಈಶ್ವರವೆಂಬ ೧೭೯೯ನೇ ಶಾಲಿವಾಹನ ಶಕದ ಚಾಂದ್ರಮಾನ ವರ್ಷದ ಆರಂಭವು.
ಜುಲಾಯಿ ೧ ಫಸಲಿ ಎಂಬ ೧೨೮೭ನೇ ವರ್ಷದ ಆರಂಭವು.
ಅಗೊಸ್ತು ೧೫ ಕೊಲ್ಲಮ್ ಎಂಬ ೧೦೫೩ನೇ ವರ್ಷದ ಆರಂಭವು.
ನವಂಬರ ೬ ವಿಕ್ರಮಾದಿತ್ಯ ಶಕ ೧೯೩೪ನೇ ವರ್ಷದ ಆರಂಭವು.

ಮಂಗಳೂರ ಬಾಸಲ್ ಮಿಶ್ಯನ್ ಪುಸ್ತಕಖಾನೆಯಲ್ಲಿಯೂ, ಮೂಲ್ಕಿ, ಉಡ್ಪಿ, ಕಾರ್ಕಳ, ಹೊನ್ನಾವರ, ಮಡಿಕೇರಿ, ಆನಂದಪುರ, ಧಾರವಾಡ, ಹುಬ್ಬಳ್ಳಿ, ಬೆಟ್ಟಗೇರಿ, ಗುಳೇದಗುಡ್ಡ ಎಂಬೂರುಗಳಲ್ಲಿಯ ಪಾದ್ರೀ ಬಂಗಲೆಗಳಲ್ಲಿಯೂ ಲಭ್ಯವಾಗುವ

ಕನ್ನಡ ಪುಸ್ತಕಾದಿಗಳು.

I. ಕಥಾರೂಪವಾಗಿ ಸದ್ಧರ್ಮ ಬೋಧಿಸುವಂಥವು.

ನರಕುಲದೀಪಕನೂ ದೇವಜನೂ ಆದಂಥ ಕ್ರಿಸ್ತೇಸುವಿನ ಜನ್ಮವೃತ್ತಾಂತವು. ಕ್ರಯ ೧ ಪೈ.

ಜ್ಞಾನವೃದ್ಧರಿಂದ ಗುರುಸಂಭಾವನೆ ಹೊಂದಿದ ಬಾಲಕಶಿರೋಮಣಿ. ಕ್ರಯ ೧ ಪೈ.

ದೇವತಾಕರುಣಾತಿಶಯವರ್ಣಕ ಸಾಮ್ಯತ್ರಯವು. ಕ್ರಯ ೧ ಪೈ. (ಈ ಮೂರು ಚಿಕ್ಕ ಪುಸ್ತಕಗಳು ದಿವ್ಯ ಕರುಣಾಸಾಗರದಲ್ಲಿ ಹುಟ್ಟಿದ ಸರೋಜದ [ಕಮಲದ] ಎಲೆಗಳೋಪಾದಿಯಾಗಿ, ಅಪೇಕ್ಷೆಗೆ ಅತಿ ಯೋಗ್ಯವಾಗಿವೆ.)

ಯೇಸು ಕ್ರಿಸ್ತನ ಶ್ರಮೇ ಚರಿತ್ರವು. ಕ್ರಯ ೨ ಪೈ. (ಭವರೋಗಚಿಕಿತ್ಸೆ ಪಕ್ವವಾದ ವಿವರವು ಈ ಪುಸ್ತಕದಲ್ಲಿ ಅಡಕವಾಗಿರುವದರಿಂದ, ಅದರ ಭಾಷೆ ಅಷ್ಟು ಉತ್ಕೃಷ್ಟವೂ ಮನೋಹರವೂ ಆಗಿರದಿದ್ದರೂ, ಸರ್ವರು ಅದನ್ನು ಪರಾಂಬರಿಸಿ ಓದಿಕೊಳ್ಳ ತಕ್ಕದಾಗಿದೆ.)

ಯೆಹೋವನೋ? ವಿಗ್ರಹಗಳೋ? ಕ್ರಯ ೬ ಪೈ. (ಈ ಪುಸ್ತಕವು ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ರಚಿತವಾಗಿ, ನಿಜ ದೇವರು ಯಾವಾತನು? ಎಂಬ ವಿಚಾರಕ್ಕೆ ಮನಸ್ಸು ಕೊಡುವವರ ಪರಾಂಬರಿಕೆಗೆ ಬಹು ಯೋಗ್ಯವೇ.)

ದಾನಿಯೇಲನೂ ಅವನ ಜತೆಗಾರರೂ. ಕ್ರಯ ೩ ಪೈ. (ಈ ಪುಸ್ತಕವನ್ನು ವಿಶೇಷವಾಗಿ ವಿದ್ಯಾಪೇಕ್ಷಕ ಯೌವನಸ್ಥರು ಓದಿ, ಲಕ್ಷಿಸ ತಕ್ಕದು.)

ಕಡೆಗೆ ವಜೀರನಾದ ಯೋಸೆಫನೆಂಬ ಯುವಗೋಪಾಲರತ್ನ. ಕ್ರಯ ೪ ಪೈ. ("ತಾಳಿದವನು ಬಾಳ್ಯಾನು" ಎಂಬ ಮಾತು ಈ ಪುಸ್ತಕದ ಮುದ್ರಿಕೆಯಾಗಿದೆ. ಈ ಮುದ್ರಿಕೆ ಸೂಚಿಸುವ ಭಾವದ ಉತ್ಕೃಷ್ಟವಾದ ಬೋಧನೆ ಈ ಪುಸ್ತಕದಲ್ಲಿ ಪುಷ್ಕಲವೇ ಆಗಿರುವದರಿಂದ, ಅದಕ್ಕೆ ಒಂದು ದುಡ್ಡು ಅಲ್ಲಾ ಒಂದು ಇಡೀ ವರಹಾ ಕೊಡ ಬೇಕಾದರೂ, ಈಡಾಗದ ಕ್ರಯವೆಂಬದಕ್ಕೆ ಓದಿಕೊಂಡವರು ಸಂತೋಷವಾಗಿ ಒಪ್ಪಿಕೊಂಡಾರು.)

ದೇವರ ವಾಕ್ಯದ ಸಣ್ಣ ಕಥೆಗಳು. ಕ್ರಯ ೬ ಪೈ. (ಈ ಕಥೆಗಳು ಹೆಚ್ಚಿನ ಬರಹಗಳು ತಿಳಿಯದ ಜನರಿಗೂ ಸುಲಭವಾಗಿ ಓದಿ ತಿಳುಕೊಳ್ಳಲಿಕ್ಕಾಗುವಂಥವು.)

ಕಥಾಮಾಲೆ. ಕ್ರಯ ೨ ಆಣೆ. (ಛಂದರೂಪದಲ್ಲಿ ಹೊಳೆಯುವ ಈ ಕಥಾಮಾಲೆ ಎಂಬ ಕ್ಷೀರ ಕಲಶವನ್ನು ಕೊಂಡುಕೊಂಡವರು ಕ್ಷೀರವನ್ನು ಪಾನ ಮಾಡಿಯಾಗಲಿ, ಮಥನ ಮಾಡಿ ಬೆಣ್ಣೆ ತೆಗದಾಗಲಿ, ಆನಂದ ಪಟ್ಟಾರು; ಆದರೆ ಬೆಣ್ಣೆ ಬೇಕಾದರೆ, ಹಾಲನ್ನು ಕಡೆಯುವ ಪ್ರಯಾಸಕ್ಕೆ ಹೆದರಿಕೋ ಬಾರದು.)

ಪೂರ್ವನಿರ್ಧಾರ. ಕ್ರಯ ೩ ಆಣೆ.

ನವನಿರ್ಧಾರ. ಕ್ರಯ ೨ ಆಣೆ ೬ ಪೈ. (ಇವೆರಡು ಗ್ರಂಥಗಳಲ್ಲಿ ಪಾನ ಮಾಡಲಿಕ್ಕೆ ಮನಸ್ಸೂ ಬುದ್ಧಿಯೂ ಇದ್ದವರಿಗೆ ಒಳ್ಳೇ ಕಥಾಮೃತವು ತಿಕ್ಕುವದೆಂಬ ಮಾತಿಗೆ ಸಂದೇಹವಿಲ್ಲಾ.)

ಪ್ರಾಚೀನ ವೃತ್ತಾಂತಸಾರವು.

ನಾಮಾನನೆಂಬ ಸೇನಾಧಿಪ.

ತಪ್ಪಿ ಹೋದ ಮಗನು. (ಈ ಮೂರು ಪುಸ್ತಕಗಳ ಒಂದೊಂದರ ಕ್ರಯ ೯ ಪೈ. ಅವುಗಳ ವಿಶೇಷವೇನಂದರೆ: ವಾಗ್ರೂಪವಾಗಿಯೂ ಚಿತ್ರರೂಪವಾಗಿಯೂ ಸದ್ವೇದದ ಸಂಗತಿಗಳು ವರ್ಣನೆಯಾದ್ದೇ. ಚಿತ್ರಗಳು ಲಂಡನ್‌ನಗರದಲ್ಲಿ ಛಾಪೆಯಾದಂಥವು. ಒಂದೊಂದು ಪುಸ್ತಕದಲ್ಲಿ ಏಳೇಳಿದ್ದಾವೆ.)

ಅಂಧಹರಣ ಪರಮಾನಂದಕಾರಣ. ಕ್ರಯ ೧ ಪೈ. (ಕುರುಡಿಯೊಬ್ಬಳ ಅವಸ್ಥೆಯೂ ದೃಷ್ಟಿ ಪ್ರಾಪ್ತಿಗೆ ಆದ ಸಂತೋಷವೂ ಪಾಪಾಂಧಕಾರದ ದುರವಸ್ಥೆಗೂ ಪಾಪಪರಿಹಾರಕ್ಕಾಗುವ ಪರಮ ಭಾಗ್ಯಕ್ಕೂ ಸಾದೃಶ್ಯವಾಗಿ ವರ್ಣಿಸಿದ್ದು.)

ಹೊರಗೊಂದು ಒಳಗೊಂದು, ಅಥವಾ ನಾಟಕಗಾರನೂ ಗೌರಮ್ಮ ರಾಜಕುಮಾರ್ತೆಯೂ. ಕ್ರಯ ೧ ಪೈ. (ವಿಚಾರಬುದ್ಧಿಯೂ ಪರಮಾರ್ಥಾಸಕ್ತಿಯೂ ಇದ್ದವರಿಗೆ ಈ ಚಿಕ್ಕ ಪುಸ್ತಕವು ಮೆಚ್ಚದೆ ಹೋಗಲಿಕ್ಕಿಲ್ಲಾ. ಮನಸ್ಸು ಕೊಟ್ಟು ಓದುವ ಸ್ತ್ರೀಯರಿಗೂ ಕನ್ಯೆಗಳಿಗೂ ಈ ಪುಸ್ತಕವು ಬಹು ಹಿತವೂ ಸವಿಯೂ ಎಂತ ಕಾಣುವದು.)

ಮಹಮ್ಮದನ ಚರಿತ್ರವು. ಕ್ರಯ ೩ ಪೈ. (ಮುಸಲಮಾನರು ಮಾತ್ರವಲ್ಲಾ ಇತರ ಜಾತಿಯವರೂ ಮತದವರೂ ಈ ಚರಿತ್ರವನ್ನು ಓದಿಕೊಂಡು, ಮಹಮ್ಮದನ ಪೂರ್ವೋತ್ತರಗಳನ್ನು ತಿಳುಕೊಳ್ಳ ತಕ್ಕದು.)

ಮದಗಸ್ಕರ, ಅದರ ಮಿಶನೂ ರಕ್ತಸಾಕ್ಷಿಗಳೂ. ಕ್ರಯ ೬ ಪೈ. (ಈ ಪುಸ್ತಕದ ಭಾಷೆ ಉತ್‌ಕೃಷ್ಟವಾಗಿರದಿದ್ದರೂ, ಅಡಕವು ವಿಶೇಷವಾಗಿದ್ದು ಎಲ್ಲವರ ಲಕ್ಷ್ಯಕ್ಕೆ ತಕ್ಕದಾಗಿದೆ.)

ಚಿಕ್ಕ ಉಲ್ಲಿಯಮ್ ಎಂಬವನ ಚರಿತ್ರ. ಕ್ರಯ ೬ ಪೈ.

ಚಿಕ್ಕ ಹೆನ್ರಿಯೂ ಅವನ ಬೋಯಿಯೂ. ಕ್ರಯ ೬ ಪೈ. (ಈ ಕಥಾಪ್ರಸಂಗವನ್ನು ಹುಡುಗರೆಲ್ಲರು ಓದಿಕೊಳ್ಳ ತಕ್ಕದು. ಪ್ರಾಯಸ್ಥರಾದರೂ ಅದರಿಂದ ಒಳ್ಳೇ ಬುದ್ಧಿ ಕಲಿತು ಕೊಳ್ಳ ಬಹುದು.)

ಬೂಸಿಯ ಕಡೇ ದಿನಗಳು. ಕ್ರಯ ೮ ಪೈ. (ಬೂಸಿಯೆಂಬದು ಹೆನ್ರಿಯ ಬೋಯಿಯ ಹೆಸರು. ಚಿಕ್ಕ ಹೆನ್ರಿಯೂ ಅವನ ಬೋಯಿಯೂ ಎಂಬ ಪುಸ್ತಕದ ವಿಷಯದಲ್ಲಿ ಹೇಳಿದ್ದು ಈ ಪುಸ್ತಕಕ್ಕೂ ಸರಿ ಬೀಳುವದು.)

ತನ್ನ ನೆರೆಯವನನ್ನು ಕೊಂದ ಮನುಷ್ಯನ ಕಥೆ. ಕ್ರಯ ೬ ಪೈ. (ಈ ಪುಸ್ತಕದ ಹೆಸರು ಕಂಡರೆ, ಓದ ಬೇಕೆಂಬ ಮನಸ್ಸು ಒಂದು ವೇಳೆ ವಿಶೇಷವಾಗಿ ಹುಟ್ಟದು. ಆದರೂ ಅದರಲ್ಲಿ ವಿವರವಾದ ಸಂಗತಿ ಬಹಳ ಬೋಧನಾಮೃತವುಳ್ಳದೇ.)

ದೃಷ್ಟಾಂತದರ್ಪಣವು. ಕ್ರಯ ೬ ಪೈ. (ಕಥಾರೂಪವಾಗಿ ಒಳ್ಳೇ ತಾತ್ಪರ್ಯಗಳನ್ನು ಹೇಳುವ ಪುಸ್ತಕ, ಸೈ.)

ಕ್ರೈಸ್ತಧರ್ಮಪುನಃಸ್ಥಾಪನೇ ಚರಿತ್ರವು. ಕ್ರಯ ೩ ಆಣೆ. (ಈ ಚರಿತ್ರಕ್ಕೆ ಹೋಲುವ ಇತಿಹಾಸವು ರಾಮಾಯಣದಲ್ಲ್ಯಾಗಲಿ ಮಹಾಭಾರತದಲ್ಲ್ಯಾಗಲಿ ಇತರ ಹಿಂದು ದೇಶದ ಗ್ರಂಥಗಳಲ್ಲ್ಯಾಗಲಿ ಇಲ್ಲವೇ ಇಲ್ಲಾ. ಈ ಗ್ರಂಥದಲ್ಲಿ ರಾಜಸುವ ಲುಥರೆಂಬ ಪಂಡಿತನಂಥಾ ಪುರುಷಶಾರ್ದೂಲನ ಪಾದಾರವಿಂದಗಳು ಹಿಂದುಸ್ಥಾನದ ಭೂಮಿಗೆ ಮೆಟ್ಟಿದ್ದು ಇಲ್ಲವೇ ಇಲ್ಲಾ. ಹೌದೋ? ಅಲ್ಲವೋ? ಎಂತ ಓದಿ ಹೇಳಿರಿ!)

ದೃಷ್ಟಾಂತಮಂಜರಿ. ಕ್ರಯ ೪ ಆಣೆ. (ಈ ಪುಸ್ತಕ ಕಥಾಮೃತ ಭರಿತವಾದ್ದೇ.)

ಕ್ರೈಸ್ತಸಭಾಚರಿತ್ರ. ಕ್ರಯ ೧ ರೂ. ೮ ಆಣೆ. (ಈ ಗ್ರಂಥವು ಉತ್ತಮ ಇತಿಹಾಸಜ್ಞತೆಗೂ, ಹೆಚ್ಚಿನ ಭಾಷಾಭ್ಯಾಸಕ್ಕೂ ಬಹಳ ಅನುಕೂಲವಾಗಿದೆ.)

II. ಸಂವಾದರೂಪವಾಗಿಯೂ, ಪ್ರಸಂಗರೂಪವಾಗಿಯೂ, ಗದ್ಯಪದ್ಯರೂಪವಾಗಿಯೂ ಸದ್ಧರ್ಮ ಬೋಧಿಸುವ ಪುಸ್ತಕಾದಿಗಳು.

ಸನ್ಮಾರ್ಗವಿಚಾರವು. ಕ್ರಯ ೩ ಪೈ. (ಸಸಾರವಾದ ಸಂವಾದರೂಪದಲ್ಲಿ ರಚಿತವಾದ ಈ ಪುಸ್ತಕವನ್ನು ಓದಿಕೊಳ್ಳುವವರು ಸನ್ಮಾರ್ಗದ ಅಂದರೆ ಮೋಕ್ಷಮಾರ್ಗದ ಗೊತ್ತು ಹತ್ತಿಸಿಕೊಳ್ಳಬಹುದೆಂಬದಕ್ಕೆ ಸಂಶಯವಿಲ್ಲಾ.)

ಲಿಂಗಾಯತರ ಮತವಿಚಾರ. ಕ್ರಯ ೪ ಪೈ. (ಸಂವಾದರೂಪವಾಗಿ ಈ ಪುಸ್ತಕವು ಲಿಂಗಾಯತ ಮತದ ಮೂಲ, ಉತ್ಪತ್ತಿ ಇತ್ಯಾದಿಗಳ ವಿವರಸಂಕ್ಷೇಪ ಕೊಟ್ಟು, ಮನುಷ್ಯನೆಂಬ ಶಿಶುವಿಗೆ ಸ್ತನ್ಯಪಾನವೆಂಬದು ಎಲ್ಲಿ ಪ್ರಾಪ್ಯವೇ ಎಂತ ಕಾಣಿಸುತ್ತದೆ.)

ಜನ್ಮಾಂತರೋಪದೇಶವು. ಕ್ರಯ ೨ ಪೈ. (ಜನ್ಮಾಂತರವೆಂದೂ ಪ್ರೇತ್ಯಭಾವವೆಂದೂ ಹೆಸರುಗೊಂಡ ಉಪದೇಶದ ವಿಷಯವಾದ್ದು ಈ ಪುಸ್ತಕದಲ್ಲಿ ಬಹಳ ಸಂಕ್ಷೇಪವಾಗಿಯೂ ವ್ಯಕ್ತವಾಗಿಯೂ ಪ್ರತಿಪಾದಿಸಿ ಅದೆ.)

ಜಾತಿವಿಚಾರಣೆ. ಕ್ರಯ ೩ ಪೈ. (ಈ ಪುಸ್ತಕವು ಒಂದು ಬಹಳ ಹಳೇ ರೋಗವನ್ನು ಕಾಣಿಸಿ, ಈ ರೋಗ ಪರಿಹಾರದ ಮಾರ್ಗವನ್ನು ಹುಡುಕುವ ಮನಸ್ಸನ್ನು ಹುಟ್ಟಿಸುವದು.)

ಮತಭೇದರತ್ನಾಕರ. ಕ್ರಯ ೪ ಪೈ. (ಸಂವಾದರೂಪವಾಗಿ ಹಿಂದುಗಳ ಮುಖ್ಯ ಮತಗಳೂ ಇವುಗಳ ಭೇದಗಳೂ ವರ್ಣಿಸಿ ಕಾಣಿಸಿದ್ಧಾವೆ.)

ಮತವಿಚಾರಣೆ. ಕ್ರಯ ೪ ಪೈ. (ಇದು ಸಹಾ ಚಲೋ ಸಂವಾದರೂಪದಲ್ಲಿ ರಚಿತವಾಗಿ, ಮತಿಗೂ, ವಿಚಾರಬುದ್ಧಿಗೂ, ನಿಜ ಭಕ್ತಿಭಾವಕ್ಕೂ, ಅಂತಃಕರಣಕ್ಕೂ ತಕ್ಕ ಆಸ್ಪದವಾಗಿ ತೋರುವ ಮತವು ಯಾವದೆಂತ ಯಥಾರ್ಥವಾಗಿ ತೋರಿಸಿ ಕೊಡುತ್ತದೆ.)

ಈರಾರುಪತ್ರಿಕೆ. ಕ್ರಯ ೬ ಪೈ. (ಪತ್ರಿಕೆಗಳನ್ನು ಬರೆಯುವ ವಿದ್ಯೆಯನ್ನಲ್ಲದೆ, ಪರಮಾರ್ಥವಿಚಾರಕ್ಕೆ ತಾಗುವ ಸಂಗತಿಗಳನ್ನೂ ಈ ೧೨ ಪತ್ರಿಕೆಗಳನ್ನು ಓದಿ ಕಲಿತು ಕೊಳ್ಳಬಹುದು.)

ಕೃಷ್ಣ ಕ್ರಿಸ್ತ ಇವರ ಹೆಚ್ಚು ಕಡಿಮೆ. ಕ್ರಯ ೬ ಪೈ. (ಈ ಗ್ರಂಥದ ಕರ್ತನು ಕೃಷ್ಣನಿಗೆ ಕ್ರಿಸ್ತನನ್ನು ಸರಿ ನೋಡಿಸಿ, ವಿಶ್ವಾಸಕ್ಕೆ ಯೋಗ್ಯ ಉದ್ಧಾರಕನು ಯಾವಾತನೆಂತ ಪರಿಷ್ಕಾರವಾಗಿ ತೋರಿಸಿದ್ಧಾನೆ.)

ತಿರುಪತಿಯಾತ್ರೆ. ಕ್ರಯ ೬ ಪೈ. (ಈ ಪುಸ್ತಕವು "ಜಾತ್ರೆ ಮರುಳೋ? ಜನ ಮರುಳೋ?" ಎಂಬ ಗಾದೆಗೊಪ್ಪಾಗಿ, ಜಾತ್ರೆಗಳ ಸಂಗತಿ ಹ್ಯಾಗೆಂತ ಕಾಣಿಸುತ್ತದೆ. ಅದು ವಾಜಬಿಯೋ ಏನೋ ಎಂತ ಜಾತ್ರೆಗೆ ಹೋಗಿ ಬಂದವರು ಓದಿಕೊಂಡು ನ್ಯಾಯತೀರಿಸಲಿ!)

ದ್ವಿಮತಪರೀಕ್ಷೆ. ಕ್ರಯ ೮ ಪೈ. (ಹಿಂದು ಜನರ ಪುರಾಣ ಮೊದಲಾದ ಶಾಸ್ತ್ರಗಳಲ್ಲಿ ಮುಖ್ಯ ಧರ್ಮವಿಚಾರಗಳು ಹ್ಯಾಗೆಂಬದನ್ನು ಎಂಟು ಸಂಭಾಷಣೆಗಳಲ್ಲಿ ತೋರಿಸಿದ ಬಳಿಕ ೯ನೇ ಸಂಭಾಷಣೆಯಲ್ಲಿ ಸದ್ರಿ ವಿಚಾರಗಳು ಕ್ರೈಸ್ತ ಶಾಸ್ತ್ರದಲ್ಲಿ ಹ್ಯಾಗೆಂತಾ ತೋರಿಸುತ್ತಾನೆ. ಈ ಪುಸ್ತಕವನ್ನು ಮನಸ್ಸು ಕೊಟ್ಟು ಓದುವವರು ಹ್ಯಾಗೂ ಒಳ್ಳೇ ಪ್ರಯೋಜನ ಹೊಂದ್ಯಾರು.)

ಭೂತವಿದ್ಯೆ. ಕ್ರಯ ೧ ಆಣೆ. (ಇಲ್ಲಿ ಅಲ್ಲಿ ಭೂತಸಂಚಾರ, ಭೂತಚೇಷ್ಟೆ ಮುಂತಾದ್ದು ಆಗುತ್ತದೆ ಎಂಬುವ ಕಥೆಗಳು ಹ್ಯಾಗೆ? ಅಂಥಾ ಕಥೆಗಳ ಮೇಲೆ ಇಲ್ಲಿ ಅಲ್ಲಿ ಭೂತಸ್ಥಾನಗಳಾಗಿ, ಭೂತ ಪೂಜೆಗಳು ನಡಿಯುವ ಮರ್ಯಾದೆ ಎಂಥಾ ಅವಿವೇಕದ ಕೆಲಸವೂ ಅನ್ಯಾಯವೂ ಎಂಬದು ಈ ಪುಸ್ತಕದ ಸಾರವಿಶೇಷವಾಗಿದೆ.)

ದೈವಪರೀಕ್ಷೆ. ಕ್ರಯ ೧ ಆಣೆ. (ಈ ಗ್ರಂಥವು ಉತ್ಕೃಷ್ಟವಾದವುಗಳಲ್ಲಿ ಒಂದು. ಕುರುಬನ ಕಥೆ ಬ್ರಾಹ್ಮಣನ ಕಥೆ, ಕೃಷ್ಣರಾಯರ ಕಾಲದಲ್ಲಿ ನಡೆದ ವಿವರ ಮೊದಲಾದ್ದರಲ್ಲಿ ಬಹು ಸಸಾರವಾದ ಸಂಗತಿಗಳು ಪುಷ್ಕಲವೇ.)

ಪರಮಾತ್ಮಜ್ಞಾನ. ಕ್ರಯ ೧ ಆಣೆ ೬ ಪೈ. (ತಮ್ಮ ಶಾಸ್ತ್ರಗಳನ್ನು ಓದಿಕೊಂಡಿರದೆ, ಕೋಣವಾದರೂ, ಅದು ತಮ್ಮೂರಿನದಾದ್ದರಿಂದ, ಕರು ಹಾಕಿರ ಬಹುದು ಎಂತ ನಂಬಿ, ಆ ಕರುವನ್ನು ಕಟ್ಟಿ ಹಾಕಲಿಕ್ಕೆ ಹೋಗುವವರಂತಾಗಿ, ಸುಮ್ಮನೆ ವೇದಾದಿಗಳ ಮಾತೆಂತ ಜೊಲ್ಲು ಮಾತನ್ನಾಡಿ, ಬೇರೆ ಶಾಸ್ತ್ರಗಳನ್ನು ಉಪೇಕ್ಷೆ ಮಾಡುವಂಥವರು ಈ ಗ್ರಂಥವನ್ನು ವಿಶೇಷವಾಗಿ ಓದಿಕೊಳ್ಳ ತಕ್ಕದಾಗಿದೆ.)

ಅದೃಷ್ಟವಾದಿಗಳು. ಕ್ರಯ ೩ ಪೈ. (ಕಥಾಪ್ರಸಂಗರೂಪವಾಗಿಯೂ ಸಂವಾದರೂಪವಾಗಿಯೂ ತರ್ಕರೂಪವಾಗಿಯೂ ಮನುಷ್ಯರೆಲ್ಲರ ಇಹಪರಗಳ ಗತಿಯ ವಿಚಾರದ್ದು ಈ ಪುಸ್ತಕದಲ್ಲಿ ಪ್ರಸ್ತಾಪವಾಗಿ, "ಭುಕ್ತಿ ಮುಕ್ತಿಯಲ್ಲಾ, ಮುಕ್ತಿ ಭುಕ್ತಿಯಲ್ಲಾ", "ತಾ ಬೂದಿ ಮುಕ್ಕುವವ ಪರರಿಗೆ ಹಿಟ್ಟು ಕೊಡಲಾರ" ಎಂಬ ನೀತಿಗೆ ಶೇರಿದಂಥಾದ್ದು ಕಾಣಿಸಿ ಅದೆ.)

ನೀತಿಬೋಧನೆಗಳು. ಕ್ರಯ ೯ ಪೈ. (ಇದು ವಾಗ್ರೂಪವಾಗಿಯೂ ಚಿತ್ರರೂಪವಾಗಿಯೂ ಕೆಲವು ನೀತಿಗಳನ್ನು ಬೋಧಿಸಿ ಕೊಡುವಂಥಾದ್ದು.)

ಪರ್ವತಪ್ರಸಂಗ. ಕ್ರಯ ೧ ಪೈ. (ಇದೊಂದು ದಿವ್ಯ ನೀತಿಪ್ರಸಂಗಸಾರವೇ.)

ಜ್ಞಾನಮಾರ್ಗಸೂಚನೆ. ಕ್ರಯ ೧ ಪೈ. (ಇದನ್ನು ಅನೇಕಾನೇಕರು ಕೊಂಡು ಕೊಂಡು, ಓದಿಕೊಂಡ ಚಿಕ್ಕ ಪುಸ್ತಕಮಣಿಯೇ.)

ಕರ್ಲ್ ಮೇರಿಕ್ ಧೊರೆಗಳ ಸಮಾಧೀ ಮುಂದೆ ಆದ ಪ್ರಸಂಗವು. ಕ್ರಯ ೧ ಪೈ.

ಜೀವಾಂತ್ಯಸ್ಮರಣೆ. ಕ್ರಯ ೨ ಪೈ. (ಸಂವಾದರೂಪವಾಗಿ ಅಂತ್ಯವನ್ನು ನೆನಸಿ ಕೊಳ್ಳುವ ಭಕ್ತಿಭಾವ ವಿವೇಕದ ಸುಫಲವು ಕಾಣಿಸಿದೆ.)

ರಕ್ಷಣೋಪಾಯವು. ಕ್ರಯ ೨ ಪೈ. (ಈ ಪುಸ್ತಕದಲ್ಲಿ ಬಹಳ ಬೋಧನಾಮೃತವು ಇರುತ್ತದೆ; ಆದರೆ ಭಾಷೆ ಸ್ವಲ್ಪ ಭಾರವಾಗಿರುತ್ತದೆ.)

ಸತ್ಯವಂದರೇನು? ಕ್ರಯ ೨ ಪೈ. (ಕೆಲವು ಮುಖ್ಯ ವಿಚಾರಗಳಿಗೆ ತಾಗುವ ವಚನಗಳು ಈ ಪುಸ್ತಕದಲ್ಲಿ ಸಂಗ್ರಹವಾಗಿವೆ.)

ದೇವರ ವಾಕ್ಯದ ವಚನಮಂಜರಿ. ಕ್ರಯ ೩ ಪೈ.

ದೇವರ ವಾಕ್ಯದ ವಚನಗಳ ರತ್ನಮಾಲೆ. ಕ್ರಯ ೨ ಆಣೆ. (ಇವೆರಡು ಪುಸ್ತಕಗಳು ಕ್ರೈಸ್ತ ಧರ್ಮಬೋಧಕ ವಾಕ್ಯಾಮೃತಕಲಶಗಳೋಪಾದಿಯೆಂಬ ಮಾತಿಗೆ ಸಂದೇಹವಿಲ್ಲಾ.)

ದೇವರ ವಾಕ್ಯದ ಬೋಧನೆಯ ಪ್ರಶ್ನೋತ್ತರಗಳು. ಕ್ರಯ ೬ ಪೈ.

ದೃಢೀಕರಣದ ಪ್ರಶ್ನೋತ್ತರಗಳು. ಕ್ರಯ ೬ ಪೈ. (ಇವೆರಡು ಪುಸ್ತಕಗಳು ಪ್ರಶ್ನೋತ್ತರ ರೂಪವಾಗಿ ರಚನೆಯಾಗಿ, ಸದ್ವೈದಿಕ ಶಾಸ್ತ್ರಾಭ್ಯಾಸಕ್ಕೆ ಒಳ್ಳೇ ಸಹಾಯಕವಾಗಿವೆ.)

ಹೃದಯದರ್ಪಣ. ಕ್ರಯ ೧ ಆಣೆ. (ಈ ಪುಸ್ತಕವೆಂಬ ಕನ್ನಡಿಯನ್ನು ನೋಡುವವನು ಅದರಲ್ಲಿ ತನ್ನ ಹೃದಯವನ್ನು, ಅಂದರೆ ತನ್ನ ಸ್ವರೂಪವನ್ನೂ, ತನ್ನ ಸ್ವಾಭಾವಿಕ ಗುಣವನ್ನೂ ನೋಡಿ, ತಿಳುಕೊಂಡು, ತನ್ನನ್ನು ತಿದ್ದಿಸಿ ಕೊಂಡು, ಉತ್ಕೃಷ್ಟನಾಗೋ ಮಾರ್ಗವನ್ನೂ ತಿಳುಕೊಳ್ಳ ಬಹುದು. ಬರೇ ಮುಖವನ್ನು ಕಾಣಿಸುವ ಕನ್ನಡಿ ಕೊಂಡುಕೊಂಡು, ನೋಡಲಿಕ್ಕೆ ಕಾರಣವಿದ್ದರೆ, ಈ ಕನ್ನಡಿಯನ್ನು ಕೊಂಡುಕೊಂಡು, ಪರಾಂಬರಿಸಿ ನೋಡಲಿಕ್ಕೆ ಎಷ್ಟೋ ಹೆಚ್ಚಿನ ನ್ಯಾಯವಿದ್ದೀತಲ್ಲವೋ?)

ಪ್ರಾರ್ಥನೆಗಳು. ಕ್ರಯ ೧ ಆಣೆ. (ಪ್ರಾರ್ಥನೆಗಿಂತ ಸಾಧನೆಯಿಲ್ಲಾ. ಈ ಪ್ರಾರ್ಥನೆಗಳನ್ನು ಮನಃಪೂರ್ವಕವಾಗಿ ಮಾಡುವವನು ಉತ್ತಮ ಫಲಸಿದ್ಧಿ ಪಡಕೊಂಡಾನು.)

ವಿಕೀರ್ಣಸುಭಾಷಿತಪ್ರಸಂಗಶತಕವು. ಕ್ರಯ ೧ ಆಣೆ. (ಈ ಗ್ರಂಥವು ಬೇರೆ ಬೇರೆ ವಿಚಾರಗಳಲ್ಲಿ ಬಹು ಉತ್ಕೃಷ್ಟವೇ. ಅದು ಅಂಥಾದ್ದೆಂದು ತಿಳಿದು, ಅನೇಕರು ಅದನ್ನು ಅಪೇಕ್ಷಿಸುವವರಾದ್ದರಿಂದ, ಅದನ್ನು ಮೂರು ಮಳೆಗಾಲದೊಳಗೆ ಎರಡು ಸಾರಿ ಛಾಪಿಸ ಬೇಕಾಯಿತು.)

ಕ್ರೈಸ್ತ ಗೀತಗಳು. ಕ್ರಯ ೪ ಆಣೆ.
ಕ್ರೈಸ್ತಧರ್ಮಬೋಧನೆ. ಕ್ರಯ ೧೨ ಆಣೆ.
(ಇವೆರಡು ಮುಖ್ಯವಾಗಿ ಕ್ರೈಸ್ತರಿಗಾಗಿ ರಚನೆಯಾದವು.)

ಪರಿಶುದ್ಧ ಚರಿತ್ರವು. ಕ್ರಯ ೧೪ ಆಣೆ.

ಕ್ರೈಸ್ತಸಭಾಪತ್ರವು. (ಮಾಸ ಮಾಸಕ್ಕೆ ಛಾಪೆಯಾಗಿ ಪ್ರಕಟವಾಗುವಂಥಾದ್ದು. ಒಂದು ಇಡೀ ವರ್ಷದ [೧೨] ಅಂಕೆಗಳ ಕ್ರಯ ೮ ಆಣೆ. ಭಕ್ತಿಭಾವಕವೂ ಜ್ಞಾನವರ್ಧಕವೂ ಆಗಿರುವ ಪ್ರಬಂಧಗಳೂ ಕಥಾಪ್ರಸಂಗಾದಿಗಳೂ ವಿವಿಧ ವರ್ತಮಾನಗಳೂ [ಅಂದರೆ ತಿಂಗಳು ತಿಂಗಳಿಗೆ ಲೋಕದಲ್ಲಿ ನಡಿಯುವ ಮುಖ್ಯ ಸಂಗತಿವಿಶೇಷಗಳ ವಿವರಸಂಗ್ರಹವು] ಅದರಲ್ಲಿ ಛಾಪೆಯಾಗುವದು.)

ಬಾಲಕರ ಗೀತಗಳು. ಕ್ರಯ ೪ ಆಣೆ.

ವಿಚಿತ್ರ ಅಕ್ಷರಗಳಲ್ಲಿ ಛಾಪೆಯಾದ ೩ ದೊಡ್ಡ ಹಾಳೆಗಳು. ಒಂದೊಂದರ ಕ್ರಯ ೨ ಆಣೆ. (ಇವುಗಳು ಚಿತ್ರಗಳಂತೆ ಮನೆಗಳಲ್ಲಿ ತೂಗ ಹಾಕಲಿಕ್ಕೆ ಉದ್ಯುಕ್ತವಾಗಿ, ಅವುಗಳಲ್ಲಿ ಛಾಪೆಯಾದ ವಾಕ್ಯಾದಿಗಳನ್ನು ನೆನಪು ಹುಟ್ಟಿಸಿ ಮನಸ್ಸಿಗೆ ಖಚಿತ ಮಾಡಲಿಕ್ಕೆ ತಕ್ಕವು.)

III. ಸಹವಾಸ, ಗೃಹಕೃತ್ಯ ಮುಂತಾದ್ದರ ಸಂಬಂಧವಾದ ಹಿತೋಪದೇಶಕ ಪುಸ್ತಕಾದಿಗಳು.

ಫಲಾರ ಅಥವಾ ಲಕ್ಷ್ಯಕ್ಕೆ ತಕ್ಕವಾದ್ದು. ಕ್ರಯ ೧ ಪೈ. (ಈ ಪುಸ್ತಕವು ಖರ್ಚುವೆಚ್ಚ ಮಾಡುವ ವಿಷಯದಲ್ಲಿಯೂ, ಕಾಲವನ್ನು ಒಳ್ಳೇ ಉಪಯೋಗ ಮಾಡುವ ವಿಷಯದಲ್ಲಿಯೂ ಬುದ್ಧಿ ಹೇಳಿ, ಕಟ್ಟಕಡೆಗೆ ಆಗುವಂಥಾದ್ದನ್ನು ನೆನಪು ಹುಟ್ಟಿಸಿ, ಒಳ್ಳೇ ಎಚ್ಚರ ಪಡಿಸುವಂಥಾದ್ದು.)

ಸುಕ್ಷೇಮಾಪೇಕ್ಷಾಪ್ರೇರಿತ ತರುಣಹಿತೋಪದೇಶ. ಕ್ರಯ ೩ ಪೈ. (ಈ ಪುಸ್ತಕವು ಅನೇಕ ತರುಣರನ್ನು [ಯೌವನಸ್ಥರನ್ನು] ಹಿಡಿದು ಕೊಂಡಂಥಾ ಕಾಮನೆಂಬ ರಾಕ್ಷಸನ ವಿಷಯದಲ್ಲಿ ಎಚ್ಚರಿಸಿ, ಅವನ ಜಾಲದಲ್ಲಿ ಶಿಕ್ಕಿ ಬಿದ್ದವರಿಗೆ ತಪ್ಪಿಸಿ ಕೊಂಬುವ ಮಾರ್ಗವನ್ನು ತೋರಿಸಿ ಕೊಡುತ್ತದೆ.)

ದಾಂಪತ್ಯಸ್ಥಿತಿಯನ್ನು ಕುರಿತಾದ ಗ್ರಂಥತ್ರಯ. ಕ್ರಯ ೧ ಆಣೆ ೩ ಪೈ. ಅದರ ಪ್ರಥಮ ಗ್ರಂಥವು ವಿವಾಹವನ್ನು ಕುರಿತಾದ್ದು. ಕ್ರಯ ೯ ಪೈ. (ಮದುವೇ ಪ್ರಸ್ತವೂ ಅದಕ್ಕೆ ಬೇಕಾದ ಸೌರಣೆ ಇತ್ಯಾದಿಗಳೂ, "ಹನುಮಂತನ ಹಿಂದೆ ಬಾಲ" ಎಂಬಂತೆ ಬಹುಶಾ ಲಗ್ನದ ಹಿಂದೆ ಉಳಿಯುವ ಸಾಲದ ಸಂಬಂಧದ್ದೂ ಈ ಪುಸ್ತಕದಲ್ಲಿ ಬಹಳ ಯುಕ್ತವಾಗಿಯೂ ಸರಸವಾಗಿಯೂ ವರ್ಣಿಸಿ ಕೊಟ್ಟ ಮೇಲೆ ವಿಚಾರಬುದ್ಧಿಗೆ ಉಚಿತವಾದ ವಿವಾಹ ಹ್ಯಾಗೆಂಬದೂ ಸಂಕ್ಷೇಪದಲ್ಲಿ ತೋರಿಸಿ ಕೊಟ್ಟದೆ.)

ದ್ವಿತೀಯ ಗ್ರಂಥವು ಗೃಹಸ್ಥಾಶ್ರಮಧರ್ಮದ ವಿಷಯವಾದ್ದು. ಕ್ರಯ ೩ ಪೈ. (ಇದರಲ್ಲಿ ಸಂಸಾರವೆಂಬದು ದುಸ್ಸಾರವಾಗದೆ, ಚತುರ್ವಿಧ ಪುರುಷಾರ್ಥಕ್ಕೆ ಉತ್ಕೃಷ್ಟ ಸಹಾಯಕವೇ ಆಗುವಂತೆ, ಗಂಡ ಹೆಂಡರು ಒಬ್ಬರ ಕಡೆಗೊಬ್ಬರು ಹ್ಯಾಗಿರ ಬೇಕೆಂದು ಪ್ರಸ್ತಾಪಿಸಿ ತೋರಿಸಿ ಅದೆ.)

ತ್ರಿತೀಯ ಗ್ರಂಥವು ಹೆತ್ತವರಿಗೂ ಮಕ್ಕಳಿಗೂ ಇರುವ ಪರಸ್ಪರ ಧರ್ಮವನ್ನು ಕುರಿತಾದ್ದು. ಕ್ರಯ ೩ ಪೈ. (ಈ ಮೂರನೇ ಪುಸ್ತಕ ಸಹಾ ಎರಡನೇದರಷ್ಟು ಸರ್ವಜನ ಹಿತವಾದ ನೀತ್ಯುಪದೇಶವುಳ್ಳದಾಗಿ, ಸಕಲರು ಪ್ರಯಾಸವಿಲ್ಲದೆ ಓದಿ ತಿಳಿಯುವಂತೆ ಬಹು ಸುಲಭ ಅಂದದಲ್ಲಿ ರಚಿತವಾಗಿದೆ.)

ವಿದ್ಯಾಸಾಫಲ್ಯಸೂಚಕವಾದ ಉಪದೇಶಸಾರವು. ಕ್ರಯ ೨ ಪೈ. (ಈ ಪುಸ್ತಕವು ವಿದ್ಯಾಸಕ್ತರೆಲ್ಲರ ಪರಾಂಬರಿಕೆಗೆ ಅತಿ ಯೋಗ್ಯವೆ.)

ಸಂಸಾರಕ್ರಮಗಳ ಪುಸ್ತಕವು. ಕ್ರಯ ೪ ಪೈ. (ದಾಂಪತ್ಯಸ್ಥಿತಿಯನ್ನು ಕುರಿತಾದ ಗ್ರಂಥತ್ರಯವು ಹ್ಯಾಗೋ ಹಾಗೆಯೇ ಈ ಪುಸ್ತಕವೂ ಎಲ್ಲಾ ಗೃಹಸ್ಥರ ಕೈಯಲ್ಲಿರ ತಕ್ಕದು. ಆನೆ ಕೊಡಬೇಕಾದರೂ, ಇವನ್ನು ಕೊಂಡುಕೊಳ್ಳ ಬೇಕಿತ್ತು.)

ಯಮುನಾಬಾಯಿಯ ಸಂಚಾರ. ಕ್ರಯ ೧ ಆಣೆ ೯ ಪೈ. (ಈ ಪುಸ್ತಕದಲ್ಲಿ ಬಹು ಹೃದ್ಗತ್ಯವಾದ ಸಂಗತಿಗಳ ವಿವರವು ಹೇರಳವುಂಟು. ವಿಶೇಷವಾಗಿ ಸ್ತ್ರೀಯರಿಗೂ ಅದರ ಪಠನ ಬಹಳ ಹಿತವಾದೀತು.)

ಪಂಚಾಂಗವು. ಕ್ರಯ ೨ ಆಣೆ. (ಇಸ್ವಿ ಇಸ್ವಿಗೆ ಒಂದು ಛಾಪೆಯಾಗುವಂಥಾದ್ದು. ಸರ್ವಜನ ಹಿತವಾದ ನಾನಾ ವಿವರಗಳು ಅದರಲ್ಲಿದ್ಧಾವೆ. ಈ ಪಂಚಾಂಗವನ್ನು ಇಷ್ಟರಿಷ್ಟರಿಗೆ ಹೇಳಿ ದೊರಕಿಸ ತಕ್ಕದು.)

☞ ಹಿಂದೆ ಪ್ರಸ್ತಾಪವಾಗಿ ಕಾಣಿಸಿರುವ ಪುಸ್ತಕಾದಿಗಳಲ್ಲಿ ಯಾರಿಗಾದರೂ ಒಂದೆರಡು ಆಗಲಿ, ನಾಲ್ಕೈದಾಗಲಿ ಬೇಕಾದ ಪಕ್ಷಕ್ಕೆ ಮಂಗಳೂರ ಮಿಶ್ಯನ್ ಪುಸ್ತಕಖಾನೆಗೆ (Basel Mission Book & Tract Depository) ಟಪ್ಪಾಲಿನಲ್ಲಿ ಟಪ್ಪಾಲಿನ ಚೀಟುಗಳನ್ನು (ಪೋಸ್ಟ್ ಸ್ಟಾಂಪುಗಳನ್ನು) ರವಾನೆ ಮಾಡಿದರೆ, ಹೆಚ್ಚಿನ ತಡವೇನೂ ಆಗದೆ ಬೇಕಾದಷ್ಟು ಈಸಿಕೊಳ್ಳ ಬಹುದು. ಬೂಕ್ ಟಪ್ಪಾಲಿನಲ್ಲಿ ೧ ಆಣೆ ದಸ್ತೂರಿಗೆ ಒಂದು ಇಡೀ ಕಾಲುರಾತಲು ರವಾನೆ ಮಾಡಿಸ ಬಹುದು. ಹೀಗಿರಲಾಗಿ ಬೇಕಾದ ಪುಸ್ತಕದ (ಅಥವಾ ಪುಸ್ತಕಗಳ) ಕ್ರಯಕ್ಕೆ ಟಪ್ಪಾಲಿನ ದಸ್ತೂರಿ ಕೂಡಿಸಿ ಕಳುಹಿಸಿದರೆ ಸೈ. ದೃಷ್ಟಾಂತಕ್ಕೆ: ಯಾರಿಗಾದರೂ "ದಾಂಪತ್ಯಸ್ಥಿತಿಯನ್ನು ಕುರಿತಾದ ಗ್ರಂಥತ್ರಯವೂ" "ವಿದ್ಯಾಸಾಫಲ್ಯಸೂಚಕವಾದ ಉಪದೇಶಸಾರವೂ"

"ಫಲಾರ" ಎಂಬೀ ೫ ಪುಸ್ತಕಗಳು ಬೇಕಾದ ಪಕ್ಷಕ್ಕೆ ಅವುಗಳ ಕ್ರಯಕ್ಕೆ (ಅಂದರೆ ೧ ಆಣೆ ೬ ಪೈಗೆ) ಒಂದಾಣೆ ದಸ್ತೂರಿಗೆಂತ ಕೂಡಿಸಿ, ಹಾಗಾದರೆ ೨ ಆಣೆ ೬ ಪೈ ಕಳುಹಿಸಿದರೆ, ನಾವು ಸದರಿ ಐದು ಪುಸ್ತಕಗಳನ್ನು ರವಾನೆ ಮಾಡಿಸಿ, ಮುಟ್ಟಿಸ್ಯೇವು. ನಮಗೆ ರವಾನೆಯಾದ ಹಣ ಜಾಸ್ತಿಯಾಗಿದ್ದು, ಬಾಕಿ ಉಳಿಯುವ ಪಕ್ಷದಲ್ಲಿ ನಾವು ಆ ಬಾಕಿಗೆ ಸರಿಯಾದ ಕ್ರಯದ ಪುಸ್ತಕ ಕೂಡಿಸಿ ಕಳುಹಿಸುತ್ತೇವೆ. ರವಾನೆಯಾದ ಹಣವು ಸಾಲದ ಪಕ್ಷದಲ್ಲಿ ನಾವು ಹಣದ ಕಡಿಮೆಯಷ್ಟು ಪುಸ್ತಕ ಕಡಿಮೆ ಮಾಡಿ ಕಳುಹಿಸ್ಯೇವು. ಹ್ಯಾಗಾದರೂ ಪುಸ್ತಕಾಪೇಕ್ಷಕರಿಗೆ ಸಂತೋಷವಾಗುವಂತೆ ನೋಡಿ, ಹಂಚಿಕೆ ಮಾಡ್ಯೇವು.



೨೮, ೨೯, ೩೦, ೩೧ ದಿವಸಗಳಿರುವ ಪ್ರತಿ ತಿಂಗಳಿಗೆ ೧ ರೂಪಾಯಿಯಿಂದ ೫೦೦ ರೂಪಾಯಿ ವರೆಗೆ ಸಂಬ್ಬಳ ಇರುವವರಿಗೆ ಪ್ರತಿ ಒಂದು ದಿವಸಕ್ಕೆ ಏನು ಬೀಳುತ್ತದೆಂಬದನ್ನು ತೋರಿಸುವ ಪಟ್ಟಿ.

ತಿಂಗಳಿನ ಸಂಬಳ.	೨೮ ದಿವಸಗಳ ತಿಂಗಳು.			೨೯ ದಿವಸಗಳ ತಿಂಗಳು.			೩೦ ದಿವಸಗಳ ತಿಂಗಳು.			೩೧ ದಿವಸಗಳ ತಿಂಗಳು.		
ರೂ.	ರೂ.	ಆ.	ಪೈ.	ರೂ.	ಆ.	ಪೈ.	ರೂ.	ಆ.	ಪೈ.	ರೂ.	ಆ.	ಪೈ.
೧	೦	೦	೭	೦	೦	೭	೦	೦	೬	೦	೦	೬
೨	೦	೧	೨	೦	೧	೧	೦	೧	೧	೦	೧	೦
೩	೦	೧	೯	೦	೧	೮	೦	೧	೭	೦	೧	೭
೪	೦	೨	೩	೦	೨	೨	೦	೨	೨	೦	೨	೧
೫	೦	೨	೧೦	೦	೨	೯	೦	೨	೮	೦	೨	೭
೬	೦	೩	೫	೦	೩	೪	೦	೩	೨	೦	೩	೧
೭	೦	೪	೦	೦	೩	೧೦	೦	೩	೯	೦	೩	೭
೮	೦	೪	೭	೦	೪	೫	೦	೪	೩	೦	೪	೨
೯	೦	೫	೨	೦	೫	೦	೦	೪	೧೦	೦	೪	೮
೧೦	೦	೫	೯	೦	೫	೬	೦	೫	೪	೦	೫	೨
೧೧	೦	೬	೩	೦	೬	೧	೦	೫	೧೦	೦	೫	೮
೧೨	೦	೬	೧೦	೦	೬	೭	೦	೬	೫	೦	೬	೨
೧೩	೦	೭	೫	೦	೭	೨	೦	೬	೧೧	೦	೬	೯
೧೪	೦	೮	೦	೦	೭	೯	೦	೭	೬	೦	೭	೩
೧೫	೦	೮	೭	೦	೮	೩	೦	೮	೦	೦	೭	೯
೧೬	೦	೯	೨	೦	೮	೧೦	೦	೮	೬	೦	೮	೩
೧೭	೦	೯	೯	೦	೯	೫	೦	೯	೧	೦	೮	೯
೧೮	೦	೧೦	೩	೦	೯	೧೧	೦	೯	೭	೦	೯	೩
೧೯	೦	೧೦	೧೦	೦	೧೦	೬	೦	೧೦	೨	೦	೯	೧೦
೨೦	೦	೧೧	೫	೦	೧೧	೦	೦	೧೦	೮	೦	೧೦	೪
೨೧	೦	೧೨	೦	೦	೧೧	೭	೦	೧೧	೨	೦	೧೦	೧೦
೨೨	೦	೧೨	೭	೦	೧೨	೨	೦	೧೧	೯	೦	೧೧	೪
೨೩	೦	೧೩	೨	೦	೧೨	೮	೦	೧೨	೩	೦	೧೧	೧೦
೨೪	೦	೧೩	೯	೦	೧೩	೩	೦	೧೨	೧೦	೦	೧೨	೫
೨೫	೦	೧೪	೩	೦	೧೩	೧೦	೦	೧೩	೪	೦	೧೨	೧೧
೨೬	೦	೧೪	೧೦	೦	೧೪	೪	೦	೧೩	೧೦	೦	೧೩	೫
೨೭	೦	೧೫	೫	೦	೧೪	೧೧	೦	೧೪	೫	೦	೧೩	೧೧
೨೮	೧	೦	೦	೦	೧೫	೫	೦	೧೪	೧೧	೦	೧೪	೫
೨೯	೧	೦	೭	೧	೦	೦	೦	೧೫	೬	೦	೧೫	೦
೩೦	೧	೧	೨	೧	೦	೭	೧	೦	೦	೦	೧೫	೬
೩೧	೧	೧	೯	೧	೧	೧	೧	೦	೬	೧	೦	೦
೩೨	೧	೨	೩	೧	೧	೮	೧	೧	೧	೧	೦	೬
೩೩	೧	೨	೧೦	೧	೨	೨	೧	೧	೭	೧	೧	೦
೩೪	೧	೩	೫	೧	೨	೯	೧	೨	೨	೧	೧	೭
೩೫	೧	೪	೦	೧	೩	೪	೧	೨	೮	೧	೨	೧
೩೬	೧	೪	೭	೧	೩	೧೦	೧	೩	೨	೧	೨	೭
೩೭	೧	೫	೨	೧	೪	೫	೧	೩	೯	೧	೩	೧
೩೮	೧	೫	೯	೧	೫	೦	೧	೪	೩	೧	೩	೭
೩೯	೧	೬	೩	೧	೫	೬	೧	೪	೧೦	೧	೪	೧
೪೦	೧	೬	೧೦	೧	೬	೧	೧	೫	೪	೧	೪	೭
೪೧	೧	೭	೫	೧	೬	೭	೧	೫	೧೦	೧	೫	೨
೪೨	೧	೮	೦	೧	೭	೨	೧	೬	೫	೧	೫	೮
೪೩	೧	೮	೭	೧	೭	೯	೧	೬	೧೧	೧	೬	೨
೪೪	೧	೯	೨	೧	೮	೩	೧	೭	೬	೧	೬	೯
೪೫	೧	೯	೯	೧	೮	೧೦	೧	೮	೦	೧	೭	೩
೪೬	೧	೧೦	೩	೧	೯	೫	೧	೮	೬	೧	೭	೯
೪೭	೧	೧೦	೧೦	೧	೯	೧೧	೧	೯	೧	೧	೮	೩
೪೮	೧	೧೧	೫	೧	೧೦	೬	೧	೯	೭	೧	೮	೯
೪೯	೧	೧೨	೦	೧	೧೧	೦	೧	೧೦	೨	೧	೯	೩
೫೦	೧	೧೨	೭	೧	೧೧	೭	೧	೧೦	೮	೧	೯	೧೦
೧೦೦	೩	೯	೨	೩	೭	೨	೩	೫	೪	೩	೩	೭
೨೦೦	೭	೨	೩	೬	೧೪	೪	೬	೧೦	೮	೬	೭	೩
೩೦೦	೧೦	೧೧	೫	೧೦	೫	೬	೧೦	೦	೦	೯	೧೦	೧೦
೪೦೦	೧೪	೪	೭	೧೩	೧೨	೮	೧೩	೫	೪	೧೨	೧೪	೫
೫೦೦	೧೭	೧೩	೯	೧೭	೩	೧೦	೧೬	೧೦	೮	೧೬	೨	೧

The Canarese Almanac 1877

ಕಂನಡ

ಪಂಚಾಂಗವು

☛ ಕ್ರಿಸ್ತಶಕ ೧೮೭೭ ☚

ಹಿಂದು:

ಶಾಲಿವಾಹನ ಶಕ ೧೭೯೮—೧೭೯೯
ಧಾತು ಸಂವತ್ಸರದ ಅಂತ್ಯ, ಈಶ್ವರ ಸಂವತ್ಸರದ ಆದಿ
ವಿಕ್ರಮಾದಿತ್ಯನ ಶಕ ೧೯೩೩—೧೯೩೪
ಕೊಲ್ಲಂ ೧೦೫೨—೧೦೫೩

ಮಹಮ್ಮದಿ:

ಹಿಜರಿ ೧೨೯೩—೧೨೯೪
ಫಸಲಿ ೧೨೮೬—೧೨೮೭

MANGALORE
PRINTED BY STOLZ & HIRNER, BASEL MISSION PRESS